ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 43 | ಆಗಸ್ಟ್ 5 ಶುಕ್ರವಾರ 2022


ಸಂಪುಟ: 43 | ಸಂಚಿಕೆ: 111 | ಪುಟಗಳು: 10 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ವರಮಹಾಲಕ್ಷ್ಮಿ ವ್ರತಕ್ಕೆ ಮೈಸೂರಲ್ಲಿ ಸಂಭ್ರಮದ ಸಿದ್ಧತೆ: ಗಗನಕ್ಕೇರಿದೆ ಹೂ, ಹಣ್ಣುಗಳ ಬೆಲೆ



ಮೈಸೂರು, ಆ. 4(ಆರ್‌ಕೆ)–ಶುಕ್ರವಾರ (ಆ.5) ವರಮಹಾಲಕ್ಷ್ಮಿ ಹಬ್ಬಕ್ಕೆ ಮೈಸೂರಲ್ಲಿ ಸಡಗರದ ಸಿದ್ಧತೆ ನಡೆಸಲಾಗಿದೆ.

ಮನೆ ಮನೆಗಳಲ್ಲಿ ವರಮಹಾಲಕ್ಷ್ಮಿ ಪೂಜೆಗಾಗಿ ಗುರುವಾರ ಮಳೆಯ ನಡುವೆಯೂ ಮಹಿಳೆಯರು ಹೂ, ಹಣ್ಣು, ಸಿಹಿ –ತಿನಿಸು, ಪೂಜಾ ಸಾಮಗ್ರಿ ಖರೀದಿಸಿದರು. ದೇವರಾಜ ಮಾರುಕಟ್ಟೆ, ಎಪಿಎಂಸಿ ತರಕಾರಿ ಮಾರುಕಟ್ಟೆಯಲ್ಲದೆ, ಜೆ.ಕೆ. ಮೈದಾನದ ಬಳಿ, ಮಾತೃ ಮಂಡಳಿ ಸರ್ಕಲ್, ಅಗ್ರಹಾರ ಸರ್ಕಲ್, ಹೆಬ್ಬಾಳು ಮುಖ್ಯ ರಸ್ತೆ, ಸೂರ್ಯ ಬೇಕರಿ ಸರ್ಕಲ್, ರಾಮಕೃಷ್ಣನಗರ ಸರ್ಕಲ್ ಸೇರಿದಂತೆ ಮೈಸೂರಿನ ಹಲವೆಡೆ ಹೂ, ಹಣ್ಣು ಬಾಳೆ ಕಂದು, ಮಾವಿನ ಸೊಪ್ಪು, ಪೂಜಾ ಸಾಮಗ್ರಿಗಳ ಭರ್ಜರಿ ವ್ಯಾಪಾರ ನಡೆಯಿತು.

ಸೇವಂತಿಗೆ, ಚೆಂಡು ಹೂ, ಮಲ್ಲಿಗೆ, ಕನಕಾಂಬರ, ಕಾಕಡ ಹೂಗಳ ಬೆಲೆ ಗಗನಕ್ಕೇರಿದ್ದು, ಒಂದು ಮಾರು ಹೂಗೆ 90ರಿಂದ 130ರೂ.ವರೆಗೆ ಮಾರಾಟವಾಗುತ್ತಿದ್ದು, ಒಂದು ತಾವರೆ ಹೂ 50 ರೂ.ಗೆ ಮಾರಾಟವಾಗುತ್ತಿತ್ತು.

ಉಳಿದಂತೆ ಸೇಬು, ಮೂಸಂಬಿ, ಕಿತ್ತಲೆ, ದ್ರಾಕ್ಷಿ, ಸಪೋಟ, ದಾಳಿಂಬೆ ಸೇರಿದಂತೆ ಹಣ್ಣುಗಳ ಬೆಲೆ ಏರಿದ್ದರೂ ವರಮಹಾಲಕ್ಷ್ಮೀ ಹಬ್ಬಕ್ಕೆ 9 ಬಗೆಯ ಹಣ್ಣುಗಳನ್ನು ಖರೀದಿಸುತ್ತಿದ್ದ ಜನರು, ತರಕಾರಿ, ಪೂಜಾ ಸಾಮಗ್ರಿ ಖರೀದಿಯೂ ಜೋರಾಗಿತ್ತು.

ಅದೇ ರೀತಿ ಹೊಸ ಬಟ್ಟೆ, ಸೀರೆ ಖರೀದಿಸಲು ಮಹಿಳೆಯರು ಅಂಗಡಿಗಳಿಗೆ ಮುಗಿ ಬೀಳುತ್ತಿದ್ದರು. ಡಿ.ದೇವರಾಜ ಅರಸು ರಸ್ತೆ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಓಲ್ಡ್ ಬ್ಯಾಂಕ್ ರಸ್ತೆ, ಮಕ್ಕಾಜಿ ಚೌಕ, ಗಾಂಧಿ ಚೌಕಗಳಲ್ಲಿನ ಸೀರೆ ಅಂಗಡಿಗಳಲ್ಲಿ ಮಂಗಳವಾರದಿಂದಲೇ ಸೀರೆ ಖರೀದಿಸಲು ಮಹಿಳೆಯರು ಮುಗಿ ಬೀಳುತ್ತಿದ್ದರು. ಸ್ವೀಟ್ ಅಂಗಡಿ, ಆಭರಣ ಅಂಗಡಿಗಳಲ್ಲೂ ವ್ಯಾಪಾರ ಜೋರಾಗಿದ್ದುದು ಕಂಡು ಬಂದಿತು. ಮನೆಗಳಲ್ಲಿ ಮಹಾಲಕ್ಷ್ಮಿಗೆ ಸೀರೆ, ಚಿನ್ನಾಭರಣಗಳಿಂದ ಅಲಂಕಾರ ಮಾಡಿ ಬಹು ಬೀಜವುಳ್ಳ ಹಣ್ಣು, ಬಹು ದಳದ ಹೂ, ಸಿಹಿ ತಿಂಡಿ–ತಿನಿಸುಗಳನ್ನು ಸಮರ್ಪಿಸುವ ಮೂಲಕ ದೇವರ ಮುಂದೆ ಹಣ, ಆಭರಣವನ್ನಿರಿಸಿ ಪೂಜೆ ಸಲ್ಲಿಸಿ ಮನೆಗೆ ಲಕ್ಷ್ಮೀಯನ್ನು ಬರಮಾಡಿಕೊಳ್ಳುವ ಮಹಿಳೆಯರು, ಅಕ್ಕಪಕ್ಕದ ಮನೆಯ ಮುತ್ತೈದೆಯರನ್ನು ಕರೆದು ಬಳೆ, ಕುಂಕುಮ ನೀಡಿ ಸತ್ಕರಿಸುವ ಸಂಪ್ರದಾಯ ಅನಾದಿ ಕಾಲದಿಂದ ನಡೆದುಕೊಂಡು ಬಂದಿದೆ.

ಮಳೆ ನಡುವೆಯೂ ಜನರು ಪೂಜಾ ಸಾಮಗ್ರಿ ಖರೀದಿಸುತ್ತಿದ್ದರಲ್ಲದೆ ಬ್ಯಾಂಗಲ್ ಸ್ಟೋರ್‌ಗಳಲ್ಲಿ ಅಲಂಕಾರಿಕ ವಸ್ತು ಖರೀದಿಗೂ ಮುಗಿಬೀಳುತ್ತಿದ್ದರು. ಮೈಸೂರಿನ ಕೆಎಸ್‌ಐಸಿ ಅಂಗಡಿ ಮಳಿಗೆಗಳಲ್ಲಿ ಕಳೆದ ಒಂದು ವಾರದಿಂದ ಸಿಲ್ಕ್ ಸೀರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಿವೆ.

ಲಯನ್ಸ್ ಸಂಸ್ಥೆ ಗೋಲ್ಡನ್ ಸಿಟಿಯಿಂದ ಯುವಕನಿಗೆ ಕೃತಕ ಕಾಲು ಜೋಡಣೆ



ಮೈಸೂರು, ಆ.4(ಆರ್‌ಕೆಬಿ)–ನಾಲ್ಕು ವರ್ಷಗಳಿಂದ ಅಂಗ ವೈಫಲ್ಯದಿಂದ ಬಳಲುತ್ತಿದ್ದ ಮೈಸೂರಿನ ಗಾಯತ್ರಿಪುರಂ ನಿವಾಸಿ ಆದರ್ಶ್ ಎಂಬ ಯುವಕನಿಗೆ ಮೈಸೂರಿನ ಲಯನ್ಸ್‌ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ವತಿಯಿಂದ ಕೃತಕ ಕಾಲು ಜೋಡಿಸಲಾಯಿತು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸರಳ ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಎಂ.ಸಿ.ಬನ್ನಾಲಿ ಅವರ ಸಹಯೋಗದಲ್ಲಿ ಯುವಕ ಆದರ್ಶ್‌ಗೆ ಕೃತಕ ಕಾಲು ಜೋಡಿಸಿ, ಬಳಿಕ ಆತನ ಮತ್ತೊಂದು ಕಾಲಿನ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಡಲಾಗುವುದು ಎಂದು ಸಂಸ್ಥೆಯ ಕಾರ್ಯದರ್ಶಿ ಎಸ್.ಪ್ರಮೀಳಾ ತಿಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪುಣ್ಯಸ್ಮರಣೆ ಅಂಗವಾಗಿ ಈ ಸೇವಾ ಕಾರ್ಯ ಕೈಗೊಂಡಿದ್ದು, ಮುಂದೆಯೂ ಹೆಚ್ಚು ಜನರಿಗೆ ಕೃತಕ ಕಾಲು, ಕೈ ಇನ್ನಿತರೆ ಸಮಸ್ಯೆ ಇರುವವರಿಗೆ ಉಚಿತ ಸೇವೆ ನೀಡಲಾಗುವುದು. ಕೃತಕ ಕಾಲಿನ ಅವಶ್ಯಕತೆ ಇದ್ದವರು ಸಂಸ್ಥೆಯ ಅಧ್ಯಕ್ಷ ಟಿ.ಸುರೇಶ್ – 9886166243, ಕಾರ್ಯದರ್ಶಿ– ಎಸ್.ಪ್ರಮೀಳಾ– 9845284727 ಅನ್ನು ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಭೂಸೇನೆಯ ಜೂನಿಯರ್ ಕಮಿಷನರ್ ರಘುಕುಮಾರ್, ಸಂಸ್ಥೆಯ ಅಧ್ಯಕ್ಷ ಟಿ.ಸುರೇಶ್, ಪರಿಸರವಾದಿ ಭಾನು ಮೋಹನ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್ ಇನ್ನಿತರರಿದ್ದರು.

ಹಿಂದೂಸ್ಥಾನ್ ಕಾಲೇಜಿನಲ್ಲಿ ಪ್ಲೇಸ್‌ಮೆಂಟ್ ಡ್ರೈವ್



ಮೈಸೂರು, ಆ.4(ಆರ್‌ಕೆಬಿ)– ಮೈಸೂರಿನ ಹಿಂದೂಸ್ಥಾನ್ ಕಾಲೇಜಿನಲ್ಲಿ ಟ್ರೈನಿಂಗ್ ಅಂಡ್ ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಆ.10ರಂದು ಬೆಳಗ್ಗೆ 8.30ರಿಂದ ಸಂಜೆ 5.30ರವರೆಗೆ ದೊಡ್ಡ ಮಟ್ಟದಲ್ಲಿ ಪೂಲ್ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಉಪನ್ಯಾಸಕ ಟಿ.ಎಸ್.ರಾಘವೇಂದ್ರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಪ್ರೋ, ಎಕ್ಸೆಲ್ ಸಾಫ್ಟ್, ಕಾಗ್ನಿಜೆಂಟ್, ಜಸ್ಟ್ ಡಯಲ್, ಪಿರಾಮಲ್, ಹೆಚ್‌ಬಿಡಿ ಇನ್ನಿತರೆ ಸುಮಾರು 15 ಸಂಸ್ಥೆಗಳು ಇದರಲ್ಲಿ ಭಾಗವಹಿಸಲಿವೆ. ಪ್ರಸ್ತುತ ಶೈಕ್ಷಣಿಕ ವರ್ಷದ ಅಂತಿಮ ಚಾತುರ್ಮಾಸದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಸ್ನಾತಕ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಗೂ 2018, 19, 20 ಮತ್ತು 21ರ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್‌ನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಆಸಕ್ತ ಅರ್ಹ ವಿದ್ಯಾರ್ಥಿಗಳು ತಮ್ಮ ಸ್ವ–ವಿವರ ಕನಿಷ್ಠ 10 ಪ್ರತಿಯೊಂದಿಗೆ ಇತರೆ ದಾಖಲಾತಿಗಳು ಹಾಗೂ 10 ಪಾಸ್‌ಪೋರ್ಟ್ ಅಳತೆಯ ಫೋಟೋಗಳು ಹಾಗೂ ವಿಳಾಸ ದೃಢೀಕರಣ ಪತ್ರದೊಂದಿಗೆ ಉಚಿತವಾಗಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದರು.

ಮೈಸೂರು ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದು ಪ್ರಸ್ತುತ ಮೈಸೂರಿನ ಜೆ.ಪಿ. ನಗರದಲ್ಲಿರುವ ಹಿಂದೂಸ್ಥಾನ್ ಕಾಲೇಜು ಬಿಕಾಂ, ಬಿಸಿಎ ಮತ್ತು ವಿಶೇಷ ಕೋರ್ಸ್ ಆದ ಬಿಬಿಎ (ಏವಿಯೇಷನ್ ಮ್ಯಾನೇಜ್‌ಮೆಂಟ್) ಪದವಿ ಕೋರ್ಸ್‌ಗಳನ್ನು ಹೊಂದಿದೆ. 2020–21ನೇ ಸಾಲಿನಲ್ಲಿ ಈ ಕಾಲೇಜು ಎರಡು ಪ್ರಶಸ್ತಿಗಳನ್ನು ಪಡೆದಿರುತ್ತದೆ ಎಂದೂ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಸಹ ಶಿಕ್ಷಕರಾದ ಟಿ.ಕೆ.ದಿವಾಕರ್, ಪುನೀತ್, ಮೋಹನ್‌ಕುಮಾರ್, ವಿ.ಈಶ್ವರ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಇಂದಿನಿಂದ ಮೂರು ದಿನಗಳ ನವೋದ್ಯಮ ಸಮಾವೇಶ



ಮೈಸೂರು, ಆ.4(ಆರ್‌ಕೆಬಿ)–ಮೈಸೂರಿನಲ್ಲಿ 'ಮೈಸೂರು ಸ್ಟಾರ್ಟ್‌ಅಪ್ ಪೆವಿಲಿಯನ್' ಮೂರು ದಿನಗಳ ನವೋದ್ಯಮ ಸಮಾವೇಶವನ್ನು ಆ.5ರಿಂದ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸ್ಟಾರ್ಟ್‌ಅಪ್ ಉದ್ಯಮ ಸಲಹೆಗಾರ ಬಿ.ಶಿವಶಂಕರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಸಮಾವೇಶದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಶೇ.80ರಷ್ಟು ಉದ್ದಿಮೆಗಳು ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿಯೇ ಕೇಂದ್ರೀಕೃತವಾಗಿವೆ. ಇದರಿಂದ ರಾಷ್ಟ್ರದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡಲಾಗುತ್ತಿಲ್ಲ. ಮೈಸೂರಿನಂತಹ ನಗರಗಳಿಂದಲೂ ಹೊಸ ನವೋದ್ಯಮ ಅಲೆ ಬರಬೇಕಾಗಿದೆ. ದೇಶ ಕಟ್ಟಬೇಕಾದರೆ ನವೋದ್ಯಮ ಉಳಿಯಬೇಕು. ಹಾಗಾಗಿ ಮೈಸೂರಿನಲ್ಲಿ ಆರಂಭಿಸಬೇಕಾಗಿದೆ ಎಂದು ಹೇಳಿದರು.

ಹಾಗಾಗಿ ಮೈಸೂರಿನಂತಹ ಕಡೆಗಳಲ್ಲಿ ಯಾವ ರೀತಿ ಸ್ಟಾರ್ಟ್‌ಅಪ್ ಸೂಕ್ತ ಹಾಗೂ ಇದಕ್ಕೆ ಬೇಕಾದ ಮಾರ್ಗದರ್ಶನಗಳೇನು ಎಂಬ ನಿಟ್ಟಿನಲ್ಲಿ ಈ ಸಮಾವೇಶ ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿ ನಡೆಯಲಿರುವ ಮೂರು ದಿನಗಳ ಈ ನವೋದ್ಯಮ ಸಮಾವೇಶದಲ್ಲಿ ಆ.5ರಂದು ಬೆಳಗ್ಗೆ 9.30 ಗಂಟೆಗೆ ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಮೂಲಕ ಮಾತನಾಡಲಿದ್ದಾರೆ. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರವಿಶಂಕರ್, ಯಶವಂತ್, ಮಹೇಶ್ ಕಟ್ಟಾಳೆ, ಪ್ರಜ್ವಲ್ ಉಪಸ್ಥಿತರಿದ್ದರು.

ಮೈಸೂರು–ಬೆಂಗಳೂರು ರೈಲು ಸಂಚಾರ ಅಬಾಧಿತ

ಮೈಸೂರು, ಆ.4– ಭಾರೀ ಮಳೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದ ಮೈಸೂರು–ಬೆಂಗಳೂರು ಮಾರ್ಗದ ರೈಲು ಸಂಚಾರವನ್ನು ಪುನಾರಂಭಗೊಳಿಸಲಾಗಿದೆ. ಮಳೆ ಆರ್ಭಟದಿಂದ ಭಾರೀ ಅವಾಂತರ ಸೃಷ್ಟಿಯಾಗಿದ್ದು ಮೈಸೂರು–ಬೆಂಗಳೂರು ರಸ್ತೆ ಮಾರ್ಗ ಬಂದ್ ಆಗಿದೆ. ಹಾಗೆಯೇ ಮುಂಜಾಗ್ರತಾ ಕ್ರಮವಾಗಿ ಮೆಮು ರೈಲುಗಳು, ಬೈಯಪ್ಪನಹಳ್ಳಿ–ಮೈಸೂರು ಎಕ್ಸ್‌ಪ್ರೆಸ್, ಚಾಮರಾಜನಗರ–ಮೈಸೂರು ಪ್ಯಾಸೆಂಜರ್ ಸೇರಿದಂತೆ ಸುಮಾರು 8 ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ನಂತರ ರೈಲು ಮಾರ್ಗದ ಸುರಕ್ಷತೆಯನ್ನು ಖಚಿತಪಡಿಸಿಕೊಂಡು ನಿನ್ನೆ ರಾತ್ರಿಯಿಂದಲೇ ರೈಲು ಸಂಚಾರವನ್ನು ಆರಂಭಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸುಂದ್ರಮ್ಮ ನಿಧನ



ಮೈಸೂರು, ಆ.4– ತಾಲೂಕಿನ ಮುರುಡಗಳ್ಳಿ ನಿವಾಸಿ, ಪೊಲೀಸ್ ಎಎಸ್‌ಐ ಚಾಮಣ್ಣ ಅವರ ಪತ್ನಿ ಸುಂದ್ರಮ್ಮ(48) ಅವರು ಗುರುವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ, ಸಹೋದರ ಕಾಂಗ್ರೆಸ್ ಮುಖಂಡ ದೇವಲಾಪುರ ಸಿ.ಮಹೇಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೊಡ್ಡಬಸಪ್ಪ



ಮೈಸೂರು, ಆ.4– ಮೈಸೂರಿನ ಜೆ.ಪಿ.ನಗರ, ಗುರುಕುಲ ಬಡಾವಣೆ ನಿವಾಸಿ, ಶ್ರೀ ಸಿದ್ದಲಿಂಗೇಶ್ವರ ಸೇವಾ ಸಮಿತಿ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯರಾದ ದೊಡ್ಡಬಸಪ್ಪ(90)ನವರು ಗುರುವಾರ ನಿಧನರಾದರು.

ಮೃತರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮೃತರ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಣ ಡಬಲ್ ಆಸೆ ತೋರಿಸಿ ಆನ್‌ಲೈನ್ ಮೂಲಕ 3.41 ಲಕ್ಷ ರೂ. ವಂಚನೆ

ಮಡಿಕೇರಿ, ಆ.4– ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಏಳೇ ದಿನದಲ್ಲಿ ಹಣ ದುಪ್ಪಟ್ಟಾಗುತ್ತದೆ ಎಂದು ನಂಬಿಸಿ, ಬೆಳೆಗಾರರೊಬ್ಬರಿಗೆ 3.41 ಲಕ್ಷ ರೂ.ಗಳನ್ನು ಮಹಾರಾಷ್ಟ್ರದ ಕಂಪನಿಯೊಂದು ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ. ಕೊಡಗಿನ ಕುಟ್ಟಾ ಸಮೀಪದ ಮಂಚಳ್ಳಿ ಗ್ರಾಮದ ಬೆಳೆಗಾರ ಸಿ.ಟಿ. ಬೆಳ್ಳಿಯಪ್ಪ (35) ವಂಚನೆಗೊಳಗಾದವರಾಗಿದ್ದು, ಆನ್‌ಲೈನ್‌ನಲ್ಲಿ ಮಹಾರಾಷ್ಟ್ರದ ನಾಸಿಕ್ ವಿಳಾಸವಿರುವ 'ಮಾರ್ಕ್ ಟ್ರೇಡರ್ಸ್' ಎಂಬ ಕಂಪನಿಯನ್ನು ಸಂಪರ್ಕಿಸಿದಾಗ ಷೇರು ಮಾರುಕಟ್ಟೆಯಲ್ಲಿ 3,41,500 ರೂ. ಹೂಡಿಕೆ ಮಾಡಿದರೆ, 7 ದಿನದಲ್ಲಿ 14 ಲಕ್ಷ ರೂ. ಬರುತ್ತದೆ ಎಂದು ನಂಬಿಸಲಾಗಿದೆ. ಅದರಂತೆ ಬೆಳ್ಳಿಯಪ್ಪ ಅವರು ಹಣ ಪಾವತಿಸಿದ್ದು, ಅವರಿಗೆ ಯಾವುದೇ ಹಣ ವಾಪಸ್ ನೀಡದೆ ವಂಚಿಸಲಾಗಿದೆ.

ಹಠಾತ್ ಬಸ್ ಚಾಲನೆ: ಕೆಳಗೆ ಬಿದ್ದು ಪ್ರಯಾಣಿಕ ಸಾವು

ಮೈಸೂರು, ಆ.4– ಹಠಾತ್ತನೇ ಚಾಲಕ ಬಸ್ ಚಾಲನೆ ಮಾಡಿದ ಪರಿಣಾಮ ನಿಯಂತ್ರಣ ತಪ್ಪಿ ಬಿದ್ದು ಪ್ರಯಾಣಿಕ ಸಾವನ್ನಪ್ಪಿದ ಘಟನೆ ನಜರ್‌ಬಾದ್‌ನಲ್ಲಿರುವ ಸಂಭ್ರಮ ಬಾರ್ ಬಳಿ ಸಂಭವಿಸಿದೆ. ಮೈಸೂರು ತಾಲೂಕು ಚಿಕ್ಕಹಳ್ಳಿ ಗ್ರಾಮದ ನಿವಾಸಿ ನಾರಾಯಣ (36) ಸಂಭ್ರಮ ಬಾರ್ ಬಳಿಯ ನಿಲ್ದಾಣ ದಲ್ಲಿ ಖಾಸಗಿ ಬಸ್ (ಎಪಿ02, ಟಿಬಿ5801) ಹತ್ತುತ್ತಿರುವಾಗಲೇ ಚಾಲಕ ಹಠಾತ್ತನೇ ಬಸ್ಸನ್ನು ಚಾಲಿಸಿದ ಪರಿಣಾಮ ಮೆಟ್ಟಿಲಿನಿಂದ ಕೆಳಗೆ ಬಿದ್ದು ನಾರಾಯಣ ಗಂಭೀರವಾಗಿ ಗಾಯಗೊಂಡಿದ್ದಾರೆ. ತಕ್ಷಣ ಅವರನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಸಮಯ ಕಳೆಯುವವರಿಗೆ ಆಮ್ ಆದ್ಮಿ ಪಕ್ಷದಲ್ಲಿ ಜಾಗವಿಲ್ಲ

● ಪಕ್ಷದ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್ ಖಡಕ್ ನುಡಿ ● ದಸರಾ ವೇಳೆ ಆಮ್ ಪ್ರಬಲ ಶಕ್ತಿಯಾಗಬೇಕು



ಮೈಸೂರು, ಆ.4(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಆಮ್ ಆದ್ಮಿ ಪಕ್ಷವನ್ನು ಸದೃಢವಾಗಿ ಸಂಘಟಿಸಲು ಕಾರ್ಯಕರ್ತರು ಶ್ರಮಿಸಬೇಕು. ದಸರಾ ಮಹೋತ್ಸವದ ವೇಳೆಗೆ ಪಕ್ಷ ಜಿಲ್ಲೆಯಲ್ಲಿ ಶಕ್ತಿಯುತವಾಗಿಸಬೇಕು ಎಂದು ಪಕ್ಷದ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್ ಸೂಚಿಸಿದ್ದಾರೆ.

ಮೈಸೂರಿನ ಚಾಮುಂಡಿಪುರಂನಲ್ಲಿ ಆಮ್ ಆದ್ಮಿ ಪಾರ್ಟಿಯ ಕಚೇರಿ ಉದ್ಘಾಟಿಸಿ, ನಂತರ ಜೆಎಲ್‌ಬಿ ರಸ್ತೆಯ ಆರಾಧ್ಯ ಭವನದಲ್ಲಿ ಆಯೋಜಿಸಿದ್ದ ಪಕ್ಷದ ಸಂಘಟನಾ ಸಭೆಯಲ್ಲಿ ಮಾತನಾಡಿದ ಅವರು, ರಾಜಕಾರಣ, ಸಮಾಜ ಸೇವೆಯನ್ನು ಗಂಭೀರವಾಗಿ ಪರಿಗಣಿಸದೆ ಕೇವಲ ಸಮಯ ಕಳೆಯುವುದಕೋಸ್ಕರ ಬರುವವರಿಗೆ ಪಕ್ಷದಲ್ಲಿ ಯಾವುದೇ ಜವಾಬ್ದಾರಿ ನೀಡಬೇಡಿ. ಪಕ್ಷ ಸಂಘಟನೆ, ಸಮಾಜ ಸೇವೆಯ ತುಡಿತ ಇರುವವರಿಗೆ ಜವಾಬ್ದಾರಿ ನೀಡಿ. ಸಮಯ ಕಳೆಯಲು ಬರುವವರಿಗೆ ಜವಾಬ್ದಾರಿ ನೀಡಿದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ, ಅಂಥವರು ಮನೆಯಲ್ಲಿಯೇ ಇರಲಿ. ಪಕ್ಷದ ಯುವ ಘಟಕ, ಮಹಿಳಾ ಘಟಕ ಸೇರಿದಂತೆ 10 ಘಟಕಗಳನ್ನು ಕೂಡಲೇ ರಚಿಸಿ ಅರ್ಹರನ್ನು ಗುರುತಿಸಿ ಅವರಿಗೆ ಜವಾಬ್ದಾರಿ ನೀಡಬೇಕು. ದಸರೆಯೊಳಗೆ ನಾನು ಮೈಸೂರಿಗೆ ಬರುತ್ತೇನೆ. ಅಷ್ಟರೊಳಗೆ ಪಕ್ಷವನ್ನು ಸದೃಢವಾಗಿ ಸಂಘಟಿಸುವ ಜವಾಬ್ದಾರಿ ಪಕ್ಷದ ಪದಾಧಿಕಾರಿಗಳ ಮೇಲಿದೆ ಎಂದರು.

ಮೈಸೂರಿನಲ್ಲಿ ಪಕ್ಷ ಸಂಘಟನೆ ಸರಿಯಾಗಿ ಆಗುತ್ತಿಲ್ಲ. ಕೇವಲ ಚರ್ಚೆಗಳಿಗೆ ಮಾತ್ರ ಪಕ್ಷದ ಕಾರ್ಯಕ್ರಮ ಸೀಮಿತವಾಗುತ್ತಿದೆ. ಸಂಘಟನೆ ಬೆಳೆಯಬೇಕಾದರೆ ಎಲ್ಲರಿಗೂ ಜವಾಬ್ದಾರಿ ನೀಡಬೇಕು. ಮುಂದಿನ ಬಾರಿ ನಾನು ಬರುವಾಗ ಆರಾಧ್ಯ ಭವನದ ತುಂಬ ಕಾರ್ಯಕರ್ತರು ತುಂಬಿರುವಂತಹ ವಾತಾವರಣ ನಿರ್ಮಾಣ ಮಾಡಬೇಕು. ಯಾವುದೇ ಪಕ್ಷ ಸುಮ್ಮನೆ ಅಧಿಕಾರಕ್ಕೆ ಬರುವುದಿಲ್ಲ. ತ್ಯಾಗ, ಪರಿಶ್ರಮದಿಂದ ಮಾತ್ರ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯ. ರಾಜ್ಯದಲ್ಲಿ ಆಪ್ ಪಕ್ಷವನ್ನು ಪ್ರಬಲವಾಗಿ ಸಂಘಟಿಸಲು ನಿಮ್ಮೆಲ್ಲರ ಸಹಕಾರದ ಅವಶ್ಯಕತೆ ಇದೆ. ರಾಜ್ಯದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಆಡಳಿತದಿಂದ ಜನರು ಬೇಸತ್ತು ಹೋಗಿದ್ದು, ಜನರು ಪರ್ಯಾಯ ರಾಜಕೀಯ ಪಕ್ಷದ ಹುಡುಕಾಟದಲ್ಲಿ ಇದ್ದಾರೆ. ಅಂಥವರ ಬಳಿ ನಮ್ಮ ಕಾರ್ಯಕರ್ತರು ತಲುಪಬೇಕು ಎಂದು ಸಲಹೆ ನೀಡಿದರು.

ನಮ್ಮ ಬಳಿ ಹಣ, ತೋಳ್ಬಲ ಇಲ್ಲ. ಹಾಗಾಗಿ ನಾವು ಸಂಘಟನೆ ಮೂಲಕ ಅಧಿಕಾರ ಹಿಡಿಯಬೇಕು. ಪಕ್ಷ ಸಂಘಟನೆಗೆ ಶಿಸ್ತು ಅವಶ್ಯಕ. ಶಿಸ್ತು ಇಲ್ಲದಿದ್ದರೆ ಪಕ್ಷವನ್ನು ಪ್ರಬಲವಾಗಿ ಸಂಘಟಿಸಲು ಸಾಧ್ಯವಿಲ್ಲ. ಎಲ್ಲರೂ ತಮ್ಮ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿದಾಗ ಮಾತ್ರ ಪಕ್ಷದ ಬೆಳವಣಿಗೆ ಸಾಧ್ಯ ಎಂದು ಹೇಳಿದರು.

ಇದೇ ವೇಳೆ ಪಕ್ಷದ ಸಂಸ್ಥಾಪಕ ಸದಸ್ಯೆ ಪದ್ಮ ಮಾತನಾಡಿ, 2013ರಲ್ಲಿ ಆಮ್ ಆದ್ಮಿ ಪಕ್ಷ ಸಂಘಟನೆಯನ್ನು ಮೈಸೂರಿನಲ್ಲಿ ಆರಂಭಿಸಲಾಯಿತು. ಅಂದು ಕೆಲವರು ಮಾತ್ರ ಸಂಘಟನೆಯಲ್ಲಿದ್ದರು. ಇಂದು ನೂರಾರು ಜನರು ಪಕ್ಷದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಾವಿರಾರು ಮಂದಿ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ. ನಿಮ್ಮ ಸಹಕಾರದಿಂದ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳಿಸೋಣ ಎಂದರು.

ಪಕ್ಷದ ಜಿಲ್ಲಾಧ್ಯಕ್ಷ ಸರಗೂರು ನಟರಾಜ್ ಮಾತನಾಡಿ, ಪ್ರಸ್ತುತ ರಾಜ್ಯಕ್ಕೆ ಆಮ್ ಆದ್ಮಿ ಪಾರ್ಟಿಯ ಅವಶ್ಯಕತೆ ಇದೆ ಎಂಬುದನ್ನು ಜನರು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ. ಜನರಿಂದ ದುಪ್ಪಟ್ಟು ತೆರಿಗೆ ವಸೂಲಿ ಮಾಡುತ್ತಿರುವ ಸರ್ಕಾರ ಜನರಿಗೆ ಸೂಕ್ತ ಮೂಲಸೌಲಭ್ಯ ಕಲ್ಪಿಸುತ್ತಿಲ್ಲ ಎಂದು ಕಿಡಿಕಾರಿದರು.

ಮೈಸೂರು ನಗರದಲ್ಲಿ 6 ವಿಧಾನಸಭಾ ಕ್ಷೇತ್ರವಿದೆ!

ಕಾರ್ಯಕರ್ತರ ಸಭೆಯಲ್ಲಿ ಭಾಸ್ಕರ್ ರಾವ್ ಅವರು ಮೈಸೂರು ನಗರದಲ್ಲಿ ಎಷ್ಟು ಕ್ಷೇತ್ರಗಳಿವೆ ಎಂಬ ಪ್ರಶ್ನೆಗೆ ಕೆಲ ಕಾರ್ಯಕರ್ತರು 6 ಎಂದು ಉತ್ತರಿಸಿದರು. ಪಕ್ಷದ ಕಾರ್ಯಕರ್ತರ ಉತ್ತರದಿಂದ ಭಾಸ್ಕರ್ ರಾವ್ ತಬ್ಬಿಬ್ಬಾದರು.

ಆ 6 ಕ್ಷೇತ್ರಗಳು ಯಾವುದು ಎಂಬ ಪ್ರಶ್ನೆಗೂ ಕಾರ್ಯ ಕರ್ತರ ಬಳಿ ಉತ್ತರ ಇರಲಿಲ್ಲ. ಅಂತಿಮವಾಗಿ ವೇದಿಕೆಯಲ್ಲಿದ್ದ ಪಕ್ಷದ ಮುಖಂಡರು ನಗರದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಸೇರಿದಂತೆ ನಾಲ್ಕು ಕ್ಷೇತ್ರಗಳು ಮಾತ್ರ ಇವೆ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಭಾಸ್ಕರ್ ರಾವ್, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಘಟಕಗಳನ್ನು ರಚಿಸಿ ಪದಾಧಿಕಾರಿಗಳನ್ನು ನೇಮಕ ಮಾಡಿ ಜವಾಬ್ದಾರಿ ನೀಡಿ. ಆ ಮೂಲಕ ಜಿಲ್ಲೆಯ 11 ಕ್ಷೇತ್ರಗಳಲ್ಲೂ ಪಕ್ಷವನ್ನು ಸದೃಢವಾಗಿ ಸಂಘಟಿಸಲು ಶ್ರಮ ವಹಿಸಿ ಎಂದು ಕರೆ ನೀಡಿದರು.

ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಪಕ್ಷವನ್ನು ಸದೃಢವಾಗಿ ಸಂಘಟಿಸಬೇಕು. ನಗರದ 65 ವಾರ್ಡ್‌ಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಪಕ್ಷವನ್ನು ಸಂಘಟಿಸುವ ಕಾರ್ಯ ಮಾಡಬೇಕು. ಆ ಮೂಲಕ ನಗರ ಪಾಲಿಕೆಯಲ್ಲಿ ಅಧಿಕಾರ ಹಿಡಿಯುವ ಪ್ರಯತ್ನ ಮಾಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರಾದ ಮಹದೇವಯ್ಯ, ಮಾಲಿನಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


05.08.2022 ಶುಕ್ರವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಅಷ್ಟಮಿ, ನಕ್ಷತ್ರ : ಸ್ವಾತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ವರಲಕ್ಷ್ಮೀ ವ್ರತ, ನರಹರಿತೀರ್ಥಸ್ವಾಮಿ ಆರಾಧನೆ, ಕೊಚ್ಚಿನ್ ಸಿದ್ದರಾಜ ನಾಮಕ ದತ್ತಾತ್ರೇಯಸ್ವಾಮಿ ದೇವಾಲಯದ ಪ್ರಧಾನ ಅರ್ಚಕರಾದ ಮಾರುತಿ ಶರ್ಮ ಅವರಿಗೆ ಸ್ಮಾರ್ತ ನರಹರಿ ಪ್ರಶಸ್ತಿ ಪ್ರದಾನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಧಾತ್ರಿ ಪ್ರಕಾಶನ, ಮೈಸೂರು :** ಲೇಖಕ ಎಸ್. ಉಮೇಶ್ ಅವರ ಕಾಶ್ಮೀರ್ ಡೈರಿ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಕರ್ನಾಟಕ ಕರಕುಶಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಿ. ರೂಪ ಮೌದ್ಗಿಲ್, ಪುಸ್ತಕ ಕುರಿತು ಮಾತನಾಡುವವರು : ಲೇಖಕ ಚಕ್ರವರ್ತಿ ಸೂಲಿಬೆಲೆ, ಕಾರ್ಗಿಲ್ ಅನುಭವ : ಕ್ಯಾಪ್ಟನ್ ನವೀನ್ ನಾಗಪ್ಪ ಮುಖ್ಯ ಅತಿಥಿಗಳು : ಇಂಡಿಯನ್ ಏರ್‌ಫೋರ್ಸ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ. ವಿನಯ್ ವಿಠಲ್, ಪತ್ರಕರ್ತ ರವೀಂದ್ರ ಜೋಶಿ, ಶಾರದಾ ವಿಲಾಸ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ. ಎಂ. ನಟರಾಜ್, ಅಧ್ಯಕ್ಷತೆ : ಲೆಫ್ಟಿನೆಂಟ್ ಜನರಲ್ ಪಿ.ಸಿ. ತಿಮ್ಮಯ್ಯ, ಸ್ಥಳ: ಕಲಾಮಂದಿರ, ಸಂಜೆ 5.30ಕ್ಕೆ.

■ **ರಾಗ ಮ್ಯೂಸಿಕ್ ಅಕಾಡೆಮಿ:** ಶ್ರೀಮದ್ ಭಾಗವತ ಸಪ್ತಾಹ, ವಿದುಷಿ ಶುಭ ರಾಘವೇಂದ್ರ ಅವರಿಂದ ಹಾಡುಗಾರಿಕೆ, ವಿದ್ವಾನ್ ಗಣೇಶ್ ಭಟ್– ಕೀ ಬೋರ್ಡ್, ಪಂಡಿತ್ ರಮೇಶ್ ಧನ್ನೂರ್–ತಬಲ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ– ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಆರ್.ಹರಿಣಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ–ರೇಖಾ ವೆಂಕಟೇಶ್, 12.45 ಕಾದಂಬರಿ ವಿಹಾರ–ಡಾ.ಎಸ್. ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ, "ಜೀವನ್ಮುಖಿ", ಪ್ರೊ.ಹೆಚ್.ಎಂ.ಹೇಮಲತಾ ಅವರೊಂದಿಗೆ ಸಂದರ್ಶನ, 4.30 ವೃತ್ತಿ ಮಾಗದರ್ಶನ– ಸಂಖ್ಯಾಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ವಿದ್ಯಾ ಆರ್. ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಸಿರಿಧಾನ್ಯಗಳ ಪ್ರಾಮುಖ್ಯತೆ ಕುರಿತು ಡಾ.ಚಂದ್ರಕಲಾ ಹಣಗಿ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣೀ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ – ಎಸ್.ಲಕ್ಷ್ಮೀನಾರಾಯಣ, 9.00 ವಿಜ್ಞಾನ ಭಾರತಿ– ರಿಮೋಟ್ ಸೆನ್ಸಿಂಗ್ (ದೂರ ಸಂವೇದಿ) ಹಾಗೂ ಜಿಯಾಗ್ರಫಿಕ್ ಇನ್‌ಫಾರ್ಮೇಷನ್ ಸಿಸ್ಟಮ್–ಭೌಗೋಳಿಕ ಮಾಹಿತಿ ಕುರಿತು ಡಾ. ಚಂದನ್ ಅವರೊಂದಿಗೆ ಸಂದರ್ಶನ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಾಘವೇಂದ್ರಸ್ವಾಮಿ ಮಠ :** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಠಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 5 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 111 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹಣ, ಆಭರಣಕ್ಕಾಗಿ ಮಹಿಳೆಯರ ಕೊಂದು ರುಂಡ–ಮುಂಡ ಬೇರ್ಪಡಿಸುತ್ತಿದ್ದ

ಸೀರಿಯಲ್ ಕಿಲ್ಲರ್ ಜೋಡಿ ಬಂಧನ

● ಇತ್ತೀಚೆಗೆ ಮಂಡ್ಯದ ನಾಲೆಗಳಲ್ಲಿ ಸಿಕ್ಕ ಎರಡು ಮುಂಡ ಪ್ರಕರಣ ಬಯಲು ● ಇನ್ನೂ ಐವರಿಗೆ ಸ್ಕೆಚ್ ಹಾಕಿದ್ದ ಭಯಾನಕ ಹಂತಕರ ಸಂಚಿಗೆ ಬ್ರೇಕ್ ● ಹರಸಾಹಸ ಪಟ್ಟು ಕಿಲ್ಲರ್ ಸೆರೆ ಹಿಡಿದ ಡಿವೈಎಸ್ಪಿ ಸಂದೇಶ್ ಕುಮಾರ್ ತಂಡಕ್ಕೆ ಲಕ್ಷ ಬಹುಮಾನ



ಆರೋಪಿಗಳಾದ ಚಂದ್ರಕಲಾ, ಸಿದ್ದಲಿಂಗಪ್ಪ

ಮಂಡ್ಯ, ಆ.4–ಇಬ್ಬರು ಮಹಿಳೆಯರನ್ನು ಹತ್ಯೆ ಮಾಡಿ ರುಂಡ–ಮುಂಡವನ್ನು ಬೇರ್ಪಡಿಸಿ ನಾಲೆಗೆ ಬಿಸಾಕಿದ್ದ ಪ್ರಕರಣವನ್ನು ಭೇದಿಸಿರುವ ಮಂಡ್ಯ ಜಿಲ್ಲಾ ಪೊಲೀಸರು, ಸೀರಿಯಲ್ ಕಿಲ್ಲರ್ ಹಾಗೂ ಆತನ ಪ್ರೇಯಸಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಹತ್ಯೆಗೀಡಾದ ಸಿದ್ದಮ್ಮ

ಪಾಂಡವಪುರ ಹಾಗೂ ಅರಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ನಾಲೆಗಳಲ್ಲಿ ಇಬ್ಬರು ಮಹಿಳೆಯರ ಮುಂಡ ಮಾತ್ರ ಕಳೆದ ಎರಡು ತಿಂಗಳ ಹಿಂದೆ ಪತ್ತೆಯಾಗಿತ್ತು. ಈ ಪ್ರಕರಣ ಪೊಲೀಸರಿಗೆ ಸವಾಲಾಗಿ ಪರಿಣಮಿಸಿತ್ತು. ಇಂಗ್ಲಿಷ್ ಪತ್ತೇದಾರಿ ಸಿನೆಮಾ 'ಶೆರ್ಲಾಕ್ಸ್ ಹೋಮ್ಸ್'ನ ಹೀರೋನಂತೆ ಹಲವಾರು ಕ್ಲಿಷ್ಟಕರ ಪ್ರಕರಣಗಳನ್ನು ಪತ್ತೆ ಹಚ್ಚಿರುವ ಶ್ರೀರಂಗಪಟ್ಟಣ ಉಪ ವಿಭಾಗದ ಡಿವೈಎಸ್‌ಪಿ ಸಂದೇಶ್ ಕುಮಾರ್ ಅವರಿಗೆ ಈ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಮತ್ತು ಮಂಡ್ಯ ಜಿಲ್ಲಾ ಎಸ್ಪಿ ಎನ್.



ಡಿವೈಎಸ್ಪಿ ಸಂದೇಶ್‌ಕುಮಾರ್ (ಎಡತುದಿ) ಅವರಿಗೆ ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಅವರು ಪ್ರಶಂಸನಾ ಪತ್ರ ನೀಡಿದರು. ಚಿತ್ರದಲ್ಲಿ ಎಸ್ಪಿ ಎನ್.ಯತೀಶ್, ಎಎಸ್‌ಪಿ ವೇಣುಗೋಪಾಲ್ ಅವರಿದ್ದಾರೆ.

ಯತೀಶ್ ವಹಿಸಿದ್ದರು. ಉಪ ವಿಭಾಗದ ಪೊಲೀಸರು ಮಾತ್ರವಲ್ಲದೇ ಜಿಲ್ಲೆಯ ಯಾವುದೇ ಠಾಣೆಯ ಸಮರ್ಥ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ತನಿಖೆಗೆ ಬಳಸಿಕೊಳ್ಳುವಂತೆಯೂ ▶ 8ನೇ ಪುಟಕ್ಕೆ

ಬೀದಿಗೆ ಬಿದ್ದ ಸಿದ್ದಮ್ಮಳ ಕುಟುಂಬ

ಪುಟ್ಟ ಮಕ್ಕಳು, ವಯೋವೃದ್ಧ ತಂದೆ–ತಾಯಿ, ಅತ್ತೆ ಜೀವನ ದುಸ್ತರ



ಹತ್ಯೆಗೀಡಾದ ಸಿದ್ದಮ್ಮಳ ತಂದೆ, ತಾಯಿ, ಅತ್ತೆ

ಚಾಮರಾಜನಗರ, ಆ.4– ಪತಿಯನ್ನು ಕಳೆದುಕೊಂಡು ಇಬ್ಬರು ಪುಟ್ಟ ಮಕ್ಕಳು, ತಂದೆ–ತಾಯಿ ಹಾಗೂ ಅತ್ತೆಯನ್ನು ಸಾಕುವ ಹೊಣೆಗಾರಿಕೆ ಹೊತ್ತಿದ್ದ ಚಾಮರಾಜನಗರದ ಸಿದ್ದಮ್ಮ ಸೀರಿಯಲ್ ಕಿಲ್ಲರ್‌ಗಳ ಅಮಾನವೀಯ ಕೃತ್ಯಕ್ಕೆ ಪ್ರಾಣ ತೆತ್ತಿದ್ದಾಳೆ.

ಮಂಡ್ಯ ಜಿಲ್ಲಾ ಪೊಲೀಸರಿಗೆ ಸಿಕ್ಕಿ ಬಿದ್ದಿರುವ ಸೀರಿಯಲ್ ಕಿಲ್ಲರ್ ಸಿದ್ದಲಿಂಗಪ್ಪ ಮತ್ತು ಆತನ ಪ್ರೇಯಸಿ ಚಂದ್ರಕಲಾರಿಂದ 2 ತಿಂಗಳ ಹಿಂದೆ ಹತ್ಯೆಗೀಡಾಗಿ ರುಂಡ–ಮುಂಡ ಬೇರ್ಪಟ್ಟು ನಾಲೆ ನೀರಿನಲ್ಲಿ ಈಕೆಯ ಮುಂಡ ಪತ್ತೆಯಾಗಿತ್ತು. ಸಿದ್ದಮ್ಮಳ ನಾಪತ್ತೆ ಪ್ರಕರಣದ ಜಾಡನ್ನು ಹಿಡಿದೇ ಶ್ರೀರಂಗಪಟ್ಟಣ ಡಿವೈಎಸ್ಪಿ ಸಂದೇಶ್ ಕುಮಾರ್ ನೇತೃತ್ವದ ತಂಡ ಸೀರಿಯಲ್ ಕಿಲ್ಲರ್‌ಗಳನ್ನು ಬಂಧಿಸಿ, ಮತ್ತೆ ಐವರು ಅಮಾಯಕ ಮಹಿಳೆಯರು ಹತ್ಯೆಯಾಗುವುದನ್ನು ತಡೆದಿತ್ತು. ಚಾಮರಾಜನಗರದ ಕುಮಾರ ಮತ್ತು ಪುಟ್ಟನಂಜಮ್ಮ ದಂಪತಿ ಪುತ್ರಿ ಸಿದ್ದಮ್ಮ ಅಲಿಯಾಸ್ ಪುಟ್ಟಿ ಅಲಿಯಾಸ್ ಗೀತಾ ತನ್ನ ಸೋದರ ಮಾವ ಮಹದೇವಸ್ವಾಮಿಯನ್ನು ವಿವಾಹವಾಗಿದ್ದರು. ಆದರೆ ಕಳೆದ 9 ವರ್ಷದ ಹಿಂದೆ ಅನಾರೋಗ್ಯದಿಂದ ಪತಿ ಮಹದೇವಸ್ವಾಮಿ ಮೃತಪಟ್ಟಾಗ ಇಬ್ಬರು ಪುತ್ರರು, ತಂದೆ–ತಾಯಿ ಮತ್ತು ಅತ್ತೆ (ಪತಿಯ ತಾಯಿ) ನಿರ್ವಹಣೆ ಹೊಣೆಗಾರಿಕೆ ಈಕೆಯ ಹೆಗಲಿಗೆ ಬಿತ್ತು. ಸುತ್ತೂರಿನಲ್ಲಿ ಹಿರಿಯ ಮಗ ಮುತ್ತುರಾಜ್ 8ನೇ ತರಗತಿ ಮತ್ತು ಕಿರಿಯ ಮಗ ರಿಷಿರಾಜ್ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕಿರಿಯ ಮಗ ರಿಷಿರಾಜ್ ಹೃದ್ರೋಗಿಯಾಗಿದ್ದು, ಆತನ ಚಿಕಿತ್ಸಾ ವೆಚ್ಚವನ್ನು ಕೂಡ ಸಿದ್ದಮ್ಮಳೇ ಭರಿಸಬೇಕಾಗಿತ್ತು. ಹೀಗಾಗಿ ಆಕೆ ಬೆಂಗಳೂರಿಗೆ ತೆರಳಿ ಯಾವುದೋ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ ತಿಂಗಳಿಗೋ, 2 ತಿಂಗಳಿಗೋ ಒಮ್ಮೆ ▶ 8ನೇ ಪುಟಕ್ಕೆ

ಪತಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಶಿಕ್ಷಕಿ ಹತ್ಯೆ

ನಂಜನಗೂಡು ನಗರಸಭೆ ಸದಸ್ಯೆ ಸೇರಿ ನಾಲ್ವರ ಬಂಧನ

ಮೈಸೂರು, ಆ.4(ಆರ್‌ಕೆ)– ಕಳೆದ 5 ತಿಂಗಳ ಹಿಂದೆ ನಡೆದಿದ್ದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಶಿಕ್ಷಕಿ ಸುಲೋಚನಾ ಹತ್ಯೆ ಪ್ರಕರಣವನ್ನು ಭೇದಿಸಿರುವ ನಂಜನಗೂಡು ಪೊಲೀಸರು ನಗರ ಸಭಾ ಸದಸ್ಯೆ ಸೇರಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಹತ್ಯೆಗೀಡಾದ ಸುಲೋಚನಾ

ನಂಜನಗೂಡು ನಗರಸಭೆ ಸದಸ್ಯೆ ಗಾಯತ್ರಿ ಮುರುಗೇಶ್, ಆಕೆಯ ಸಂಬಂಧಿಕರಾದ ಸೌಭಾಗ್ಯ, ನಾಗಮ್ಮ ಮತ್ತು ಕುಮಾರ್ ಬಂಧಿತ ಆರೋಪಿಗಳಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಗುರುವಾರ ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

ಶಿಕ್ಷಕಿಯೊಂದಿಗೆ ಗಾಯತ್ರಿ ಪತಿ ಮುರುಗೇಶ್ ಅಕ್ರಮ ಸಂಬಂಧ ಹೊಂದಿದ್ದರು ಎಂಬುದೇ ಸುಲೋಚನಾರನ್ನು ಕೊಲೆಗೈಯ್ಯಲು ಪ್ರಮುಖ ಕಾರಣವಾಗಿದ್ದು, ಪತಿಗೆ ಗೊತ್ತಿಲ್ಲದಂತೆಯೇ ಗಾಯತ್ರಿ ತನ್ನ ಮೈದುನ, ಓರಗಿತ್ತಿ ಹಾಗೂ ಸಂಬಂಧಿ ನೆರವಿನೊಂದಿಗೆ ಸ್ಕೆಚ್ ಹಾಕಿ ಸುಲೋಚನಾಳನ್ನು ಕೊಲೆ ಮಾಡಿದ್ದಾಳೆ ಎಂಬುದು ಪೊಲೀಸರ ತನಿಖೆ ವೇಳೆ ಬೆಳಕಿಗೆ ಬಂದಿದೆ.

ನಂಜನಗೂಡು ತಾಲೂಕಿನ ಮಹದೇವನಗರದಲ್ಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಸುಲೋಚನಾ ಪತಿ ನಿಧನರಾದ ನಂತರ ನಂಜನಗೂಡು ಟೌನ್‌ನ ಸಭಾಪತಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ವಾಸವಾಗಿದ್ದರು. ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಡಿ ಗ್ರೂಪ್ ನೌಕರನಾಗಿದ್ದ ನಗರಸಭಾ ಸದಸ್ಯೆ ಗಾಯತ್ರಿ ಪತಿ ಮುರುಗೇಶ್ ಶಿಕ್ಷಕಿ ಸುಲೋಚನಾ ಜೊತೆ ಸಂಬಂಧವಿಟ್ಟುಕೊಂಡು ಆಕೆಯ ಖರ್ಚು–ವೆಚ್ಚವನ್ನೆಲ್ಲ ನೋಡಿಕೊಳ್ಳುತ್ತಿದ್ದನಲ್ಲದೆ, ▶ 8ನೇ ಪುಟಕ್ಕೆ

ಲಂಚ ಪಡೆಯುತ್ತಿದ್ದ ಪಾಲಿಕೆ ರೆವಿನ್ಯೂ ಇನ್‌ಸ್ಪೆಕ್ಟರ್ ಎಸಿಬಿ ಬಲೆಗೆ

ಮೈಸೂರು, ಆ.4(ಆರ್‌ಕೆ)–ಆಸ್ತಿಯೊಂದರ ಖಾತೆ ಮಾಡಿಕೊಡುವ ಸಂಬಂಧ ವ್ಯಕ್ತಿಯಿಂದ 15,000 ರೂ. ಲಂಚ ಪಡೆಯುತ್ತಿದ್ದ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ ರೆವಿನ್ಯೂ ಇನ್‌ಸ್ಪೆಕ್ಟರ್ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ಪೊಲೀಸರಿಗೆ ಗುರುವಾರ ಸಿಕ್ಕಿಬಿದ್ದಿದ್ದಾರೆ.



ಬಿ.ಸಿದ್ದರಾಜು

ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 7ರ ರೆವಿನ್ಯೂ ಇನ್‌ಸ್ಪೆಕ್ಟರ್ ಬಿ.ಸಿದ್ದರಾಜು ಎಸಿಬಿ ಬಲೆಗೆ ಬಿದ್ದವರು. ಗಾಯತ್ರಿಪುರಂ ನಿವಾಸಿಯೊಬ್ಬರು ಖರೀದಿಸಿದ್ದ ಎನ್.ಆರ್.ಮೊಹಲ್ಲಾದ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ ಕೋರಿ ಪಾಲಿಕೆ ವಲಯ ಕಚೇರಿ–8ಕ್ಕೆ ಅವರು ಅರ್ಜಿ ಸಲ್ಲಿಸಿದ್ದರು. ಅದರ ಬಗ್ಗೆ ವ್ಯವಹರಿಸುತ್ತಿದ್ದ ಗಾಯತ್ರಿಪುರಂ ನಿವಾಸಿ ಮಹೇಶ್ ಎಂಬುವರು, ಆಗಸ್ಟ್ 3ರಂದು ರೆವಿನ್ಯೂ ಇನ್‌ಸ್ಪೆಕ್ಟರ್ ಸಿದ್ದರಾಜು ಅವರನ್ನು ಭೇಟಿ ಮಾಡಿದಾಗ ಖಾತೆ ವರ್ಗಾವಣೆ ಪ್ರಕ್ರಿಯೆ ಮಾಡಲು 15,000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರಿಂದ ಬೇಸತ್ತ ಸಿದ್ದರಾಜು ಇಂದು ಬೆಳಗ್ಗೆ ಎಸಿಬಿ ಕಚೇರಿಗೆ ದೂರು ನೀಡಿದ್ದರು. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಇಂದು ಮಧ್ಯಾಹ್ನ ಪ್ರಭಾರ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಫ್‌ಟಿಎಸ್ ಸರ್ಕಲ್ ಬಳಿ ಇರುವ ಪಾಲಿಕೆ ವಲಯ ಕಚೇರಿ 7ರಲ್ಲಿ ಮಹೇಶ್‌ರಿಂದ 15,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ಸಿದ್ದರಾಜುರನ್ನು ಹಣದ ಸಮೇತ ಬಂಧಿಸಿದರು. ಎಸಿಬಿ ಎಸ್ಪಿ ಸಜೀತ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಧರ್ಮೇಂದ್ರ, ಇನ್ಸ್‌ಪೆಕ್ಟರ್ ಮೋಹನ್ ಕೃಷ್ಣ ಹಾಗೂ ಸಿಬ್ಬಂದಿಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕಾನೂನು ಸುವ್ಯವಸ್ಥೆ ಸಂಬಂಧ ಸಿಎಂ, ಗೃಹ ಸಚಿವರಿಗೆ

ಅಮಿತ್ ಷಾ ತರಾಟೆ



ಅಮಿತ್ ಷಾ ಮತ್ತು ಸಿಎಂ ಬಸವರಾಜ ಬೊಮ್ಮಾಯಿ

ಬೆಂಗಳೂರು, ಆ.4(ಕೆಎಂಶಿ)– ಪಕ್ಷದ ಕಾರ್ಯಕರ್ತರೇ ತಿರುಗಿ ಬೀಳುವಷ್ಟು ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ಸರ್ಕಾರ ವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಅಮಿತ್ ಷಾ ತಾವು ತಂಗಿದ್ದ ಹೋಟೆಲ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಕರೆಸಿಕೊಂಡು ಇತ್ತೀಚಿನ ಸರಣಿ ಹತ್ಯೆಗೆ ಸಂಬಂಧಿಸಿದಂತೆ ಸಂಪೂರ್ಣ ವರದಿ ಪಡೆದರು. ರಾಜ್ಯ ಸರ್ಕಾರದ ಮಾಹಿತಿ ಪಡೆಯುವುದಕ್ಕೂ ಮುನ್ನ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರನ್ನು ನಿನ್ನೆ (ಬುಧವಾರ) ದೆಹಲಿಗೆ ಕರೆಸಿಕೊಂಡ ಗೃಹ ಸಚಿವರು ಅವರಿಂದ ಹಿಂದೂ ಯುವಕರ ಹತ್ಯೆ ಹಾಗೂ ಇತ್ತೀಚಿನ ಮಂಗಳೂರು ಘಟನೆಯ ಬಗ್ಗೆಯು ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದರು. ಪದೇ ಪದೆ ಹಿಂದು ಯುವಕರ ಹತ್ಯೆಯಾಗುತ್ತಿರುವುದು ಪರಿವಾರದಲ್ಲಿ ಭಾರೀ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ನಮ್ಮದೇ ಸರ್ಕಾರ ವಿದ್ದರೂ ನಮ್ಮವರಿಗೆ ರಕ್ಷಣೆ ಏಕಿಲ್ಲ ಎಂಬ ಮಾತುಗಳು ಕೇಳಿಬಂದಿವೆ. ಹತ್ಯೆಗಳು ಯಾವ ಕಾರಣಕ್ಕೆ ಆಗುತ್ತಿವೆ. ಮಾಡುತ್ತಿರುವವರು ಯಾರು, ಅವರ ಹಿನ್ನೆಲೆ ಏನು, ನೀವು ಏನು ಕ್ರಮ ಕೈಗೊಂಡಿದ್ದೀರಿ ಎಂದೆಲ್ಲ ಪ್ರಶ್ನಿಸಿದ್ದಾರೆ. ಮುಂದೆ ಇಂಥ ಘಟನೆಗಳು ನಡೆಯದಂತೆ ಕಠಿಣ ಕ್ರಮ ಕೈಗೊಳ್ಳಿ.

ಹತ್ಯೆಗೊಳಗಾದ ಪ್ರವೀಣ್ ನೆಟ್ಟಾರು ಮನೆಗೆ ಭೇಟಿ ನೀಡುವ ಉದ್ದೇಶವಿತ್ತು. ಹವಾಮಾನ ವೈಪರೀತ್ಯದ ಪರಿಣಾಮ ಭೇಟಿ ಸಾಧ್ಯವಾಗುತ್ತಿಲ್ಲ. ಮಂಗಳೂರಿಗೆ ಭೇಟಿ ನೀಡಬೇಕಾಗಿದ್ದ ಸಮಯವನ್ನು ಹಠಾತ್ತಾಗಿ ಯಲಹಂಕದ ಮದರ್‌ಡೈರಿ ಭೇಟಿಗೆ ಬಳಸಿಕೊಂಡರು. ಹಿಂದೂ ಯುವಕರ ಹತ್ಯೆ ಮತ್ತು ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ 30 ನಿಮಿಷಗಳ ಕಾಲ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಮಾಹಿತಿ ಹಾಗೂ ಕೆಲವು ದಾಖಲೆಗಳನ್ನು ನೀಡಿದರು. ಕೇರಳದಲ್ಲಿರುವ ಹಿಂದೂ ವಿರೋಧಿ ಸಂಘಟನೆಗಳು ಈ ಕೃತ್ಯದಲ್ಲಿ ತೊಡಗಿವೆ. ಪ್ರವೀಣ್ ನೆಟ್ಟಾರು ಹತ್ಯೆ ಹಿಂದೆ ಇವರ ಕೈವಾಡ ವಿದೆ. ಇದು ಅಂತರರಾಜ್ಯ ಪ್ರಕರಣವಾಗಿರುವುದರಿಂದ ಎನ್‌ಐಎಗೆ ಕೊಡುವ ಬಗ್ಗೆ ಚಿಂತನೆ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಅಮಿತ್ ಷಾ ಅವರಿಗೆ ಮಾಹಿತಿ ನೀಡಿದ್ದಾರೆ.

ಅಮಿತ್ ಷಾ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ, ನೆಟ್ಟಾರ್ ಸೇರಿದಂತೆ ಇತ್ತೀಚೆಗೆ ಯುವಕರ ▶ 8ನೇ ಪುಟಕ್ಕೆ

ಉದ್ಯೋಗದಾತ ಉದ್ಯಮಿಗಳಿಗೆ ಎಲ್ಲಾ ರೀತಿಯ ಸಹಕಾರ

● ಸಿಎಂ ಬಸವರಾಜ ಬೊಮ್ಮಾಯಿ ಭರವಸೆ
● ರಾಜ್ಯದಲ್ಲಿ 110 ಲಕ್ಷ ಕೋಟಿ ಹೂಡಿಕೆ ಒಪ್ಪಂದ

ಬೆಂಗಳೂರು, ಆ.4(ಕೆಎಂಶಿ)–ಕರ್ನಾಟಕದಲ್ಲಿ ಆರ್‌ಎಂಡ್‌ಡಿ ನೀತಿಗೆ ಸಚಿವ ಸಂಪುಟದ ಅನುಮೋದನೆ ದೊರೆತಿದ್ದು, ಗ್ಯಾರೇಜ್ ಸಂಶೋಧನೆಗಳಿಂದ ಹಿಡಿದು ಸಾಂಸ್ಥಿಕ ಸಂಶೋಧನೆಗಳವರೆಗೆ ಪ್ರೋತ್ಸಾಹ, ಸಹಕಾರವನ್ನು ನೀಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸಂಕಲ್ಪದಿಂದ ಸಿದ್ಧಿ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ ಷಾ ಅವರೊಂದಿಗೆ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಜೆನೋಮ್ಯಾಟಿಕ್ಸ್‌ನಿಂದ ಏರೋಸ್ಪೇಸ್‌ವರೆಗೆ 400 ಅಂತರರಾಷ್ಟ್ರೀಯ ಮಟ್ಟದ ಸಂಶೋಧನಾ ಕೇಂದ್ರಗಳಿವೆ. ಬೆಂಗಳೂರು ನಗರ ಹೊರತುಪಡಿಸಿದರೆ, ಪ್ರಪಂಚದ ಯಾವುದೇ ನಗರಗಳಲ್ಲಿ ಈ ಸಂಖ್ಯೆಯ ಆರ್‌ಎಂಡ್‌ಡಿ ಕೇಂದ್ರಗಳನ್ನು ಕಾಣಲು ಸಾಧ್ಯವಿಲ್ಲ ಎಂದರು.

ರಾಜ್ಯದಲ್ಲಿ ಉದ್ಯೋಗ ನೀತಿಯನ್ನು ರೂಪಿಸಲಾಗಿದ್ದು, ಉದ್ಯೋಗದಾತ ಉದ್ಯಮಿಗಳಿಗೆ ಪ್ರೋತ್ಸಾಹಕಗಳನ್ನು ನೀಡಲಾಗುವುದು. ಸೆಮಿಕಂಡಕ್ಟರ್ ನೀತಿ, ವಿದ್ಯುತ್ ಚಾಲಿತ ವಾಹನ ನೀತಿ, ನವೀಕರಿಸಬಹುದ ಇಂಧನ ನೀತಿಗಳನ್ನು ರೂಪಿಸಲಾಗಿದೆ. ಈ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ 110 ಲಕ್ಷ ಕೋಟಿ ರೂ.ಗಳ ವಿದೇಶಿ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹೈಡ್ರೋಜನ್ ಇಂಧನ, ಸಮುದ್ರ ನೀರಿನಿಂದ ಅಮೋನಿಯಾ ಉತ್ಪಾದನೆಗೆ ಒತ್ತು ನೀಡಲಾಗುತ್ತಿದೆ. ಕರ್ನಾಟಕದ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಕೊಡುಗೆಗೆ ಮನ್ನಣೆ ನೀಡಲಾಗುತ್ತಿದೆ. ಭಾರತದಲ್ಲಿ ಅಮೃತ ▶ 8ನೇ ಪುಟಕ್ಕೆ

ಸಿದ್ದರಾಮೋತ್ಸವದಿಂದ ವಾಪಸ್ಸಾಗುತ್ತಿದ್ದ ವಾಹನ ಅಪಘಾತ: ಓರ್ವ ಸಾವು

ಹತ್ತಕ್ಕೂ ಹೆಚ್ಚು ಮಂದಿಗೆ ಗಾಯ



ಪಿರಿಯಾಪಟ್ಟಣ, ಆ.4– ಚಾಲಕನ ನಿಯಂತ್ರಣ ತಪ್ಪಿದ ಗೂಡ್ಸ್ ವಾಹನ ರಸ್ತೆ ಪಕ್ಕದ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಬುಧವಾರ ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯನವರ ಅಮೃತ ಮಹೋತ್ಸವ ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ಸಾಗುತ್ತಿದ್ದವರಲ್ಲಿ ಒಬ್ಬರು ಸಾವನ್ನಪ್ಪಿ, 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಘಟನೆ ಅರಕಲಗೂಡು ತಾಲೂಕಿನ ಗಂಗೂರು ಹ್ಯಾಂಡ್‌ಪೋಸ್ಟ್ ಬಳಿ ಗುರುವಾರ ಮುಂಜಾನೆ ನಡೆದಿದೆ.



ಫಸಿಯೂದ್ದೀನ್


ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ ಗ್ರಾಮದ ನಿವಾಸಿ ಹಾಗೂ ಕಾಂಗ್ರೆಸ್ ಮುಖಂಡ ಫಸಿಯೂದ್ದೀನ್ (53) ಮೃತಪಟ್ಟವರು. ಇವರು ಹಲಗನಹಳ್ಳಿಯಿಂದ ದಾವಣಗೆರೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಅಂಗವಾಗಿ ನಡೆದ ಅಮೃತ ಮಹೋತ್ಸವಕ್ಕೆ ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನ(ಕೆಎ.45, ಎ2953)ದಲ್ಲಿ 10ಕ್ಕೂ ಅಧಿಕ ▶ 8ನೇ ಪುಟಕ್ಕೆ

ಭಾರೀ ಮಳೆಗೆ ಕೊಡಗು ತತ್ತರ; ಹೆದ್ದಾರಿ ಬಂದ್

15ಕ್ಕೂ ಹೆಚ್ಚು ಕಡೆ ಭೂ ಕುಸಿತ, ಸೇತುವೆಗಳು ಧ್ವಂಸ

● ಬೆಳಗ್ಗೆವರೆಗೂ ಜಿಲ್ಲೆಯಲ್ಲಿ 'ಆರೆಂಜ್ ಅಲರ್ಟ್'
● ಬೆಟ್ಟದಿಂದ ಉರುಳುತ್ತಿರುವ ಬಂಡೆಗಳು, ಮರಗಳು







ಮಡಿಕೇರಿ,ಆ.4–ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರೆದಿದ್ದು, ವಿವಿಧ ಕಡೆಗಳಲ್ಲಿ ಭೂ ಕುಸಿತವಾಗಿದೆ. ರಾಷ್ಟ್ರೀಯ ಹೆದ್ದಾರಿ ಸಂಚಾರ ಬಂದ್ ಮಾಡಲಾಗಿದೆ. ಜೊತೆಗೆ ಭಾರೀ ಜಲಸ್ಫೋಟದಿಂದ ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಗುರುವಾರ ಮಧ್ಯಾಹ್ನದ ಬಳಿಕ ಮತ್ತೆ ಮಳೆ ಸುರಿಯಲಾರಂಭಿಸಿದ್ದು, ಶುಕ್ರವಾರ ಬೆಳಗ್ಗೆ 8.30ರವರೆಗೆ ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಸರಣಿ ಭೂ ಕಂಪನದ ಕೇಂದ್ರ ಬಿಂದು, ಮಡಿಕೇರಿ ತಾಲೂಕಿನ ಚೆಂಬು ಗ್ರಾಮದಲ್ಲಿ ಆ.4ರ ಬೆಳಗಿನ 8.30 ಗಂಟೆಗೆ ಕೊನೆಗೊಂಡಂತೆ 220 ಮಿ.ಮೀ ಮಳೆ ಸುರಿದಿದೆ. ಕಳೆದ 4 ದಿನಗಳ ಅಂತರದಲ್ಲಿ ಚೆಂಬು ಗ್ರಾಮಕ್ಕೆ ದಾಖಲೆಯ 551 ಮಿ.ಮೀ ಮಳೆ ಸುರಿದಿದ್ದು, ಸಹಜವಾಗಿಯೇ ಅನಾಹುತಗಳಿಗೆ ಕಾರಣವಾಗಿದೆ. ಸರಣಿ ಭೂ ಕಂಪನಗಳಿಗೆ ತುತ್ತಾಗಿದ್ದ ಸಂಪಾಜೆ, ಚೆಂಬು, ದಬ್ಬಡ್ಕ, ಊರುಬೈಲು, ಕುದುರೆಪಾಯ, ಅರೆಕಲ್ಲು ಮತ್ತಿತ್ತರ ಕಡೆಗಳಲ್ಲಿ ಆಗಸ್ಟ್ ತಿಂಗಳ ಪ್ರಾರಂಭದಲ್ಲೇ 15ಕ್ಕೂ ಹೆಚ್ಚು ಕಡೆಗಳಲ್ಲಿ ಭಾರೀ ಭೂ ಕುಸಿತ ಸಂಭವಿಸಿದೆ. ಎಲ್ಲಿಯೂ ಮನೆ, ಪ್ರಾಣ ಹಾನಿ ನಡೆಯದ ಹಿನ್ನೆಲೆಯಲ್ಲಿ ಈ ಘಟನೆಗಳು ತಡವಾಗಿ ವರದಿಯಾಗಿದೆ.

ಹೆದ್ದಾರಿ ಬಂದ್: ಕೊಯನಾಡು–ದೇವರಕೊಲ್ಲಿ ನಡುವೆ ಹಾದು ಹೋಗಿರುವ ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275ನಲ್ಲಿ ಭಾರೀ ಬಿರುಕು ಮೂಡಿರುವ ಹಿನ್ನೆಲೆಯಲ್ಲಿ ಭಾರೀ ವಾಹನಗಳ ಓಡಾಟಕ್ಕೆ ತಾತ್ಕಾಲಿಕವಾಗಿ ನಿಷೇಧ ಹೇರಲಾಗಿದೆ. ಬಿರುಕು ಮೂಡಿರುವ ಸ್ಥಳದ ಮತ್ತೊಂದು ಬದಿಯಲ್ಲಿ ಈ ಹಿಂದೆ ಇದ್ದ ರಸ್ತೆಯನ್ನು ಮತ್ತಷ್ಟು ಸದೃಢ ಮಾಡಲಾಗುತ್ತಿದೆ. ಸುರಿಯುವ ಮಳೆಯ ನಡುವೆಯೇ ಹೆದ್ದಾರಿ ದುರಸ್ತಿ ಕಾರ್ಯ ನಡೆಸಲಾಗುತ್ತಿದ್ದು, ವೈಬ್ರೇಟರ್ ಯಂತ್ರದ ಸಹಾಯದಿಂದ ಕಾಂಕ್ರೀಟ್ ಗ್ರೋಟ್ ಹಾಕಲಾಗುತ್ತಿದೆ.

ಭಾರೀ ಜಲಸ್ಫೋಟ: ಭಾಗಮಂಡಲ ವ್ಯಾಪ್ತಿಯಲ್ಲಿ ಬುಧವಾರ ನಡು ರಾತ್ರಿ ಭಾರೀ ಮಳೆ ಸುರಿದಿದ್ದು, ಬಾಚಿಮಲೆ ಹಾಗೂ ಕೊಟ್ಟಮಲೆ ಬೆಟ್ಟ ಶ್ರೇಣಿಯಲ್ಲಿ ಜಲಸ್ಫೋಟದಿಂದ ಭಾರೀ ಭೂ ಕುಸಿತ ಉಂಟಾಗಿದೆ. ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಪ್ರಿಯ, ನೀವು ಕಳೆದ ಹತ್ತು ದಿನಗಳಿಂದ ಮುತ್ತು ಕೊಟ್ಟಿಲ್ಲ ಗೊತ್ತೆ?

ಗಂಡ : ಅರೆ! ನಾನು ಹಾಗಾದರೆ ಯಾರಿಗೆ ಕೊಡ್ತಾ ಇದ್ದೆ?

ಮೈಸೂರು ಮಿತ್ರ

ಶುಕ್ರವಾರ, 5 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಯಾವ ಕಾರ್ಯವನ್ನು ನಾಳೆ ಎಂದು ಮುಂದೆ ಹಾಕಬೇಡ. ಏಕೆಂದರೆ ನಿನ್ನ ಪಾಲಿಗೆ ಆ ನಾಳೆ ಎಂದಿಗೂ ಬರದಿರಬಹುದು –ಕಾಂ ವರ್ಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಣ ಮರಕ್ಕೆ ಗಿಣಿ ಕಾದ ಹಾಗೆ

ನಿಮ್ಮ ಪತ್ರಗಳು

ಹದ್ದು ಮೀರುತ್ತಿರುವ ವಿದ್ಯುನ್ಮಾನ ಮಾಧ್ಯಮಗಳು

ಮಾನ್ಯರೆ,

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಇತ್ತೀಚೆಗೆ ವಿದ್ಯುನ್ಮಾನ ಮಾಧ್ಯಮಗಳು ನಡೆದುಕೊಳ್ಳುತ್ತಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಬಿಹಾರದ ರಾಂಚಿಯಲ್ಲಿ ಇತ್ತೀಚೆಗೆ ನ್ಯಾಯಮೂರ್ತಿ ಸತ್ಯಬ್ರತ ಸಿಂಹ ಸ್ಮರಣಾರ್ಥ ಉದ್ಘಾಟನಾ ಭಾಷಣ ಮಾಡುತ್ತಿದ್ದ ನ್ಯಾಯಮೂರ್ತಿಗಳು, ಕೆಲವು ಎಲೆಕ್ಟ್ರಾನಿಕ್ ಮಾಧ್ಯಮಗಳು ನಡೆಸುತ್ತಿರುವ ವಿಚಾರಣೆಗಳು ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಮಾರಕ ಎಂದು ಹೇಳಿ ದೃಶ್ಯ ಮಾಧ್ಯಮಗಳು ಜವಾಬ್ದಾರಿ ಅರಿತು ವರ್ತಿಸಬೇಕು ಎಂಬ ಕಿವಿಮಾತು ಹೇಳಿದ್ದಾರೆ. ಒಂದು ಕಡೆ, ಪ್ರಕರಣಗಳು ನ್ಯಾಯಾಲಯಗಳಲ್ಲಿ ಕಾನೂನು ರೀತಿಯಲ್ಲಿ ನಡೆಯುತ್ತಿದ್ದರೆ, ಮತ್ತೊಂದೆಡೆ, ದೃಶ್ಯ ಮಾಧ್ಯಮಗಳು ಪರ್ಯಾಯ ವಿಚಾರಣೆ ನಡೆಸುವುದರಿಂದ ನ್ಯಾಯಾಲಯಗಳ ಕಾರ್ಯವ್ಯಾಪ್ತಿಯಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ನಡೆಸಿದಂತಾಗುತ್ತದೆ ಎಂದು ಹೇಳಿ ಈ ಪ್ರವೃತ್ತಿಯನ್ನು ನಿಲ್ಲಿಸಲು ಕರೆ ನೀಡಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕೆಲವು ವಿದ್ಯುನ್ಮಾನ ಮಾಧ್ಯಮಗಳು ತಾವೇ ನ್ಯಾಯಾಧೀಶರಂತೆ, ತಾವು ಹೇಳಿದ್ದೇ ವೇದವಾಕ್ಯ ಅನ್ನುವ ರೀತಿಯಲ್ಲಿ ವರ್ತಿಸುತ್ತಿವೆ. ಅವುಗಳಿಗೆ ನ್ಯಾಯಾಧೀಶರ ಪಾತ್ರವನ್ನು ನೀಡಿದವರು ಯಾರು? ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಬೊಬ್ಬೆ ಹೊಡೆಯುವ ಕೆಲವು ದೃಶ್ಯ ಮಾಧ್ಯಮಗಳು ತಲೆ ಚಿಟ್ಟು ಹಿಡಿಯುವಂತೆ, ಅರಚಾಡುವುದನ್ನು, ಕಿರಿಚಾಡುವುದನ್ನು ಅನೇಕ ಚಾನಲ್ಲುಗಳಲ್ಲಿ ನಾವು ಪ್ರತಿನಿತ್ಯ ನೋಡುತ್ತಲೇ ಇದ್ದೇವೆ. ಅನೇಕ ಸಮೂಹ ಮಾಧ್ಯಮಗಳು ಇಂದು ರಾಜಕಾರಣಿಗಳಿಂದಲೋ ಅಥವಾ ಬಂಡವಾಳಶಾಹಿಗಳಿಂದಲೋ ನಡೆಸಲ್ಪಡುತ್ತಿದ್ದು, ಅವುಗಳ ಕಾರ್ಯವೈಖರಿ ದಿಕ್ಕು ತಪ್ಪಿದಂತಿದ್ದು, ಜೊತೆಗೆ ವೀಕ್ಷಕರನ್ನು ಸಹ ದಿಕ್ಕು ತಪ್ಪಿಸುತ್ತಿದೆ. ಆದರೂ ಸಹ ಕೆಲವು ವಾಹಿನಿಗಳು ಅತ್ಯಂತ ಸಂಯಮ ಕಾಪಾಡಿಕೊಂಡು, ಯಾವುದನ್ನೂ ಅತಿರೇಕಕ್ಕೆ ತೆಗೆದುಕೊಂಡು ಹೋಗದೇ ಸಮಸ್ಯೆಗಳಿಗೆ ತಾರ್ಕಿಕ ಅಂತ್ಯ ಕಂಡು ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಒಟ್ಟಾರೆ, ದೃಶ್ಯ ಮಾಧ್ಯಮಗಳಾಗಲಿ, ಮುದ್ರಣ ಮಾಧ್ಯಮಗಳಾಗಲಿ, ಸಂವಿಧಾನ ವಿಧಿಸಿರುವ ಕಟ್ಟುಪಾಡುಗಳನ್ನು ಉಲ್ಲಂಘಿಸದೇ, ತಮ್ಮ ವೃತ್ತಿ ಧರ್ಮದ ಮೌಲ್ಯಗಳನ್ನು ಎತ್ತಿ ಹಿಡಿಯಲು ಶ್ರಮಿಸಬೇಕು. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಮೂರ್ತಿಗಳ "ಕಿವಿಮಾತು' ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಮಂಗಳಮುಖಿಯರ ಕಾಟ ತಪ್ಪಿಸಿ

ಮಾನ್ಯರೇ,

ಮೈಸೂರಿನ ಅರಮನೆ ಮುಂಭಾಗದ ಜಯಚಾಮರಾಜೇಂದ್ರ ವೃತ್ತದಿಂದ ಕೆ.ಆರ್. ಸರ್ಕಲ್‌ಗೆ ಹೋಗುವ ಪಾದಚಾರಿ ರಸ್ತೆಯಲ್ಲಿ ಪ್ರತಿನಿತ್ಯ ಮಂಗಳಮುಖಿಯರ ಕಾಟ ವಿಪರೀತವಾಗಿದೆ. ಪ್ರತಿದಿನ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಈ ಪಾದಚಾರಿ ರಸ್ತೆಯಲ್ಲಿ ಸಂಚರಿಸಲು ದುಸ್ಸಾಹಸಪಡಬೇಕಾಗಿದೆ. ಮಂಗಳಮುಖಿಯರು ಸಾರ್ವಜನಿಕರ ಬಳಿ ಬಲವಂತವಾಗಿ ಹಣ ವಸೂಲು ಮಾಡುತ್ತಾರೆ. ಅದರಲ್ಲೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಇವರ ಮುಖ್ಯ ಗುರಿಯಾಗಿದೆ. ವಿದ್ಯಾರ್ಥಿಗಳ ತಲೆ ಮೇಲೆ ಕೈಇಟ್ಟು ಆಶೀರ್ವಾದ ಮಾಡಿ ಹಣ ವಸೂಲಿ ಮಾಡುತ್ತಾರೆ. ಹಣ ಕೊಡದೇ ಇದ್ದ ಪಕ್ಷದಲ್ಲಿ ನಿಮಗೆ ಆ ರೀತಿ ಆಗಲಿ.. ಈ ರೀತಿ ಆಗಲಿ... ಎಂದು ವಿದ್ಯಾರ್ಥಿಗಳನ್ನು ಹೆದರಿಸಿ ಹಣ ಪೀಕುತ್ತಾರೆ. ಸಾರ್ವಜನಿಕರು ಹಣ ನೀಡದೇ ಇದ್ದಲ್ಲಿ ಸುಮಾರು 6–8 ಜನ ಮಂಗಳಮುಖಿಯರು ಇವರನ್ನು ಸುತ್ತುವರೆದು ಬಾಯಿಗೆ ಬಂದ ಹಾಗೇ ಬೈದು ಹಣ ವಸೂಲು ಮಾಡುತ್ತಿದ್ದಾರೆ.

ಅನಿವಾರ್ಯವಾಗಿ ಸಾರ್ವಜನಿಕರು ತಮ್ಮ ಬಳಿಯಿರುವ ಹಣ ನೀಡಿ ಮುಂದೆ ಸಾಗಬೇಕಾಗುತ್ತದೆ. ಕಳೆದ ವಾರ ನಾನು ಮತ್ತು ನನ್ನ ಸ್ನೇಹಿತ ಈ ರಸ್ತೆಯಲ್ಲಿ ಸಂಚರಿಸುವಾಗ ನನಗೆ ಮತ್ತು ಸ್ನೇಹಿತನಿಗೆ ಮಂಗಳಮುಖಿಯರಿಂದ ಇದೇ ರೀತಿಯ ಅನುಭವ ಆಯಿತು. ಎಷ್ಟೋ ಸಾರ್ವಜನಿಕರು ಇವರಿಂದ ಮುಕ್ತಿ ಪಡೆಯಲು ಪಕ್ಕದ ರಸ್ತೆಯಲ್ಲಿ ಸಂಚರಿಸುತ್ತಾರೆ. ಸಂಬಂಧಪಟ್ಟವರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಈ ರಸ್ತೆಯಲ್ಲಿ ಸುಲಭವಾಗಿ ಸಂಚರಿಸಲು ಈ ಮಂಗಳಮುಖಿಗಳ ಕಾಟವನ್ನು ತಪ್ಪಿಸಬೇಕಾಗಿ ಮನವಿ.

–ನೊಂದ ನಾಗರಿಕರು, ಮೈಸೂರು.

ವಿದ್ಯಾರ್ಥಿನಿಲಯಗಳಲ್ಲಿ 'ಸ್ಪೋಕನ್ ಇಂಗ್ಲಿಷ್' ತರಬೇತಿ ಸ್ವಾಗತಾರ್ಹ

ಮಾನ್ಯರೆ,

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ "ಸ್ಫೂರ್ತಿಯ ನಡೆ" ಎಂಬ ಯೋಜನೆಯಡಿ ಬಿಸಿಎಂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ "ಸ್ಪೋಕನ್ ಇಂಗ್ಲಿಷ್" ಮತ್ತು "ವ್ಯಕ್ತಿತ್ವ ವಿಕಸನ" ತರಬೇತಿ ನೀಡಲು ನಿರ್ಧರಿಸಿದ್ದು, ಇಲಾಖೆ ಆದೇಶ ಹೊರಡಿಸಿದೆ. ಜೂನ್‌ನಲ್ಲಿಯೇ ಪ್ರಕ್ರಿಯೆ ಜಾರಿಯಾಗಿದೆ. ಮೈಸೂರಿನ ವಿದ್ಯಾರ್ಥಿನಿಲಯಗಳಲ್ಲಿಯೂ ಕೂಡ ತರಬೇತಿ ಕಾರ್ಯಕ್ರಮಗಳು ಸುಗಮವಾಗಿ ನಡೆಯುತ್ತಿವೆ. ಹಲವಾರು ಅನುಭವವುಳ್ಳ ಉಪನ್ಯಾಸಕರಿಂದ ಸ್ಪೋಕನ್ ಇಂಗ್ಲಿಷ್ ತರಗತಿ ಮತ್ತು ಸಮಾಜ ಸೇವೆ ಮಾಡುವವರಿಂದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ. ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇದ್ದು ಈ ಯೋಜನೆಯು ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತಿದೆ.

–ಮಹಾಂತೇಶ್.ಬಿ, ಕುವೆಂಪುನಗರ ವಿದ್ಯಾರ್ಥಿನಿಲಯ, ಮೈಸೂರು.

ಮಂಕಿ ಪಾಕ್ಸ್‌ಗೆ ಮುನ್ನೆಚ್ಚರಿಕೆ ಅವಶ್ಯ

ಮಾನ್ಯರೆ,

WHO ಮಂಕಿ ಪಾಕ್ಸ್ ಕಾಯಿಲೆಯನ್ನು ಜಾಗತಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದ ಬೆನ್ನಿಗೇ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯೂ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಅಗತ್ಯ ಸೂಚನೆ ರವಾನಿಸಿದೆ.

ನೂರಾರು ದೇಶಗಳಲ್ಲಿ ಈಗಾಗಲೇ ಸಾವಿರಾರು ಮಂದಿಯಲ್ಲಿ ಮಂಕಿಪಾಕ್ಸ್ ಕಾಣಿಸಿಕೊಂಡಿದೆ. ಪ್ರಕರಣ ಪತ್ತೆ ಹಿನ್ನೆಲೆಯಲ್ಲಿ ತಜ್ಞರು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಿದ್ದಾರೆ. ಭಾರತದಲ್ಲಿ ಪತ್ತೆಯಾದ 4ನೇ ಮಂಕಿಪಾಕ್ಸ್ ಪ್ರಕರಣದ ರೋಗಿಗೆ ಟ್ರಾವೆಲ್ ಹಿಸ್ಟರಿ ಇರಲಿಲ್ಲ. ಹೀಗಾಗಿ ದೇಶದಲ್ಲಿಯೂ ಆತಂಕ ವ್ಯಕ್ತವಾಗಿದೆ.

ತಜ್ಞರ ಸಲಹೆಯಂತೆ ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಇಲಾಖೆ ಮುಂದಾಗಿದೆ. ರಾಜ್ಯದ ಎಲ್ಲಾ ಜಿಲ್ಲಾ ವೈದ್ಯಾಧಿಕಾರಿಗಳು, ಸಿಎಚ್‌ಒ, ಜಿಲ್ಲಾ ಆಸ್ಪತ್ರೆಗಳ ನಿರ್ದೇಶಕರ ಜೊತೆಗೆ ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಗಳು ಸಭೆ ನಡೆಸಿದ್ದರು. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿಯೂ ಎರಡು ಬೆಡ್‌ಗಳ ಪ್ರತ್ಯೇಕ ವಾರ್ಡ್ ಮೀಸಲಿರಿಸಬೇಕು ಎಂದು ಅವರು ಸೂಚನೆ ನೀಡಿದ್ದಾರೆ.

Covid-19 ರಿಂದ ಈವಾಗ ತಾನೇ ಸುಧಾರಿಸುತ್ತಿರುವ ನಮಗೆ ಇದೊಂದು ದೊಡ್ಡ ಎಚ್ಚರಿಕೆ. ಆದಷ್ಟು ಸುರಕ್ಷಿತವಾಗಿ ಇರಬೇಕು.

–ತೇಜಸ್ ಕುಮಾರ್. ಎ, ಮಹಾರಾಜ ಕಾಲೇಜು, ಮೈಸೂರು.

ಹೆಚ್.ಎಸ್.ಶಂಕರಲಿಂಗೇಗೌಡ

ಚಾಮರಾಜ ಕ್ಷೇತ್ರದ ಬಿಜೆಪಿ ಮಾಜಿ ಶಾಸಕ: ಒಂದು ನೆನಪು

ಎಸ್.ಟಿ. ರವಿಕುಮಾರ್

'ನನ್ನ ಮನೆ, ಕಚೇರಿ ಬಾಗಿಲು ಸರ್ವರಿಗೂ ಸದಾ ತೆರೆದಿದೆ' ಎನ್ನುತ್ತಿದ್ದ ಸಮಾಜಮುಖಿ ರಾಜಕಾರಣಿ, ಬಿಜೆಪಿ ವಿಧಾನ ಸಭಾ ಸದಸ್ಯ ದಿವಂಗತ **ಹೆಚ್.ಎಸ್.ಶಂಕರಲಿಂಗೇಗೌಡರು** ಬದುಕಿದ್ದರೆ ಅವರಿಗೆ ಇವತ್ತು 75 ವರ್ಷ ಪ್ರಾಯ.

'ರಾಜಕೀಯ ಒಂದು ಚದುರಂಗ, ನಾನು ಮಾಡುವೆ ಬಹಿರಂಗ, ಅದುವೇ ಮಹಾ ಕುತಂತ್ರಿಗಳ ಸಂಘ' ಎಂದು ತಮಗೆ ಪಕ್ಷದ ನಡೆಯಿಂದ ಬೇಸರವಾದಾಗಲೆಲ್ಲಾ ಬಹಿರಂಗವಾಗಿಯೇ ಸಭೆ–ಸಮಾರಂಭಗಳಲ್ಲಿ ತಮ್ಮ ಅಸಮಾಧಾನವನ್ನು ಹೊರ ಹಾಕುತ್ತಿದ್ದ ಜನನಾಯಕ ಶಂಕರಲಿಂಗೇಗೌಡರು, ನೇರ ನಡೆ–ನುಡಿಗೆ ಖ್ಯಾತರಾಗಿದ್ದರು.

ಮಂಡ್ಯ ಜಿಲ್ಲೆ, ಹೆಮ್ಮಿಗೆ ಗ್ರಾಮದ ಸಿದ್ದೇಗೌಡ ಮತ್ತು ಕೆಂಪಮ್ಮ ದಂಪತಿಯ ಮಗನಾಗಿ 1947ರ ಆಗಸ್ಟ್ 16ರಂದು (ವರ ಮಹಾಲಕ್ಷ್ಮಿ ಹಬ್ಬ) ಜನಿಸಿದ್ದ ಗೌಡರು, ಬಿಎಸ್ಸಿ ಪದವೀಧರ. 1983ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಮೈಸೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿ, 1988ರಲ್ಲಿ ಮೈಸೂರು ಮೇಯರ್ ಆಗಿ 3 ತಿಂಗಳು, 12 ದಿನಗಳ ಕಾಲ ಅಧಿಕಾರ ನಡೆಸಿದ್ದರು. ಅವರು 1992ರಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ)ಕ್ಕೆ ಸೇರಿದ್ದರು.

ಅಷ್ಟರಲ್ಲಾಗಲೇ ತಮ್ಮ ಜನಪರ ಕಾಳಜಿ, ಸರಳತೆಯಿಂದ ಜನಮನ್ನಣೆ ಗಳಿಸಿದ್ದ ಗೌಡರು, 1994ರಲ್ಲಿ ಚಾಮರಾಜ ವಿಧಾನ ಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಹಾಲಿ ಶಾಸಕರಾಗಿದ್ದ ಕಾಂಗ್ರೆಸ್ಸಿನ ಕೆ.ಹರ್ಷಕುಮಾರ್‌ಗೌಡ ಅವರನ್ನು ಸೋಲಿಸಿ ಮೊದಲ ಬಾರಿ ವಿಧಾನಸಭೆಗೆ ಪಾದಾರ್ಪಣೆ ಮಾಡಿದರು. ತಮಗೆ ಜನ ನೀಡಿದ ಅಧಿಕಾರವನ್ನು ಜನಸೇವೆಗಾಗಿಯೇ ಮುಡಿಪಾಗಿಟ್ಟಿದ್ದ ಅವರು ಮುಂದೆಯೂ 1999, 2004 ಹಾಗೂ 2008ರ ಚುನಾವಣೆಯಲ್ಲೂ ಚಾಮರಾಜ ಕ್ಷೇತ್ರದಿಂದಲೇ ಸ್ಪರ್ಧಿಸಿ, ಸತತ 4 ಬಾರಿ ಶಾಸಕರಾದರು.

ನಿರಂತರವಾಗಿ ಗೆದ್ದು ಬಂದ ತಮಗೆ ಸಚಿವ ಸ್ಥಾನ ಸಿಗಲಿಲ್ಲ ಎಂದು ಅಸಮಾಧಾನಗೊಂಡ ಅವರು, ಬದಲಾದ ರಾಜಕೀಯ ಪರಿಸ್ಥಿತಿಯಿಂದ ಬಿಜೆಪಿ ತೊರೆದು ಜೆಡಿಎಸ್ ಸೇರಿ ನಂತರ 2013 ರಲ್ಲಿ ಅದೇ ಕ್ಷೇತ್ರದಿಂದ ಸ್ಪರ್ಧಿಸಿದರಾದರೂ **ಕಾಂಗ್ರೆಸ್ ಅಭ್ಯರ್ಥಿ ವಾಸು** ವಿರುದ್ಧ ಸೋಲನನುಭವಿಸಬೇಕಾಯಿತು. ಸದಾ ಜನರೊಂದಿಗಿದ್ದು, ಸೇವೆ ಸಲ್ಲಿಸುತ್ತಿದ್ದ ಗೌಡರಿಗೆ ಸೋಲಿನ ಹತಾಶೆ ಕಾಡತೊಡಗಿತು. ಸದಾ ಅವರೊಂದಿಗಿರುತ್ತಿದ್ದ ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳು ಹಾಗೂ ಅಧಿಕಾರಿ ವರ್ಗ ದಿನ ಕಳೆದಂತೆ ದೂರವಾದರು. ಇದರಿಂದ ಮಾನಸಿಕವಾಗಿ ಗೌಡರು ಕುಗ್ಗಿದ್ದರು. ನಂತರದ ದಿನಗಳಲ್ಲಿ ಅವರ ರಾಜಕೀಯ ಚಟುವಟಿಕೆಗಳು ಕಡಿಮೆಯಾಗುತ್ತಾ ಬಂದಿತಾದರೂ ಜನರ ಸೇವೆ ಮಾಡಬೇಕೆಂಬ ತುಡಿತ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಆದರೆ ಅನಾರೋಗ್ಯ ಗೌಡರನ್ನು ಬರಬರುತ್ತಾ ಆವರಿಸಿತು. ಆಸ್ಪತ್ರೆಗೂ ದಾಖಲಾಗಿ ಚಿಕಿತ್ಸೆ ಪಡೆಯುವ ವೇಳೆಯೇ 2014ರ ಏಪ್ರಿಲ್ 6ರಂದು ಚಿಕಿತ್ಸೆ ಫಲಕಾರಿಯಾಗದೇ ಅವರು ಇಹಲೋಕ ತ್ಯಜಿಸಿದರು.

ನೇರ ನಡೆ–ನುಡಿಯ ವ್ಯಕ್ತಿತ್ವ ಸಮಾಜ ಸೇವೆ, ಸದಾ ಹೋರಾಟ ಮನೋಭಾವದ ಶಂಕರಲಿಂಗೇಗೌಡರು, ಬಸವಣ್ಣನವರ ವಚನಗಳನ್ನು ಸಾಂದರ್ಭಿಕವಾಗಿ ನಿರರ್ಗಳವಾಗಿ ಹೇಳುತ್ತಿದ್ದರು. ಜನಾನುರಾಗಿಯಾಗಿ ಯಾರೇ ತಮ್ಮ ಬಳಿ ಬಂದರೂ ಅವರ ಸಮಸ್ಯೆಗಳನ್ನು ಆಲಿಸಿ, ತಡಮಾಡದೆ ಕೂಡಲೇ ಫೋನಾಯಿಸುವ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಲಸ ಮಾಡಿಕೊಡುವಂತೆ ತಾಕೀತು ಮಾಡುತ್ತಿದ್ದರು. ಹಲವು ಸಂದರ್ಭಗಳಲ್ಲಿ ಹಿಂದೆ–ಮುಂದೆ ನೋಡದೆ ಸಮಸ್ಯೆ ಹೇಳಿ ಕೊಳ್ಳಲು ಬಂದವರ ವಾಹನಗಳಲ್ಲಿಯೇ ಹೋಗಿ ಕೆಲಸ ಮಾಡಿಕೊಡುತ್ತಿದ್ದರು. ಅವರ ಆ ನಡೆಯೇ ಅಪಾರ ಜನ ಮನ್ನಣೆಗೆ ಕಾರಣವಾಯಿತು. ತಾನೊಬ್ಬ ಶಾಸಕ ಎಂಬ ಹಮ್ಮಿಲ್ಲದೆ ತಮ್ಮ ಬಳಿ ಬಂದ ನೊಂದವರಿಗೆ ನೆರವಾಗುತ್ತಿದ್ದರು. ಅನ್ಯಾಯ ಅಕ್ರಮಗಳಲ್ಲದೆ ಭ್ರಷ್ಟರ ವಿರುದ್ಧವೂ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದ ಶಂಕರಲಿಂಗೇಗೌಡರು ಜನಪರ, ಧೀಮಂತ ನಾಯಕರಾಗಿ ಹೊರಹೊಮ್ಮಿದ್ದರು. ಈ ಕಾರಣದಿಂದಲೇ ಅವರು ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಬರಲು ಸಾಧ್ಯವಾಯಿತು.

ಕೊಂಚ ಮುಂಗೋಪಿ ಎನಿಸಿದ್ದರೂ ನೊಂದವರ ಧ್ವನಿಯಾಗಿ ಜನಪರ ಹೋರಾಟದಲ್ಲಿ ಹಿಂದೆ ಮುಂದೆ ನೋಡದೆ ಭಾಗಿಯಾಗುತ್ತಿದ್ದರು ಎಂಬುದಕ್ಕೆ ಹಲವಾರು ನಿದರ್ಶನಗಳಿವೆ. ಅನೇಕ ಸಂದರ್ಭಗಳಲ್ಲಿ ಪ್ರತಿಭಟನೆ, ಧರಣಿ ನಡೆಸುತ್ತಿದ್ದವರು ಯಾರು, ಯಾವ ಕಾರಣಕ್ಕಾಗಿ ಎಂಬುದನ್ನೂ ನೋಡದೇ ಆ ಮಾರ್ಗದಲ್ಲಿ ಸಂಚರಿಸುತ್ತಿದ್ದರೆ ಥಟ್ಟನೆ ಕಾರು ನಿಲ್ಲಿಸಿ ಧರಣಿನಿರತರ ಜೊತೆ ತಾವೂ ಪ್ರತಿಭಟನೆಗಿಳಿಯುತ್ತಿದ್ದರು. ಒಂದೊಮ್ಮೆ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದರು. ಅದೇ ವೇಳೆ ಶಾಸಕರಾಗಿದ್ದ ಗೌಡರು ಕಾರ್ಯನಿಮಿತ್ತ ಡಿಸಿ ಕಚೇರಿಗೆ ಆಗಮಿಸಿದ್ದಾರೆ. ಅಲ್ಲಿ ಪ್ರತಿಭಟನಾನಿರತರ ನೋಡಿ ಹಿಂದು–ಮುಂದು ನೋಡದೇ ತಾವು ವಿದ್ಯಾರ್ಥಿಗಳೊಂದಿಗೆ ಸೇರಿ 'ಬೇಕೇ ಬೇಕು ನ್ಯಾಯ ಬೇಕು' ಎಂದು ಘೋಷಣೆ ಕೂಗಿದರು. ತಮ್ಮ ಬೇಡಿಕೆ ಈಡೇರಿಸುವಲ್ಲಿ ವಿಳಂಬವಾದ ಕಾರಣ ಅವರ ವಿರುದ್ಧವೇ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳು ಕಕ್ಕಾಬಿಕ್ಕಿಯಾದರು. ನಂತರ ನಿಮ್ಮ ಸಮಸ್ಯೆ ಏನು ಎಂದು ಕೇಳಿದ ಶಾಸಕರು, ಬೇಡಿಕೆಗಳು ಈಡೇರದೇ ತಮ್ಮ ವಿರುದ್ಧವೇ ಪ್ರತಿಭಟನೆ ನಡೆಸಲಾಗುತ್ತಿದೆ ಎಂಬುದು ಮನವರಿಕೆಯಾದರೂ, ಸ್ವಲ್ಪವೂ ಬೇಸರಿಸಿಕೊಳ್ಳದೆ ಸಹಾನುಭೂತಿಯಿಂದ ನಿಮ್ಮ ಸಮಸ್ಯೆಯನ್ನು ನಾನು ಈಡೇರಿಸುತ್ತೇನೆ. ನಿಮ್ಮ ಬೇಡಿಕೆ ಏನೆಂಬುದು ನನ್ನ ಗಮನಕ್ಕೆ ಬಂದಿರಲಿಲ್ಲ. ಸಂಬಂಧಪಟ್ಟವರೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆ ಪರಿಹರಿಸುತ್ತೇನೆ ಎಂದು ಶಂಕರಲಿಂಗೇಗೌಡರು ಹೇಳಿದಾಗ ಗೌಡರ ವಿರುದ್ಧ ಘೋಷಣೆ ಕೂಗುತ್ತಿದ್ದ ಪ್ರತಿಭಟನಾನಿರತ ವಿದ್ಯಾರ್ಥಿಗಳು, ನಂತರ ಅವರ ಪರ ಜೈಕಾರ ಕೂಗಿದ್ದುದು ಒಂದು ಉದಾಹರಣೆ.



> 'ಮುಳ್ಳಾದರೂ ಬಿಗಿಯಾಗಿ ಹಿಡಿ' ಎಂಬ ಮಾತನ್ನು ಗಣಪತಿ ಅವರು ಗೌಡರು ಬಿಜೆಪಿ ಬಿಡುವಾಗಲೂ ಹೇಳಿದರಂತೆ. ಆದರೆ ಅವರ ನಿರ್ಣಯ ಬದಲಾಗಲಿಲ್ಲ. ಗೌಡರು ಒಬ್ಬ ಹಠವಾದಿ, ಛಲವಾದಿ, ಧೈರ್ಯವಂತ, ಹೇಳಬೇಕಾದ ವಿಷಯವನ್ನು ಖಂಡ ತುಂಡವಾಗಿ ಹೇಳುವವರು ಎಂಬುದು ಗಣಪತಿಯವರ ಅನಿಸಿಕೆ.

ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಸೀಟು ಕೊಡಿಸುವುದು, ಶುಲ್ಕ ಕಡಿಮೆ ಮಾಡುವ ವಿಚಾರ, ಉದ್ಯೋಗ, ಸರ್ಕಾರಿ ಸವಲತ್ತು, ತಮ್ಮ ಬಡಾವಣೆಗಳ ಮೂಲಭೂತ ಸೌಲಭ್ಯ, ಆಶ್ರಯ ಮನೆಗಳು... ಹೀಗೆ ಹತ್ತು–ಹಲವು ಸಮಸ್ಯೆಗಳನ್ನು ಹೇಳಿಕೊಂಡು ಬಂದರೆ, ತಡಮಾಡದೆ ಸ್ಪಂದಿಸುತ್ತಿದ್ದ ಗೌಡರು ಕೇವಲ ಶಿಫಾರಸ್ಸು ಪತ್ರ ಕೊಟ್ಟು ಸುಮ್ಮನಾಗುತ್ತಿರಲಿಲ್ಲ. ಬದಲಾಗಿ ತಾವೂ ಅವರ ಜೊತೆ ಹೋಗಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ, ಕೆಲಸ ಮಾಡಿಕೊಡುತ್ತಿದ್ದ ಅವರ ಈ ನಡೆ ಜನರಿಗೆ ಬಹಳ ಇಷ್ಟವಾಗಿತ್ತು.

ಇಂತಹ ಅಪರೂಪದ ರಾಜಕಾರಣಿ, ಧಾರ್ಮಿಕ, ಸಾಮಾಜಿಕವಾಗಿಯೂ ಅನೇಕ ಸೇವಾ ಕೈಂಕರ್ಯಗಳಲ್ಲಿ ತೊಡಗಿಸಿಕೊಂಡು ಸಮಾಜಮುಖಿ ಕೆಲಸ ಮಾಡಲು ಸಾಧ್ಯವಾಗಿತ್ತು ಎಂಬುದು ಈಗ ನೆನಪು ಮಾತ್ರ. ಅವರ ಸರಳತೆ ಹಾಗೂ ಕಾರ್ಯ ದಕ್ಷತೆಯನ್ನು ಮೆಚ್ಚಿ ಇಂಟರ್‌ನ್ಯಾಷನಲ್ ಪಬ್ಲಿಷಿಂಗ್ ಹೌಸ್ ಸಂಸ್ಥೆಯು 2002ರಲ್ಲಿ **'ಬೆಸ್ಟ್ ಸಿಟಿಜನ್ ಆಫ್ ಇಂಡಿಯಾ'** ಪ್ರಶಸ್ತಿ ಹಾಗೂ 2005ರಲ್ಲಿ **'ಕರ್ನಾಟಕ ಮಕ್ಕಳ ಸ್ನೇಹಿ ಶಾಸಕ'** ಪ್ರಶಸ್ತಿ ನೀಡಿತ್ತು.

ರಾಜಕೀಯ ಪ್ರೌಢಿಮೆ ಜೊತೆಗೆ ಮಹಾ ದೈವಭಕ್ತರು, ಮಾನವೀಯ ಗುಣವಿದ್ದ ಶಂಕರಲಿಂಗೇಗೌಡರು ಮೈಸೂರಿನ ಟಿ.ಕೆ. ಲೇಔಟ್‌ನಲ್ಲಿ **ಮಾರುತಿ ಹಾಗೂ ಶ್ರೀ ವೆಂಕಟರಮಣ ದೇವಸ್ಥಾನಗಳನ್ನು** 1990ರಲ್ಲಿ ಸ್ಥಾಪಿಸಿ ಭಕ್ತಾದಿಗಳ ಧಾರ್ಮಿಕ ಕೈಂಕರ್ಯಕ್ಕೆ ಅವಕಾಶ ಕಲ್ಪಿಸಿದ್ದರು. ಸೇವಾ ಮಾರ್ಗ ವಿಸ್ತರಣೆಯಂತೆ ಅದರ ಎದುರು **ನಾಗಶಂಕರ ವೃದ್ಧ ಸೇವಾಶ್ರಮವನ್ನು** ಹಿರಿಯರಿಗಾಗಿ ನಿರ್ಮಿಸಿದ್ದರು. ಆದರೆ, ಅವರು ಕಾಲವಾದ ನಂತರ ವೃದ್ಧಾಶ್ರಮ ಯೋಜನೆ ನೆನೆಗುದಿಗೆ ಬಿದ್ದಿತು. ಇದೀಗ ಅವರ **ಪುತ್ರ ಹೆಚ್.ಎಸ್.ನಂದೀಶ್ ಪ್ರೀತಮ್** ಅವರು ತಮ್ಮ ತಂದೆಯವರ ಕನಸಿನ ಯೋಜನೆಯಾದ ವೃದ್ಧಾಶ್ರಮವನ್ನು ಸೇವೆಗೆ ಸಮರ್ಪಿಸಲು 2023ರ ಜನವರಿ ಮಾಹೆಯಲ್ಲಿ ಯೋಜನೆ ಹಾಕಿಕೊಂಡಿದ್ದಾರೆ. ಈ ಕಾರ್ಯದ ಮೂಲಕ ಅವರೂ ತಂದೆಯ ಸೇವಾ ಹಾದಿ ತುಳಿದಿದ್ದಾರೆ.

ತಾವು ಭಾಗವಹಿಸುತ್ತಿದ್ದ ಪ್ರತಿ ಕಾರ್ಯಕ್ರಮದಲ್ಲೂ ವಿಷಯಾಧಾರಿತ ಭಾಷಣ ಮಾಡಿ ಶ್ರೀರಾಮಚರಿತಾ, ಕನಕದಾಸರು, ಸರ್ವಜ್ಞ ಹಾಗೂ ಬಸವಣ್ಣನವರ ವಚನಗಳನ್ನು ಹರಳು ಹಿಡಿದಂತೆ ಹೇಳುವ ಮೂಲಕ ಸಭಿಕರಿಂದ ಭಾರೀ ಚಪ್ಪಾಳೆ ಗಿಟ್ಟಿಸುತ್ತಿದ್ದ ಅವರು, ತಮ್ಮ ವ್ಯಂಗ್ಯಭರಿತ ಮಾತುಗಳಿಂದ ರಾಜಕೀಯ ವ್ಯವಸ್ಥೆಯನ್ನು ಅಣಕಿಸುವ ಮೂಲಕ ರಾಜಕಾರಣಿಗಳಿಗೆ ಹಾಗೂ ಅಧಿಕಾರಸ್ಥರಿಗೆ ಚುರುಕು ಮುಟ್ಟಿಸುತ್ತಿದ್ದರು. ಅದೇ ಕಾರಣಕ್ಕಾಗಿ ಕೆಲವು ರಾಜಕಾರಣಿಗಳು ಶಂಕರಲಿಂಗೇಗೌಡರನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತಿದ್ದುದು ನಿಜ. ಅವರ ಅಧಿಕಾರಾವಧಿಯಲ್ಲಿ ತಮಗಾಗಿ ಆಸ್ತಿ ಮಾಡಿಕೊಳ್ಳಲಿಲ್ಲ. ಜನರ ನೆಮ್ಮದಿ, ಸಂತೋಷವೇ ನನಗೆ ಆಸ್ತಿ ಎಂದು ಹಲವು ಬಾರಿ ಹೇಳಿಕೊಳ್ಳುತ್ತಿದ್ದರು.

ತಮ್ಮಂತೆಯೇ ತಮ್ಮ ಪುತ್ರ ಹೆಚ್.ಎಸ್.ನಂದೀಶ್ ಪ್ರೀತಮ್‌ರನ್ನೂ ರಾಜಕೀಯವಾಗಿ ಬೆಳೆಸಿ, ಸಮಾಜಮುಖಿ ಸೇವೆಗೆ ತಮ್ಮ ಉತ್ತರಾಧಿಕಾರಿಯಾಗಿ ಮಾಡಬೇಕೆಂಬ ಹಂಬಲ ಗೌಡರಿಗಿತ್ತು. ಅದರಂತೆ ನಂದೀಶ್ ಕೂಡ ಬಿಜೆಪಿಯಲ್ಲಿ ಸಕ್ರಿಯರಾಗಿ ಮೈಸೂರು ನಗರ ಪಾಲಿಕೆ ವಾರ್ಡ್ ನಂ.22(ಈಗ 21)ರಲ್ಲಿ 2001ರಿಂದ 2018ರವರೆಗೆ ಸುಮಾರು 17 ವರ್ಷಗಳ ಕಾಲ ಪಾಲಿಕೆ ಸದಸ್ಯರಾಗಿ ಜನಪರ ಕೆಲಸ ಮಾಡಲು ಪ್ರೇರೇಪಣೆ ನೀಡಿದರು. ಕಳೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕೆಂಬ ಆಕಾಂಕ್ಷೆ ಹೊಂದಿದ್ದ ಪ್ರೀತಮ್‌ಗೆ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಟಿಕೆಟ್ ಕೈತಪ್ಪಿತು. ಪ್ರೀತಮ್, 2023ರಲ್ಲಿ ಶತಾಯಗತಾಯ ಬಿಜೆಪಿ ಪಕ್ಷದಿಂದಲೇ ಸ್ಪರ್ಧಿಸಬೇಕೆಂಬ ಮಹದಾಸೆಯನ್ನು ಹೊಂದಿದ್ದು, ಆ ಮೂಲಕ ರಾಜಕೀಯ ನೆಲೆ ಕಂಡುಕೊಳ್ಳಲು ಹಾತೊರೆಯುತ್ತಿದ್ದಾರೆ.

ಹಿರಿಯ ಪತ್ರಕರ್ತ, ಉದ್ಯಮಿ **ಕೆ.ಬಿ. ಗಣಪತಿ** ಅವರು, **'ಸ್ಟಾರ್ ಆಫ್ ಮೈಸೂರ್'** ಮತ್ತು **'ಮೈಸೂರು ಮಿತ್ರ'** ಪತ್ರಿಕೆಗಳ ಸಂಸ್ಥಾಪಕ ಸಂಪಾದಕರು. **1980ರಿಂದಲೂ ಶಂಕರಲಿಂಗೇಗೌಡರ ಆತ್ಮೀಯ ಗೆಳೆಯರು ಎನ್ನುವುದು ಬಹುಜನರಿಗೆ ಗೊತ್ತಿತ್ತು.** ಒಂದು ದೃಷ್ಟಿಯಲ್ಲಿ ಅವರು ರಾಜಕೀಯಕ್ಕೆ ಸಕ್ರಿಯವಾಗಿ ಬರಲು ಗಣಪತಿಯವರ ಪ್ರೇರಣೆ, ಪೂರ್ಣ ಬೆಂಬಲ, ಸಹಕಾರ ಇತ್ತು ಎಂದರೆ ತಪ್ಪಾಗಲಾರದು. ಆದರೆ, ಶಾಸಕರಾದ ನಂತರದ ದಿನಗಳಲ್ಲಿ ಗೌಡರು ಸದಾ ರಾಜಕೀಯದಲ್ಲೇ ಮುಳುಗಿ ಹೋಗಿದ್ದರು ಹಾಗೂ ನನ್ನನ್ನು "ಗುರುವಿನ" ಸ್ಥಾನಕ್ಕೇರಿಸಿ ಸ್ವಲ್ಪ ದೂರವಾದರು ಎನ್ನುತ್ತಾರೆ ಗಣಪತಿಯವರು.

'ಮುಳ್ಳಾದರೂ ಬಿಗಿಯಾಗಿ ಹಿಡಿ' ಎಂಬ ಮಾತನ್ನು ಗಣಪತಿ ಅವರು ಗೌಡರು ಬಿಜೆಪಿ ಬಿಡುವಾಗಲೂ ಹೇಳಿದರಂತೆ. ಆದರೆ ಅವರ ನಿರ್ಣಯ ಬದಲಾಗಲಿಲ್ಲ. ಗೌಡರು ಒಬ್ಬ ಹಠವಾದಿ, ಛಲವಾದಿ, ಧೈರ್ಯವಂತ, ಹೇಳಬೇಕಾದ ವಿಷಯವನ್ನು ಖಂಡ ತುಂಡವಾಗಿ ಹೇಳುವವರು ಎಂಬುದು ಗಣಪತಿಯವರ ಅನಿಸಿಕೆ. ತುಂಬಾ ಒಳ್ಳೆಯ ಮನುಷ್ಯ, ತನ್ನ ಕೈಲಾದಷ್ಟು ತುಂಬು ಮನಸ್ಸಿನಿಂದ ಬಡವರಿಗೆ ಸಹಾಯ ಮಾಡುತ್ತಿದ್ದರು ಎಂದು ಹೇಳುತ್ತಾ ಗಣಪತಿಯವರು ಗೌಡರ ಸೇವಾ ಪರತೆಗೆ ತಾವೇ ಪ್ರತ್ಯಕ್ಷದರ್ಶಿಯಾಗಿದ್ದ ಒಂದು ಉದಾಹರಣೆಯನ್ನು ಸಹ ಕೊಡುತ್ತಾರೆ.

ಒಮ್ಮೆ ಮುಡಾಕ್ಕೆ ಹೋಗಿದ್ದ ಗೌಡರು, ಮಹಡಿಯಿಂದ ಮೆಟ್ಟಿಲ ಮೂಲಕ ಕೆಳಗಿಳಿಯುತ್ತಿದ್ದರು. ಆಗ ಕಾಲುಗಳ ಸ್ವಾಧೀನವಿಲ್ಲದ ಒಬ್ಬ ಮಧ್ಯ ವಯಸ್ಕ ತೆವಳುತ್ತಲೇ ಮೆಟ್ಟಿಲು ಹತ್ತಿ ಮೇಲೆ ಬರಲು ಪ್ರಯಾಸಪಡುತ್ತಿದ್ದುದನ್ನು ಕಂಡ ಗೌಡರು ತಕ್ಷಣ ನಿಂತು, "ತಮ್ಮಾ, ಏಕಿಷ್ಟು ಕಷ್ಟಪಟ್ಟು ಮೇಲೆ ಹತ್ತುತ್ತೀಯಾ, ನಿನಗೆ ಏನಾಗಬೇಕು?" ಎಂದು ಅವನ ಕೈ ಹಿಡಿದುಕೊಂಡು ಮಾತಾಡಿಸಿದರು. ಆ ವಿಕಲಚೇತನ ವ್ಯಕ್ತಿ ಅದಾಗಲೇ ಮೂರು ಬಾರಿ ಮುಡಾಕ್ಕೆ ಬಂದಿದ್ದು, ಆದರೂ ತನ್ನ ಕೆಲಸ ಆಗದಿರುವುದಕ್ಕೆ ನೊಂದು ಅವರಲ್ಲಿ ನುಡಿದ. ಇನ್ನು ಕೇಳಬೇಕೆ! ಗೌಡರು ಅವನೊಂದಿಗೆ ವಾಪಸ್ಸು ಹೋಗಿ ಅಧಿಕಾರಿಗಳ ತೀವ್ರ ತರಾಟೆಗೆ ತೆಗೆದುಕೊಂಡು, ಅವನ ಕೆಲಸ ಮಾಡಿಸಿಕೊಟ್ಟು ವಾಪಸ್ಸಾದರು.

ಆಗಿನ ಕಾಲದಲ್ಲಿ ಸ್ಥಳೀಯ, ಜನಪ್ರಿಯ ಪತ್ರಿಕೆಗಳ ಸಂಪಾದಕನಾಗಿ "ನಾನು ಅನೇಕ ಸಲ ಜೀವ ಬೆದರಿಕೆ, ಪ್ರತಿಭಟನೆಗಳನ್ನು ಎದುರಿಸಬೇಕಾದಾಗ ನನ್ನ ಸಹಾಯಕ್ಕೆ ಬಂದವರು ಗೌಡರು" ಎಂದು ಗಣಪತಿಯವರು ಈಗಲೂ ಅವರನ್ನು ನೆನೆಯುತ್ತಾರೆ.

ಶಂಕರಲಿಂಗೇಗೌಡರದು ತುಂಬು ಕುಟುಂಬ. ಅವರ ರಾಜಕೀಯ ಯಶಸ್ಸು ಪ್ರಬುದ್ಧತೆ, ಸಾಧನೆಗೆ ಪತ್ನಿ ಶ್ರೀಮತಿ ನಾಗಲಕ್ಷ್ಮಿ ಶಂಕರಲಿಂಗೇಗೌಡ ಅವರು ಬೆನ್ನೆಲುಬಾಗಿ ನಿಂತಿದ್ದರು. ಪುತ್ರಿಯರಾದ ಹೆಚ್.ಎಸ್.ರಶ್ಮಿ, ಡಾ. ಹೆಚ್.ಎಸ್. ರಮ್ಯಾ, ಪುತ್ರರಾದ ಹೆಚ್.ಎಸ್.ನಂದೀಶ್ ಪ್ರೀತಮ್ ಹಾಗೂ ಹೆಚ್.ಎಸ್.ನಾಗೇಶ್ ಪ್ರೀತಮ್‌ರನ್ನೂ ಜೀವನದಲ್ಲಿ ಒಂದು ಉತ್ತಮ ಸ್ಥಿತಿಗೆ ತಲುಪಿಸುವಲ್ಲಿ ಗೌಡರು ಯಶಸ್ವಿಯಾದರು.

ಅಮಾನುಷವಾಗಿ ಪತ್ನಿ ಕೊಂದಿದ್ದ ಪತಿಗೆ ಜೀವಾವಧಿ ಶಿಕ್ಷೆ

ಮೈಸೂರು ಕೋರ್ಟ್ ಮಹತ್ವದ ತೀರ್ಪು

ಮೈಸೂರು,ಆ.4(ಎಸ್‌ಬಿಡಿ)–ಪತ್ನಿಯನ್ನು ಅಮಾನುಷವಾಗಿ ಹತ್ಯೆ ಮಾಡಿದ್ದ ವ್ಯಕ್ತಿಗೆ ಮೈಸೂರಿನ 5ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಚೌತಿ ಗ್ರಾಮದ ಕರಿಯಯ್ಯ ಅವರ ಪುತ್ರ ಕೆ.ಬಸವರಾಜುಗೆ ಈ ಜೈಲು ಶಿಕ್ಷೆ ವಿಧಿಸಲಾಗಿದೆ. ಈತ ಕೊಡಗಿನ ಸೋಮವಾರಪೇಟೆ ತಾಲೂಕು, ಕಣಿವೆ ಅಂಚೆ, ಭುವನಗಿರಿ ಗ್ರಾಮದ ಮಮತಾ ಅವರನ್ನು 2007ರ ಜೂ.18ರಂದು ವಿವಾಹವಾಗಿದ್ದ. ಆ ವೇಳೆ ಚಿನ್ನದ ಉಂಗುರ ಹಾಗೂ 20 ಸಾವಿರ ರೂ. ವರದಕ್ಷಿಣೆ ಪಡೆದಿದ್ದ. ಕೆಲಸ ಮಾಡದೆ ತಿರುಗಾಡಿಕೊಂಡು ಕಾಲಹರಣ ಮಾಡುತ್ತಿದ್ದ ಈತ, ವಿವಾಹ ವೇಳೆ ನೀಡಿದ್ದ ಉಂಗುರವನ್ನೂ ಮಾರಾಟ ಮಾಡಿದ್ದ. ಅಲ್ಲದೆ ತವರಿನಿಂದ ಹಣ ತರುವಂತೆ ಪತ್ನಿಗೆ ನಿತ್ಯ ಚಿತ್ರಹಿಂಸೆ ನೀಡುತ್ತಿದ್ದ.

ಇದೆಲ್ಲದಕ್ಕಿಂತ ಹೆಚ್ಚಾಗಿ ಪತ್ನಿಯ ಶೀಲ ಶಂಕಿಸಿ, ಆಕೆ ತವರಿಗೂ ಹೋಗದಂತೆ ನಿರ್ಬಂಧ ವಿಧಿಸಿದ್ದ. ಪತ್ನಿ ಮಾತ್ರವಲ್ಲದೆ ಪುತ್ರಿಯೂ ಯಾರ ಮನೆಗೂ ಹೋಗದಂತೆ ಸೂಚನೆ ನೀಡಿದ್ದ. ಯಾರಾದರೂ ಪರಿಚಿತ ಗಂಡಸರೊಂದಿಗೆ ಮಾತನಾಡಿದರೂ ಅಕ್ರಮ ಸಂಬಂಧವಿದೆ ಎಂದು ಅನುಮಾನಿಸಿ, ಪತ್ನಿಗೆ ಥಳಿಸುತ್ತಿದ್ದ. ಹೀಗೆ ನಿತ್ಯ ಗಲಾಟೆ ಮಾಡುತ್ತಿದ್ದ ಬಸವರಾಜು, 2012ರಲ್ಲಿ ಪತ್ನಿಗೆ ಬೆಂಕಿ ಹಚ್ಚಿ ಹತ್ಯೆಗೆ ವಿಫಲ ಯತ್ನ ನಡೆಸಿದ್ದ. ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದ ಮಮತಾ, ಚಿಕಿತ್ಸೆ ಪಡೆದು ಗುಣವಾಗಿದ್ದರು.

ಆದರೂ ಬಸವರಾಜು ಮನಃಸ್ಥಿತಿ ಬದಲಾಗಲಿಲ್ಲ. ನಂತರವೂ ಪತ್ನಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುವುದನ್ನು ಮುಂದುವರೆಸಿದ. ಹೀಗೆ 2019ರ ಜನವರಿ 7ರಂದು ಗಲಾಟೆಯಾದ ವೇಳೆ ಪತ್ನಿಯ ಪರ್ಸ್‌ನಲ್ಲಿ ಹಣವಿರುವುದನ್ನು ಕಂಡು ಕೆಂಡಾಮಂಡಲವಾಗಿ ನಿನಗೆ ಹಣ ನೀಡಿದ್ದು ಯಾರು ಎಂದು ಥಳಿಸಿದ. ನಂತರ ಆಕೆಯನ್ನು ಮನೆ ಪಕ್ಕದ ಕೊಟ್ಟಿಗೆಗೆ ಎಳೆದುಕೊಂಡು ಹೋಗಿ ದೊಣ್ಣೆಯಿಂದ ತಲೆ ಹಿಂಭಾಗಕ್ಕೆ ಹೊಡೆದು ಗಾಯಗೊಳಿಸಿ, ಅಲ್ಲಿಯೇ ಇದ್ದ ಪ್ಲಾಸ್ಟಿಕ್ ಹಗ್ಗದಿಂದ ಕುತ್ತಿಗೆ ಬಿಗಿದು ಮೇಲ್ಛಾವಣಿಯ ಕಬ್ಬಿಣದ ರಾಡ್ (ಕಾವ್ ಕೋಲು)ಗೆ ಕಟ್ಟಿ ಅಮಾನುಷವಾಗಿ ಹತ್ಯೆ ಮಾಡಿದ್ದ.

ಈ ಸಂಬಂಧ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಆರ್.ಪ್ರದೀಪ್, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು, ಬಸವರಾಜು ವಿರುದ್ಧದ ಆರೋಪ ಸಾಕ್ಷ್ಯಾಧಾರಗಳಿಂದ ಸಾಬೀತಾದ ಕಾರಣ ಆತನಿಗೆ ಜೀವಾವಧಿ ಶಿಕ್ಷೆ ಮತ್ತು ಒಟ್ಟು 13,500 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ನಾಗಪ್ಪ ಸಿ.ನಾಕಮನ್ ವಾದ ಮಂಡಿಸಿದ್ದರು.

ನೆರೆಹಾನಿ ತುರ್ತು ಪರಿಹಾರಕ್ಕೆ 500 ಕೋಟಿ ಬಿಡುಗಡೆ: ಸಿಎಂ

ಕಾರವಾರ,ಆ.4–ರಾಜ್ಯಾದ್ಯಂತ ಅತಿವೃಷ್ಟಿಯಿಂದ ಹಾನಿಗೀಡಾದ ಪ್ರದೇಶಗಳಲ್ಲಿ ತುರ್ತು ಪರಿಹಾರ ಕಾರ್ಯಗಳಿಗೆ ತಕ್ಷಣವೇ 500 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಟ್ಕಳ ತಾಲೂಕಿನ ಮುಟ್ಟಳ್ಳಿ ಗ್ರಾಮದಲ್ಲಿ ಭೂ ಕುಸಿತದಿಂದ ನಾಲ್ವರು ಮೃತಪಟ್ಟ ಪ್ರದೇಶಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದಲ್ಲಿ 14 ಜಿಲ್ಲೆಗಳ 115 ಹಳ್ಳಿಗಳಲ್ಲಿ ಭಾರಿ ಮಳೆಯಿಂದಾಗಿ ನೆರೆ ಹಾನಿ ಸಂಭವಿಸಿದೆ. ಬುಧವಾರ ಮತ್ತೆ ತುಮಕೂರಿನಲ್ಲಿ ನಾಲ್ಕು ಜನ ಹಾಗೂ ವಿಜಯನಗರದಲ್ಲಿ ಓರ್ವರು ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ 600 ಮನೆಗಳು ಸಂಪೂರ್ಣ, 2 ಸಾವಿರಕ್ಕೂ ಹೆಚ್ಚು ಮನೆಗಳು ತೀವ್ರತರ ಹಾಗೂ 14 ಸಾವಿರಕ್ಕೂ ಹೆಚ್ಚು ಮನೆಗಳು ಭಾಗಶಃ ಹಾನಿಯಾಗಿದೆ. ಎಲ್ಲದಕ್ಕೂ ಕೂಡ ಅನುದಾನ ಬಿಡುಗಡೆ ಮಾಡಲು ಈಗಾಗಲೇ ಸೂಚಿಸಲಾಗಿದೆ. 21,431 ಹೆಕ್ಟೇರ್ ಪ್ರದೇಶ ಬೆಳೆ ನಾಶವಾಗಿದ್ದು, ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಜಂಟಿ ಸಮೀಕ್ಷೆ ಮಾಡಬೇಕಾಗಿರುವುದರಿಂದ ವರದಿ ಬಂದ ತಕ್ಷಣ ಪರಿಹಾರ ವಿತರಿಸಲಾಗುವುದು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು ರಿಂಗ್ ರಸ್ತೆಯಲ್ಲಿ ಅಪಾಯಕಾರಿ ಅಂಡರ್‌ಪಾಸ್‌ಗಳು

• ಎರಡು ದಶಕವಾದರೂ ಕ್ರಮಕ್ಕೆ ಮುಂದಾಗದ ಅಧಿಕಾರಿ ವರ್ಗ • ನಾಲ್ಕು ಪಥ ರಸ್ತೆಯಲ್ಲಿ ಡಿವೈಡರ್ ರಹಿತ ದ್ವಿಪಥ ಅಂಡರ್‌ಪಾಸ್ ಅಪಾಯಕಾರಿ • ಅಮಾಯಕರು ಬಲಿಯಾಗುತ್ತಿದ್ದರೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು


ಕೆ.ವಿ.ಶ್ರೀಧರ್

ಮೈಸೂರು, ಆ.4(ಎಸ್‌ಬಿಡಿ)– ಮೈಸೂರಿನ ರಿಂಗ್‌ರಸ್ತೆ ನಿರ್ಮಿಸಿ ಒಂದೂವರೆ ದಶಕವಾದರೂ ರೈಲ್ವೆ ಅಂಡರ್‌ಪಾಸ್ ಸೇತುವೆ ಬಳಿ ರಸ್ತೆ ವಿಸ್ತರಣೆ ಮಾಡದಿರುವುದರಿಂದ ಅಮಾಯಕರು ಜೀವ ಕಳೆದುಕೊಳ್ಳುವಂತಾಗಿದೆ ಎಂದು ನಗರ ಪಾಲಿಕೆ ಸದಸ್ಯರೂ ಆದ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದೊಳಗಿನ ವಾಹನ ದಟ್ಟಣೆ ಕಡಿಮೆಯಾಗುವಲ್ಲಿ ರಿಂಗ್ ರಸ್ತೆ ನೆರವಾಗಿದೆ. ಸುಮಾರು 15 ವರ್ಷಗಳಿಂದ ಈ ರಿಂಗ್ ರಸ್ತೆ ಬಳಕೆ ಮಾಡಲಾಗುತ್ತಿದೆ. ಆದರೆ ಅರಸೀಕೆರೆ, ಬೆಂಗಳೂರು ಹಾಗೂ ಆರ್‌ಬಿಐ ರೈಲ್ವೆ ಮಾರ್ಗದ ಅಂಡರ್‌ಪಾಸ್ ಸೇತುವೆಗಳ ಬಳಿ ರಸ್ತೆ ವಿಸ್ತರಣೆಯಾಗಿಲ್ಲ. ನಾಲ್ಕು ಪಥದ ರಿಂಗ್ ರಸ್ತೆ ರೈಲ್ವೆ ಅಂಡರ್‌ಪಾಸ್‌ಗಳ ಬಳಿ ಕಿರಿದಾದ ಡಿವೈಡರ್ ರಹಿತ ದ್ವಿಪಥ ರಸ್ತೆಯಾಗಿದೆ. ಇದು ಅಮಾಯಕರ ಜೀವಹಾನಿಗೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ರಿಂಗ್ ರಸ್ತೆಯಲ್ಲಿ ನಿತ್ಯ ಓಡಾಡುವ ಸ್ಥಳೀಯರಿಗೆ ಇಲ್ಲಿನ ಸ್ಥಿತಿಗತಿ ತಿಳಿದಿರುವುದರಿಂದ ಎಚ್ಚರಿಕೆಯಿಂದ ವಾಹನ ಚಾಲಿಸುತ್ತಾರೆ. ಆದರೆ ಬೇರೆ ಭಾಗಗಳಿಂದ ಬರುವ ದೊಡ್ಡ ಟ್ಯಾಂಕರ್, ಟ್ರಕ್, ಲಾರಿಗಳು, ಪ್ರವಾಸಿ ವಾಹನಗಳ ಚಾಲಕರಿಗೆ ರಸ್ತೆಯ ಬಗ್ಗೆ ತಿಳಿದಿರುವುದಿಲ್ಲ. ನಾಲ್ಕು ಪಥದ ರಸ್ತೆಯಲ್ಲಿ ವೇಗವಾಗಿ ಬಂದು ರೈಲ್ವೆ ಅಂಡರ್‌ಪಾಸ್ ಬಳಿ ರಸ್ತೆ ಕಿರಿದಾಗುವುದನ್ನು ತಕ್ಷಣಕ್ಕೆ ಗುರುತಿಸಲಾಗದೆ ವಾಹನವನ್ನು ಬಲಕ್ಕೆ ತಿರುಗಿಸಿ ಎದುರಿನಿಂದ ಬರುವ ವಾಹನಗಳಿಗೆ ಡಿಕ್ಕಿ ಹೊಡೆಯುತ್ತಾರೆ. ಅದೃಷ್ಟವಶಾತ್ ಆ ಸ್ಥಳದಲ್ಲಿ ಅಪಘಾತ ತಪ್ಪಿದರೂ ಅಂಡರ್ ಪಾಸ್ ಬಳಿಕ ತಕ್ಷಣ ಎಡಕ್ಕೆ ತಿರುವು ಪಡೆಯಬೇಕೆಂದು ತಿಳಿಯದೆ ನೇರವಾಗಿ ಚಾಲಿಸುತ್ತಾರೆ.



ಇಂದು ಪ್ರತಿಭಟನೆ

❝ ಮೈಸೂರಿನಲ್ಲಿರುವ ಎಲ್ಲಾ ಕಿರಿದಾದ ರೈಲ್ವೆ ಅಂಡರ್ ಪಾಸ್‌ಗಳನ್ನು ವಿಸ್ತರಿಸಬೇಕು. ಈ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಾಳೆ(ಆ.5) ಬೆಳಗ್ಗೆ 9ರಿಂದ ಮಧ್ಯಾಹ್ನ 2ಗಂಟೆವರೆಗೆ ರಾಯಲ್ ಇನ್ ಜಂಕ್ಷನ್ ಸಮೀಪದ ಅರಸೀಕೆರೆ ರೈಲ್ವೆ ಟ್ರ್ಯಾಕ್ ಅಂಡರ್‌ಪಾಸ್ ಬಳಿ ಪ್ರತಿಭಟನೆ ನಡೆಸಲಾಗುವುದು. ಇದೇ ವೇಳೆ ರಿಂಗ್‌ರಸ್ತೆ ಅಂಡರ್‌ಪಾಸ್ ಅವಾಂತರದಿಂದ ಅಪಘಾತದಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುವುದು. **–ಕೆ.ವಿ.ಶ್ರೀಧರ್**

ಆಗಲೂ ಎದುರಿನಿಂದ ಬರುವ ವಾಹನಗಳು ಅಥವಾ ಮುಂಭಾಗದಲ್ಲಿ ಎಡಕ್ಕೆ ತಿರುವು ಪಡೆಯುವವರಿಗೆ ಡಿಕ್ಕಿ ಹೊಡೆಯುತ್ತದೆ. ಹೀಗೆ ನಿರಂತರವಾಗಿ ಅಪಘಾತ ಸಂಭವಿಸುತ್ತಿದ್ದು ವ್ಯವಸ್ಥೆಯ ಅವೈಜ್ಞಾನಿಕ ಕೆಲಸಕ್ಕೆ ಸಾರ್ವಜನಿಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಮೊನ್ನೆಯಷ್ಟೇ ರಾಯಲ್ ಇನ್ ಜಂಕ್ಷನ್ ಹಾಗೂ ಜಿಆರ್‌ಎಸ್ ನಡುವಿನ ಅರಸಿಕೆರೆ ಮಾರ್ಗದ ರೈಲ್ವೆ ಅಂಡರ್‌ಪಾಸ್ ಬಳಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಮಹಿಳೆ ಮೇಲೆ ಟ್ಯಾಂಕರ್ ಹರಿದು ಸಾವನ್ನಪ್ಪಿದರು. ಟ್ಯಾಂಕರ್ ಚಕ್ರ ಹರಿದು ಅವರ ದೇಹ ಅಪ್ಪಚ್ಚಿಯಾಗಿತ್ತು. ರಿಂಗ್ ರಸ್ತೆಯಲ್ಲಿ ಭಾರೀ ವಾಹನಗಳಲ್ಲದೆ ದ್ವಿಚಕ್ರ ವಾಹನಗಳ ಸಂಚಾರವೂ ಹೆಚ್ಚಿದೆ. ಮಹಿಳೆಯರು ದ್ವಿಚಕ್ರ ವಾಹನದಲ್ಲಿ ಶಾಲೆ ಮತ್ತು ಮನೆಗೆ ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ, ಕಾರ್ಮಿಕರೂ ಹೆಚ್ಚಾಗಿ ಓಡಾಡುತ್ತಾರೆ. ಅಪಘಾತದಿಂದ ಕ್ಷಣಾರ್ಧದಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಅಂಡರ್‌ಪಾಸ್ ಬಳಿ ರಸ್ತೆ ವಿಸ್ತರಣೆಗೆ ಹಲವು ಬಾರಿ ಆಗ್ರಹಿಸಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.



ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ದೆಹಲಿ ನಿವಾಸದಲ್ಲಿ ಭೇಟಿ ಮಾಡಿ, ಪ್ರಸ್ತುತ ರಾಜಕೀಯ ವಿಚಾರಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು.


ನಂಜನಗೂಡಿನ ತೊಳಸಿ ಜ್ಯುವೆಲರಿಗೆ ಯದುವೀರ್ ದಂಪತಿ ಭೇಟಿ



ನಂಜನಗೂಡಿನಲ್ಲಿ ಇತ್ತೀಚೆಗೆ ಉದ್ಘಾಟನೆಗೊಂಡ ತೊಳಸಿ ಜ್ಯುವೆಲರಿ ಶೋ ರೂಂಗೆ ಮೈಸೂರು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಪತ್ನಿ ಶ್ರೀಮತಿ ತ್ರಿಶಿಕಾ ಕುಮಾರಿ ಒಡೆಯರ್ ಭೇಟಿ ನೀಡಿದರು. ತೊಳಸಿ ಜ್ಯುವೆಲರಿ, ಮೈಸೂರಿನಲ್ಲಿ ಭವ್ಯವಾದ ಎರಡು ಶೋ ರೂಂಗಳೊಂದಿಗೆ ಪ್ರಧಾನ ಕಚೇರಿಯನ್ನು ಹೊಂದಿದ್ದು, ಇದೀಗ ನಂಜನಗೂಡಿನಲ್ಲಿ ಸುಮಾರು 3000 ಚದರಡಿ ವಿಸ್ತೀರ್ಣದಲ್ಲಿ ತನ್ನ ಘಟಕ ಆರಂಭಿಸಿದೆ. ಈ ಶೋ ರೂಂ 2 ಮಹಡಿಗಳನ್ನು ಹೊಂದಿದ್ದು, ಸಾಂಪ್ರದಾಯಿಕ ಮತ್ತು ಸಮಕಾಲೀನ ವಿನ್ಯಾಸಗಳ ವೈಭವದ ಮಿಶ್ರಣದೊಂದಿಗೆ ಮೇಳೈಸುತ್ತಿದೆ. ರಾಜಮನೆತನದ ದಂಪತಿ ಶೋ ರೂಂನಲ್ಲಿ ಒಂದು ಸುತ್ತು ಹಾಕಿ, ವಿನೂತನ ಅತ್ಯಾಕರ್ಷಕ ವಿನ್ಯಾಸಗಳ ಆಭರಣಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ ಶುಭ ಕೋರಿದರು.

ಮಂಜುನಾಥಪುರ, ಕುಂಬಾರಕೊಪ್ಪಲು ಕಾಲೋನಿ ನಿವಾಸಿಗಳಿಗೆ ಶೀಘ್ರ ಹಕ್ಕುಪತ್ರ

ಶಾಸಕ ಎಲ್.ನಾಗೇಂದ್ರರಿಂದ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಭೂಮಿ ಹಸ್ತಾಂತರ



ಮೈಸೂರು, ಆ.4(ಜಿಎ)– ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಮಂಜುನಾಥಪುರದಲ್ಲಿ 2 ಎಕರೆ ಹಾಗೂ ಕುಂಬಾರಕೊಪ್ಪಲು ಕಾಲೋನಿ (ಪಿ.ಕೆ.ಸ್ಯಾನಿಟೋರಿಯಂ ಕೊಳಚೆ ಪ್ರದೇಶ)ಯಲ್ಲಿನ 1 ಎಕರೆ ಭೂಮಿಯನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಗುರುವಾರ ಹಸ್ತಾಂತರಿಸಲಾಯಿತು.

ಒಂಟಿಕೊಪ್ಪಲಿನ ಚೆಲುವಾಂಬ ಪಾರ್ಕ್ ಬಳಿಯಿರುವ ಪಾಲಿಕೆಯ ಆಶ್ರಯ ಶಾಖೆ ಕಚೇರಿಯಲ್ಲಿ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಭೂಮಿ ಹಸ್ತಾಂತರಿಸಲಾಯಿತು. ಕಳೆದ ಸುಮಾರು 30 ವರ್ಷಗಳಿಂದ ಮಂಜುನಾಥಪುರ ಹಾಗೂ ಕುಂಬಾರಕೊಪ್ಪಲು ಕಾಲೋನಿಯಲ್ಲಿ ವಾಸವಿರುವ 377 ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಹಿನ್ನೆಲೆಯಲ್ಲಿನ ಮೊದಲ ಹಂತವಾಗಿ ಭೂಮಿ ಹಸ್ತಾಂತರಿಸಲಾಯಿತು.

ಬಳಿಕ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಂಜುನಾಥಪುರ ಹಾಗೂ ಕುಂಬಾರಕೊಪ್ಪಲು ಕಾಲೋನಿಯಲ್ಲಿ ಸುಮಾರು 30 ವರ್ಷಗಳಿಂದ 377 ಬಡ ಕುಟುಂಬ ವಾಸವಿದ್ದು, ಮನೆ ಹಕ್ಕು ಇಲ್ಲದೆಯೇ ಅವರ ಬಳಿ ಯಾವುದೇ ರೀತಿಯ ದಾಖಲೆಗಳು ಇರಲಿಲ್ಲ. ಈ ಕುರಿತು ಆಶ್ರಯ ಸಮಿತಿಯಲ್ಲಿ ಚರ್ಚಿಸಿ ಬಡ ಕುಟುಂಬದವರಿಗೆ ಮನೆಗಳ ಹಕ್ಕು ಪತ್ರ ನೀಡಲು ನಿರ್ಧರಿಸಲಾಗಿತ್ತು. ಅದರ ಮೊದಲ ಹಂತವಾಗಿ ಪಾಲಿಕೆ ವ್ಯಾಪ್ತಿಯಲ್ಲಿದ್ದ ಭೂಮಿಯನ್ನು ಕೊಳಚೆ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿದ್ದು, ಸದ್ಯದಲ್ಲಿಯೇ ಮನೆ ಹಕ್ಕು ಪತ್ರ ವಿತರಣೆ ಮಾಡಲಾಗುವುದು. ಹಾಗೆಯೇ ಮುಂದಿನ ದಿನಗಳಲ್ಲಿ ಬಾಕಿಯಿರುವ ಸುಮಾರು 200 ಮನೆಗಳಿಗೂ ಹಕ್ಕು ಪತ್ರ ನೀಡುವ ಗುರಿಯಿದೆ. ಎಂದು ತಿಳಿಸಿದರು.

ಬಡ ಕುಟುಂಬದವರ ಬಹುದಿನಗಳ ಕನಸು ನನಸಾಗುತ್ತಿದೆ ಎಂದು ಹೇಳಿದ ಅವರು, ಎಸ್‌ಸಿ–ಎಸ್ಟಿ ಸಮುದಾಯದವರು 2 ಸಾವಿರ ರೂ. ಹಾಗೂ ಸಾಮಾನ್ಯ ವರ್ಗದವರು 4 ಸಾವಿರ ರೂ., ಪಾವತಿಸಿ ಮನೆ ಹಕ್ಕು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು. ಪಾಲಿಕೆಯ ಆಶ್ರಯ ಶಾಖೆ ಆಡಳಿತಾಧಿಕಾರಿ ಉಮೇಶ್, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ, ಆಶ್ರಯ ಸಮಿತಿ ಸದಸ್ಯರಾದ ಅನೂಜ್ ಸಾರಸ್ವತ, ಮಹೇಶ್ ರಾಜೇ ಅರಸ್, ಮಹೇಶ್, ಕಂಚನ್ ಜೈನ್, ದಿನೇಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಆ.10ರಂದು ರಾಷ್ಟ್ರೀಯ ಜಂತುಹುಳು ನಿರ್ಮೂಲನಾ ದಿನ

ಮೈಸೂರು,ಆ.4–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಆ.10ರಂದು ಜಿಲ್ಲೆಯ ಎಲ್ಲಾ ಶಾಲೆ, ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರೀಯ ಜಂತುಹುಳು ನಿರ್ಮೂಲನಾ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂದು 1ರಿಂದ 19 ವರ್ಷದ ಎಲ್ಲಾ ಮಕ್ಕಳಿಗೆ ಮತ್ತು ಹದಿಹರೆಯದವರಿಗೆ ಜಂತುಹುಳು ನಿವಾರಣೆಗೆ ಉಚಿತವಾಗಿ ಅಲ್ಬೆಂಡರ್‌ಜೋಲ್ ಮಾತ್ರೆಗಳನ್ನು ನೀಡಲಾಗುವುದು ಮತ್ತು ಆಗಸ್ಟ್ 10ರಂದು ಮಾತ್ರೆ ಪಡೆಯಲು ವಂಚಿತರಾದ ಮಕ್ಕಳಿಗೆ ಆ.17ರಂದು ಅಲ್ಬೆಂಡರ್‌ಜೋಲ್ ಮಾತ್ರೆಗಳನ್ನು ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೆಆರ್‌ಎಸ್ ಹಿನ್ನೀರಲ್ಲಿ ನಡೆದ ವೈಎಐ ಯೂತ್ ಚಾಂಪಿಯನ್ ಶಿಪ್ ಸಮಾರೋಪ: ವಿಜೇತ ಸೈಲಿಂಗ್ ಪಟುಗಳಿಗೆ ಬಹುಮಾನ ವಿತರಣೆ



ಮೈಸೂರು, ಆ.4(ಎಂಕೆ)– ಕೆ.ಆರ್. ಸಾಗರ ಅಣೆಕಟ್ಟೆ ಹಿನ್ನೀರಿನಲ್ಲಿ ಕಳೆದ ಏಳು ದಿನಗಳ ಕಾಲ ನಡೆದ 'ವೈಎಐ ಯೂತ್ ಚಾಂಪಿಯನ್ ಶಿಪ್–2022'(ಹಾಯಿದೋಣಿ ಪಂದ್ಯಾವಳಿ) ಯಶಸ್ವಿಯಾಗಿ ನೆರವೇರಿತು.

ರಾಯಲ್ ಮೈಸೂರು ಸೈಲಿಂಗ್ ಕ್ಲಬ್(ಆರ್‌ಎಂಎಸ್‌ಸಿ) ಹಾಗೂ ರಾಯಲ್ ಮದ್ರಾಸ್ ಯಾಚ್ಟ್(ವಿಹಾರ ನೌಕೆ) ಕ್ಲಬ್ ವತಿಯಿಂದ ಜುಲೈ 29ರಿಂದ ಆಗಸ್ಟ್ 4ರವರೆಗೆ ಆಯೋಜಿಸಿದ್ದ ಹಾಯಿ ದೋಣಿ ಪಂದ್ಯಾವಳಿಯಲ್ಲಿ ದೇಶದ ವಿವಿಧ ರಾಜ್ಯಗಳಿಂದ ನೂರಾರು ಮಂದಿ ಯುವ ಸೈಲಿಂಗ್ ಪಟುಗಳು ಭಾಗವಹಿಸಿ ಗಮನ ಸೆಳೆದರಲ್ಲದೆ ಏಷ್ಯನ್ ಗೇಮ್ಸ್, ಯುರೋಪಿಯನ್ ಗೇಮ್ಸ್ ಹಾಗೂ ಒಲಿಂಪಿಕ್ಸ್‌ಗೂ ಅರ್ಹತೆ ಪಡೆಯುವ ಸಾಮರ್ಥ್ಯ ತೋರಿದರು.

ಬಹುಮಾನ ವಿತರಣೆ: ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಆಲೀವ್ ಗಾರ್ಡನ್‌ನಲ್ಲಿ ಗುರುವಾರ ಆಯೋಜಿಸಿದ್ದ 'ವೈಎಐ ಯೂತ್ ಚಾಂಪಿಯನ್ ಶಿಪ್–2022' ಸಮಾರೋಪ ಸಮಾರಂಭದಲ್ಲಿ ವಿಜೇತ ಸೈಲಿಂಗ್ ಪಟುಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

'ಆಪ್ಟಿಮಿಸ್ಟ್' ಪುರುಷರ ವಿಭಾಗದಲ್ಲಿ ಬೋಪಾಲ್ ಎನ್‌ಎಸ್‌ಎಸ್ ತಂಡದ ಶಶಾಂಕ್ ಬಾಥಮ್ ಪ್ರಥಮ, ಏಕಲವ್ಯ ಬಾಥಮ್ ದ್ವಿತೀಯ ಹಾಗೂ ಗೋವಾ ಎನ್‌ಬಿಎಸ್‌ಸಿ ತಂಡದ ಅಜಯ್ ಗಜ್ಜಿ ತೃತೀಯ ಬಹುಮಾನ ಪಡೆದರು. ಅದರಂತೆ ಮಹಿಳೆಯರ ವಿಭಾಗದಲ್ಲಿ ಬೋಪಾಲ್ ಎನ್‌ಎಸ್‌ಎಸ್ ತಂಡದ ದಿವ್ಯಾಂಶಿ ಮಿಶ್ರಾ ಪ್ರಥಮ, ವೈಸಿಹೆಚ್ ತಂಡದ ಸಗುನ್ ಜಾ ದ್ವಿತೀಯ ಹಾಗೂ ಲಹರಿ ಕೊಮ್ಮರವೆಲ್ಲಿ ತೃತೀಯ ಬಹುಮಾನ ಪಡೆದುಕೊಂಡರು.

'ಐಎಲ್‌ಸಿಎ–4'(ಎಲ್ಲಾ) ಹುಡುಗರ ವಿಭಾಗದಲ್ಲಿ ಟಿಎಸ್‌ಸಿ ತಂಡದ ಬಲ್ಲೆ ಕಿರಣ್ ಕುಮಾರ್ ಪ್ರಥಮ, ಅಕ್ಷಯ್ ವಿನ್ಸೆಂಟ್ ಸಿ ದ್ವಿತೀಯ ಹಾಗೂ ಕೃಷ್ಣ ದಿವಾಕರ್ ತೃತೀಯ ಬಹುಮಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಬೋಪಾಲ್ ಎನ್‌ಎಸ್‌ಎಸ್ ತಂಡದ ನೇಹಾ ಠಾಕೂರ್ ಪ್ರಥಮ, ಆರ್‌ಬಿವೈಸಿ ತಂಡದ ಆಲಿಯಾ ಸಬ್ರೀನ್ ಫೈಸಲ್ ದ್ವಿತೀಯ ಹಾಗೂ ವೈಸಿಹೆಚ್ ತಂಡದ ವೀರವಂಶಂ ವೈಶವಿ ತೃತೀಯ ಬಹುಮಾನ ಗೆದ್ದುಕೊಂಡರು.

ಐಎಲ್‌ಸಿಎ–6 ಪುರುಷರ ವಿಭಾಗದಲ್ಲಿ ಟಿಎಸ್‌ಸಿ ತಂಡ ಸಿಖಾಂಶು ಸಿಂಗ್ ಪ್ರಥಮ ಹಾಗೂ ಚುನ್ನು ಕುಮಾರ್ ದ್ವಿತೀಯ ಬಹುಮಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಭಾಗವಹಿಸಿದ್ದ ಏಕೈಕ ಪಟು ಬೋಪಾಲ್ ಎನ್‌ಎಸ್‌ಎಸ್ ತಂಡದ ರಿಕ್ತಾ ಡಂಗಿ ಪ್ರಥಮ ಬಹುಮಾನ ಪಡೆದರು. ಉಳಿದಂತೆ ಅತೀ ಚಿಕ್ಕ ವಯಸ್ಸಿನ ಸೈಲಿಂಗ್ ಪಟುಗಳಾದ ಆರ್‌ಎಂಎಸ್‌ಸಿ ತಂಡದ ಹೆಂಡರಿಕ್ ಜಬರಾಜ್.ಎಸ್(8 ವರ್ಷ) ಹಾಗೂ ಟಿಎನ್‌ಎಸ್‌ಎ ತಂಡದ ವಂತವ ರಘುರಾಮನ್(9 ವರ್ಷ)ಗೆ ವಿಶೇಷ ಯಂಗೆಸ್ಟ್ ಬಹುಮಾನ ನೀಡಲಾಯಿತು.

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬೇಕು: ಇದೇ ವೇಳೆ ಸಮಾರೋಪ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಸ್ವಾಮೀಜಿ ಮಾತನಾಡಿ, ಸಾಂಸ್ಕೃತಿಕ, ಸ್ವಚ್ಛ ಹಾಗೂ ಅರಮನೆ ನಗರಿ ಮೈಸೂರಿನಲ್ಲಿ ಸೈಲಿಂಗ್ ಪಂದ್ಯಾವಳಿ ನಡೆಯುತ್ತಿರುವುದೇ ವಿಶೇಷ ಹಾಗೂ ಶ್ಲಾಘನೀಯ. ಯುವ ಸೈಲಿಂಗ್ ಪಟುಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ರಾಯಲ್ ಮೈಸೂರು ಸೈಲಿಂಗ್ ಕ್ಲಬ್ ಸಂಸ್ಥಾಪಕ ಮುಖ್ಯಸ್ಥ ಕ್ಯಾಪ್ಟನ್ ಅರವಿಂದ ಶರ್ಮಾ, ಅಧ್ಯಕ್ಷ ಆರ್.ಅಜಯ್‌ಕುಮಾರ್ ಸಿಂಗ್, ವೈಎಐ ಕಾರ್ಯದರ್ಶಿ ದೀಕ್ಷಿತ್, ಎನ್‌ಸಿಸಿ ನಿರ್ದೇಶಕ ತನ್ವರ್, ಉದ್ಯಮಿಗಳಾದ ರಘುಲಾಲ್ ರಾಘವನ್, ಪವನ್ ರಂಗ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಸೆಮಿಕಂಡಕ್ಟರ್ ಫ್ಯಾಬ್ ಸ್ಥಾಪನೆಗೆ ಕೇಂದ್ರ ಸಚಿವರೊಂದಿಗೆ ಸಂಸದ ಪ್ರತಾಪ್‌ಸಿಂಹ ಚರ್ಚೆ



ಮೈಸೂರಿನ ಬಳಿ ಸೆಮಿಕಂಡಕ್ಟರ್ ಫ್ಯಾಬ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಗುರುವಾರ ನವದೆಹಲಿಯಲ್ಲಿ ಕೇಂದ್ರ ಎಲೆಕ್ಟ್ರಾನಿಕ್ ಮತ್ತು ತಂತ್ರಜ್ಞಾನ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಭೇಟಿ ಮಾಡಿದ್ದಾರೆ. ಈ ವೇಳೆ ಸೆಮಿಕಂಡಕ್ಟರ್ ಫ್ಯಾಬ್ ಘಟಕ ಸ್ಥಾಪನೆಗೆ ಶೀಘ್ರ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆಯೂ ಕೋರಿದರು.



ನಂಜನಗೂಡು ತಾಲೂಕು ಯುವ ಜನತಾ ದಳದ ಹಿಂದುಳಿದ ವರ್ಗಗಳ ನೂತನ ಅಧ್ಯಕ್ಷರಾಗಿ ಆರ್.ಯೋಗೇಶ್‌ರನ್ನು ಆಯ್ಕೆ ಮಾಡಿ, ನೇಮಕಾತಿ ಪತ್ರ ವಿತರಿಸಲಾಯಿತು. ಈ ವೇಳೆ ರಾಜ್ಯ ಸಮಿತಿ ಸದಸ್ಯ ಸತೀಶ್, ಜಿಲ್ಲಾಧ್ಯಕ್ಷ ಗಂಗಾಧರ ಗೌಡ, ತಾಲೂಕು ಅಧ್ಯಕ್ಷ ಪುನೀತ್, ಮುಖಂಡರಾದ ಶಿವಕುಮಾರಸ್ವಾಮಿ, ಬಿ.ಎಂ.ಚಂದ್ರು ಕಂಬಾರ, ನಿತಿನ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ವರಮಹಾಲಕ್ಷ್ಮಿ ಹಬ್ಬದ ವಿಶೇಷ

ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಮಹಿಳಾ ಭಕ್ತಾದಿಗಳಿಗೆ ಇಂದು ವಿಶೇಷ ಪ್ರಸಾದ



ಮೈಸೂರು,ಆ.4–ಧಾರ್ಮಿಕ ದತ್ತಿಯ ಚಾಮುಂಡೇಶ್ವರಿ ದೇವಸ್ಥಾನದ ವತಿಯಿಂದ ಆ.5ರಂದು ಶುಕ್ರವಾರ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ದೇವಾಲಯಕ್ಕೆ ಆಗಮಿಸುವ ಮಹಿಳಾ ಭಕ್ತಾದಿಗಳಿಗೆ ದೇವಾಲಯದಿಂದ ಅರಿಶಿನ, ಕುಂಕುಮ ಮತ್ತು ಬಳೆಗಳನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಕಲಾವಿದ ಏಕವ್ಯಕ್ತಿ ರಂಗ ಪ್ರಯೋಗ



ಮೈಸೂರು,ಆ.4(ಆರ್‌ಕೆಬಿ)–ವೀರು ಥಿಯೇಟರ್ ಟ್ರಸ್ಟ್ ವತಿಯಿಂದ ಆ.6ರಂದು ಸಂಜೆ 7 ಗಂಟೆಗೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ 'ಕಲಾವಿದ' ಏಕವ್ಯಕ್ತಿ ರಂಗ ಪ್ರಯೋಗ ಏರ್ಪಡಿಸಲಾಗಿದೆ ಎಂದು ಕಲಾವಿದ ಪಿ.ಶ್ರೇಯಸ್ ತಿಳಿಸಿದರು. ಸುಮಾರು 1 ಗಂಟೆ ಅವಧಿಯ ನಾಟಕ ಇದಾಗಿದ್ದು, ತಾವೇ ಏಕವ್ಯಕ್ತಿ ಪ್ರದರ್ಶನ ಮಾಡುತ್ತಿರುವುದಾಗಿ ಪತ್ರಕರ್ತರ ಭವನದಲ್ಲಿ ತಿಳಿಸಿದರು. ಕೋವಿಡ್ ಲಾಕ್‌ಡೌನ್ ವೇಳೆ ಸಮಾಜದ ಅದೆಷ್ಟೋ ಕಲಾವಿದರ ಜೀವನ ಆರ್ಥಿಕವಾಗಿ ಕಷ್ಟದಲ್ಲಿ ಸಿಲುಕಿ, ಅದರಿಂದ ಹೊರಬರಲು ಹೊಟ್ಟೆಪಾಡಿಗಾಗಿ ಬಣ್ಣ ಹಚ್ಚುವ ಕೈಗಳಿಗೆ ಪೊರಕೆ ಬಂದು ಎಷ್ಟೋ ಜನರು ಬದುಕಬೇಕಾಯಿತು. ಕಲಾವಿದರ ಸಂಕಷ್ಟ, ಕೆಲಸವಿಲ್ಲದೇ ಪರದಾಡಿದ ಕಲಾವಿದನ ತುಡಿತ ನಾಟಕದ ಕಥಾ ವಸ್ತುವಾಗಿದೆ. ರಚನೆ, ವಿನ್ಯಾಸ ಮತ್ತು ನಿರ್ದೇಶನ ವೀರು ಅಣ್ಣಿಗೇರಿ ಅವರದ್ದಾಗಿದೆ ಎಂದರು.

ಪಿಎಚ್.ಡಿ ಪದವಿ



ಮೈಸೂರು,ಆ.4–ಡಾ. ಎಂ.ಪಿ. ಸದಾಶಿವ ಅವರ ಮಾರ್ಗದರ್ಶನದಲ್ಲಿ ಕೆ.ಆರ್.ಕಿರಣ್ ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ ಶುಕ್ರವಾರ 5 ಆಗಸ್ಟ್ 2022

ಕೆಇಆರ್‌ಸಿ ನಿಯಮ ಉಲ್ಲಂಘನೆ: ಗ್ರಾಹಕರ ಹೆಚ್ಚುವರಿ ಹಣ ಹಿಂತಿರುಗಿಸಲು ಸೂಚನೆ

ವಿದ್ಯುತ್ ಸಂಪರ್ಕ ಕಲ್ಪಿಸುವ ವೇಳೆ ನಾಲ್ವರು ಗ್ರಾಹಕರಿಂದ ಅಧಿಕ ಹಣ ಪಡೆದಿದ್ದ ಚೆಸ್ಕಾಂ

ಮಡಿಕೇರಿ,ಆ.4– ವಿದ್ಯುತ್ ಸಂಪರ್ಕ ಕಲ್ಪಿಸುವ ಸಂದರ್ಭ ಕೆಇಆರ್‌ಸಿ ನಿಯಮ ಉಲ್ಲಂಘಿಸಿ ಗ್ರಾಹಕರಿಂದ ಅಧಿಕ ಹಣ ಪಡೆದ ಚೆಸ್ಕಾಂ ಸಂಬಂಧಿಸಿದ ನಾಲ್ವರು ಗ್ರಾಹಕರಿಗೆ ಹಣ ಮರಳಿಸುವಂತೆ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ತೀರ್ಪು ನೀಡಿದೆ.

ಲೇಔಟ್‌ಗಳನ್ನು ಹೊರತುಪಡಿಸಿ ಉಳಿದ ನಿವೇಶನಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂದರ್ಭ ಕೆಇಆರ್‌ಸಿ ನಿಯಮದನ್ವಯ ಅಭಿವೃದ್ಧಿ ಶುಲ್ಕ ಪಡೆಯಲು ಅವಕಾಶವಿಲ್ಲ. ಆದರೆ ಮಡಿಕೇರಿಯ ನಗರದ ಎಂ.ಕೆ.ಅರುಣ್ ಕುಮಾರ್, ಎಫ್.ಜೋಸೆಫ್, ಎಸ್.ಈ.ಹೇಮನಾಥ್ ಹಾಗೂ ಜಿ.ಮಹೇಶ್ವರಿ ಎಂಬವರಿಂದ ಕೆಇಆರ್‌ಸಿ ನಿಯಮದಡಿ ಅಧಿಕ ಶುಲ್ಕ ವಿಧಿಸಿದ ಆರೋಪವನ್ನು ಚೆಸ್ಕಾಂ ಎದುರಿಸುತ್ತಿತ್ತು.

ಕೊಡಗು ಜಿಲ್ಲಾ ವಿದ್ಯುತ್ ಗುತ್ತಿಗೆದಾರರ ಸಂಘ ಗ್ರಾಹಕರ ಹಿತದೃಷ್ಟಿಯಿಂದ ಚೆಸ್ಕಾಂ ಅಧಿಕಾರಿಗಳ ಈ ಕ್ರಮವನ್ನು ವಿರೋಧಿಸಿತ್ತು. ಆದರೆ ಅಧಿಕಾರಿಗಳು ಕೆಇಆರ್‌ಸಿ ನಿಯಮವನ್ನು ಸಮರ್ಥಿಸಿಕೊಂಡ ಹಿನ್ನೆಲೆ ಸಂಬಂಧಿಸಿದ ನಾಲ್ವರು ಗ್ರಾಹಕರು ನ್ಯಾಯಕೋರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮೆಟ್ಟಿಲೇರಿದ್ದರು. ಸುದೀರ್ಘ ವಿಚಾರಣೆ ನಡೆಸಿದ ಆಯೋಗ ಚೆಸ್ಕಾಂ ಕೆಇಆರ್‌ಸಿ ನಿಯಮ ಉಲ್ಲಂಘಿಸಿರುವುದನ್ನು ಪ್ರತಿಪಾದಿಸಿ ಗ್ರಾಹಕರ ಹಣವನ್ನು ಮರಳಿಸುವಂತೆ ತೀರ್ಪು ನೀಡಿದೆ.

ಎಂ.ಕೆ.ಅರುಣ್ ಕುಮಾರ್ ಅವರ ಪ್ರಕರಣ ಸಿಸಿ ಸಂಖ್ಯೆ:68/2019ರಲ್ಲಿ ವಿದ್ಯುತ್ ಸಂಪರ್ಕಕ್ಕೆ ಹೆಚ್ಚಿಗೆ ಪಡೆದ ಮೊತ್ತ 12 ಸಾವಿರ ರೂ. ಗಳನ್ನು ಹಿಂತಿರುಗಿಸತಕ್ಕದ್ದು, ತಪ್ಪಿದಲ್ಲಿ ಶೇ.6ರ ಬಡ್ಡಿ ದರದಂತೆ ಆದೇಶದ ದಿನಾಂಕದಿಂದ 45 ದಿನದ ಒಳಗೆ ಪಾವತಿಸಬೇಕು.

ಎಫ್.ಜೋಸೆಫ್ ಅವರ ಪ್ರಕರಣ ಸಿ.ಸಿ. ಸಂಖ್ಯೆ:69/2019ರಲ್ಲಿ ವಿದ್ಯುತ್ ಸಂಪರ್ಕಕ್ಕೆ ಹೆಚ್ಚಿಗೆ ಪಡೆದ ಮೊತ್ತ 16,650 ರೂ.ಗಳನ್ನು ಹಿಂತಿರುಗಿಸತಕ್ಕದ್ದು, ತಪ್ಪಿದಲ್ಲಿ ಶೇ.6 ಬಡ್ಡಿಯಂತೆ ಆದೇಶದ ದಿನಾಂಕದಿಂದ 45 ದಿನದ ಒಳಗೆ ಪಾವತಿಸಬೇಕು.

ಎಸ್.ಈ.ಹೇಮನಾಥ್ ಅವರ ಪ್ರಕರಣ ಸಿಸಿ ಸಂಖ್ಯೆ 70/2019ರಲ್ಲಿ ವಿದ್ಯುತ್ ಸಂಪರ್ಕಕ್ಕೆ ಹೆಚ್ಚಿಗೆ ಪಡೆದ ಮೊತ್ತ 24 ಸಾವಿರ ರೂ. ಹಿಂತಿರುಗಿಸತಕ್ಕದ್ದು, ತಪ್ಪಿದಲ್ಲಿ ಶೇ.6 ಬಡ್ಡಿಯಂತೆ ಆದೇಶದ ದಿನಾಂಕದ 45 ದಿನದ ಒಳಗೆ ಪಾವತಿಸಬೇಕು.

ಜಿ.ಮಹೇಶ್ವರಿ ಅವರ ಪ್ರಕರಣ ಸಿ.ಸಿ ಸಂಖ್ಯೆ:71/2019ರಲ್ಲಿ ವಿದ್ಯುತ್ ಸಂಪರ್ಕಕ್ಕೆ ಹೆಚ್ಚಿಗೆ ಪಡೆದ ಮೊತ್ತ 15,350 ರೂ.ಗಳನ್ನು ಹಿಂತಿರುಗಿಸತಕ್ಕದ್ದು, ತಪ್ಪಿದ್ದಲ್ಲಿ ಶೇ.6 ಬಡ್ಡಿಯಂತೆ ಆದೇಶದ ದಿನಾಂಕದ 45 ದಿನದ ಒಳಗೆ ಪಾವತಿಸಬೇಕು.

ಫಿರ್ಯಾದುದಾರರುಗಳಿಗೆ ಎದುರುದಾರರು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಪ್ರತಿ ಪ್ರಕರಣಗಳಿಗೆ ರೂ.10 ಸಾವಿರವನ್ನು ಪರಿಹಾರವಾಗಿ ನೀಡತಕ್ಕದ್ದು, ತಪ್ಪಿದಲ್ಲಿ ಶೇ.6 ಬಡ್ಡಿಯಂತೆ ಆದೇಶದ ದಿನಾಂಕದಿಂದ 45 ದಿನದ ಒಳಗೆ ಪಾವತಿಸಬೇಕು.

ಫಿರ್ಯಾದುದಾರರುಗಳ ನಾಲ್ಕು ಪ್ರಕರಣಗಳಲ್ಲಿ ಖರ್ಚು ವೆಚ್ಚಗಳಿಗೆ ಪ್ರತಿ ಪ್ರಕರಣಗಳಲ್ಲಿಯೂ ರೂ.5 ಸಾವಿರವನ್ನು ಪಾವತಿಸಲು ಎದುರುದಾರರು ಬಾಧ್ಯರಾಗಿರುತ್ತಾರೆ. ಫಿರ್ಯಾದುದಾರರಿಗೆ ಉಂಟು ಮಾಡಿರುವ ಮಾನಸಿಕ ವೇದನೆಗೆ ರೂ.5 ಸಾವಿರವನ್ನು ಪಾವತಿಸಲು ಎದುರುದಾರರು ಬಾಧ್ಯರಾಗಿರುತ್ತಾರೆ ಎಂದು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ತೀರ್ಪು ನೀಡಿದೆ. ನಾಲ್ವರು ಗ್ರಾಹಕರ ಪರವಾಗಿ ವಕೀಲ ಯಾಲದಾಳು ಮನೋಜ್ ಬೋಪಯ್ಯ ವಾದ ಮಂಡಿಸಿದರು.

ಈ ತೀರ್ಪನ್ನು ಸ್ವಾಗತಿಸಿರುವ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸತೀಶ್ ಪೂಣಚ್ಚ, ಪ್ರಧಾನ ಕಾರ್ಯದರ್ಶಿ ಪಿ.ಎನ್.ರವಿಚಂದ್ರ ಹಾಗೂ ಖಜಾಂಚಿ ಮಹಮ್ಮದ್ ಷರೀಫ್ ಚೆಸ್ಕಾಂ ಅಧಿಕಾರಿಗಳು ನಿಯಮ ಉಲ್ಲಂಘಿಸುವುದರಿಂದ ಗ್ರಾಹಕರಿಗೆ ಹೊರೆಯಾಗುತ್ತಿತ್ತು. ಇನ್ನು ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸಬಾರದು ಎಂದು ತಿಳಿಸಿದ್ದಾರೆ.

ಕಿರಗೂರು ಲೈನ್ ಮನೆ ಮೇಲೆ ಕಾಡಾನೆ ದಾಳಿ

ಮನೆಯಲ್ಲಿ ಯಾರೂ ಇಲ್ಲದಿದ್ದರಿಂದ ತಪ್ಪಿದ ಅಪಾಯ



ಗೋಣಿಕೊಪ್ಪ, ಅ.4– ಪೊನ್ನಂಪೇಟೆ ತಾಲೂಕಿನ ಕಿರಗೂರು ಗ್ರಾಮದಲ್ಲಿ ಸೋಮವಾರ ರಾತ್ರಿ ರಾಟೆಕಳ ಎಂಬಲ್ಲಿ ಪೊಕ್ಕಳಿಚಂಡ ಪೂವಪ್ಪ ನವರ ಲೈನ್ ಮನೆಗೆ ಕಾಡಾನೆ ಹಿಂಡು ದಾಳಿ ಮಾಡಿ ಮನೆ ಧ್ವಂಸಗೊಳಿಸಿದೆ. ಮನೆಯಲ್ಲಿ ಯಾರೂ ಇಲ್ಲದ ಕಾರಣ ಅಪಾಯ ತಪ್ಪಿದಂತಾಗಿದೆ.

ಪೊಕ್ಕಳಿಚಂಡ ಪೂವಪ್ಪ, ಪುರುಷೋತ್ತಮ ಎಂಬುವವರಿಗೆ ಸೇರಿದ ತೋಟದ ಕಾಫಿ ಗಿಡ, ತೆಂಗು, ಬಾಳೆ ಗಿಡ, ಸ್ಪಿಂಕ್ಲರ್ ಪೈಪ್ ಹಾನಿಯಾಗಿದೆ. ಸಣ್ಣ ಬೆಳೆಗಾರರು ಬೆಳೆಯನ್ನು ನಂಬಿಕೊಂಡು ಜೀವನವನ್ನು ಸಾಗಿಸುತ್ತಿದ್ದು ಮಳೆಯಿಂದಾಗಿ ಈಗಾಗಲೇ ಬೆಳೆಗೆ ಹೆಚ್ಚು ಹಾನಿಯಾಗಿದೆ. ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕಾಡಾನೆ ದಾಳಿ ನಡೆಸಿರುವುದು ಅವರನ್ನು ಸಂಕಷ್ಟಕ್ಕೆ ದೂಡಿದೆ. ಸ್ಥಳಕ್ಕೆ ಪೊನ್ನಂಪೇಟೆ ಅರಣ್ಯ ವಲಯ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆನೆಗಳನ್ನು ಕಾಡಿಗೆ ಅಟ್ಟಲು ಮುಂದಾಗಿದ್ದಾರೆ.

ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಬಿರುಕು

ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ


ಲಾರಿ ಚಾಲಕರ ಆಕ್ರೋಶ

ಮಡಿಕೇರಿ,ಆ.4– ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಬಿರುಕು ಮೂಡಿರುವ ಕಾರಣ ಪ್ರಯಾಣಿಕರ ವಾಹನಗಳಿಗೆ ಈ ರಸ್ತೆಯಲ್ಲಿ ತೆರಳಲು ಅವಕಾಶ ನೀಡಲಾಗಿದೆ. ಸಂಪಾಜೆ ಚೆಕ್ ಪೋಸ್ಟ್‌ನಲ್ಲಿ ಎಲ್ಲಾ ಸರಕು ಸಾಗಾಣಿಕೆ ವಾಹನಗಳನ್ನು ತಡೆ ಹಿಡಿಯಲಾಗಿದ್ದು, ಲಾರಿ ಚಾಲಕರು ಆಡಳಿತ ವ್ಯವಸ್ಥೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಪಾಜೆ, ಕಲ್ಲುಗುಂಡಿ ರಸ್ತೆಯಲ್ಲಿ ಮಡಿಕೇರಿ, ಮೈಸೂರು, ಚಾಮರಾಜನಗರ ಕಡೆಗೆ ತೆರಳಬೇಕಿದ್ದ ಪೆಟ್ರೋಲಿಯಂ, ಬುಲ್ಲೆಟ್ ಟ್ಯಾಂಕರ್, ಪಶು ಆಹಾರ ಸಾಗಾಟ ಸೇರಿದಂತೆ ಇನ್ನಿತರ ಸರಕುಗಳನ್ನು ಸಾಗಿಸುವ ನೂರಾರು ಲಾರಿಗಳು ಸಾಲುಗಟ್ಟಿ ನಿಂತಿವೆ. ಯಾವುದೇ ಮಾಹಿತಿ ನೀಡದೇ ಏಕಾಏಕಿ ಲಾರಿಗಳನ್ನು ತಡೆ ಹಿಡಿಯಲಾಗಿದೆ. ಲಾರಿಗಳ ಸಂಚಾರಕ್ಕೆ ರಸ್ತೆ ಬಂದ್ ಮಾಡಿದರೇ ಈ ಮೊದಲೇ ಏಕೆ ಮಾಹಿತಿ ನೀಡಲಿಲ್ಲ ಎಂದು ಕೊಡಗು ಜಿಲ್ಲಾಡಳಿತ ವಿರುದ್ಧ ಲಾರಿ ಚಾಲಕರು ಅಸಮಾಧಾನ ವ್ಯಕ್ತಪಡಿಸಿದರು.

ಮಾಣಿ ಚೆಕ್ ಪೋಸ್ಟ್‌ನಲ್ಲಿಯೇ ಸಂಪಾಜೆ–ಮಡಿಕೇರಿ ರಸ್ತೆ ಬಂದ್ ಎಂದು ಮಾಹಿತಿ ನೀಡಿದ್ದರೆ ಈ ರಸ್ತೆಯಲ್ಲಿ ಬರುತ್ತಿರಲಿಲ್ಲ. ಮಾಣಿ–ಶಿರಾಡಿ ಘಾಟ್ ಮಾರ್ಗವಾಗಿ ನಿಗದಿತ ಸ್ಥಳಕ್ಕೆ ತಲುಪಲು ಸಾಧ್ಯವಾಗುತ್ತಿತ್ತು. ಡೀಸೆಲ್‌ಗೆ 97 ರೂ. ಹಣ ನೀಡಿ ಈಗಾಗಲೇ 100 ಕಿ.ಮೀ ಕ್ರಮಿಸಿ ಸಂಪಾಜೆಗೆ ಬಂದಿದ್ದೇವೆ. ಆದರೆ ಲಾರಿಗಳನ್ನು ಪರ್ಯಾಯ ರಸ್ತೆಯಲ್ಲಿ ಕೊಂಡೊಯ್ಯುವಂತೆ ತಾಕೀತು ಮಾಡಲಾಗುತ್ತಿದೆ ಎಂದು ಚೆಕ್ ಪೋಸ್ಟ್ ಸಿಬ್ಬಂದಿಗಳ ವಿರುದ್ಧವೂ ಲಾರಿ ಚಾಲಕರು ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆದಿದೆ.

ವೀರ್ ಚಕ್ರ ಪುರಸ್ಕೃತ ಕರ್ನಲ್ (ನಿವೃತ್ತ) ಮಂಡೇಟಿರ ಎಂ.ರವಿ ನಿಧನ



ಮೈಸೂರು,ಆ.4– ವೀರ್ ಚಕ್ರ ಪುರಸ್ಕೃತರು ಹಾಗೂ ಬೆಂಗಳೂರಿನ ಕೋರಮಂಗಲ ನಿವಾಸಿ ಮಂಡೇಟಿರ ಮಂದಪ್ಪ ರವಿ (77) ಅವರು ಬುಧವಾರ (ಆ.3) ಬೆಂಗಳೂರಿನಲ್ಲಿ ನಿಧನರಾದರು.

ಪುತ್ರ ಸೇನಾ ಪದಕ (ಶೌರ್ಯ) ಪುರಸ್ಕೃತ ಕರ್ನಲ್ ಅವಿನ್ ಉತ್ತಯ್ಯ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಮೃತರು ಅಗಲಿದ್ದಾರೆ. 1945ರ ಮೇ 2ರಂದು ಜನಿಸಿದ ಕರ್ನಲ್ (ನಿವೃತ್ತ) ಮಂಡೇಟಿರ ಎಂ.ರವಿ ಅವರು, 1967ರಲ್ಲಿ ಸೇನಾ ಸೇವೆಗೆ ಸೇರಿದ್ದರು.

ಬಿಹಾರ ರೆಜಿಮೆಂಟ್ ಕಂಪನಿಯ ಮೇಜರ್ ಆಗಿದ್ದ ಸಂದರ್ಭದಲ್ಲಿ ಪೂರ್ವ ವಲಯದಲ್ಲಿ ಶತ್ರುಗಳ ಸದೆಬಡಿಯುವ ಕಾರ್ಯಾಚರಣೆ ನೇತೃತ್ವ ವಹಿಸಿ, ಯಶಸ್ವಿಯಾಗಿದ್ದರು. ಈ ದಾಳಿಯ ವೇಳೆಯಲ್ಲಿ ಇವರ ಕಂಪನಿಯು ತೀವ್ರವಾದ ಫಿರಂಗಿ ದಾಳಿಗೀಡಾಗಿತ್ತು. ಶೆಲ್ ಸ್ಪ್ಲಿಂಟರ್ ದಾಳಿಯಿಂದ ಇವರು ಗಂಭೀರವಾಗಿ ಗಾಯಗೊಂಡರು.

ಭಾರೀ ಬಾಂಬ್ ದಾಳಿ ನಡುವೆಯೂ ಗಾಯಗಳ ಪರಿವೇ ಇಲ್ಲದೆ ಮಂಡೇಟಿರ ಎಂ.ರವಿ ತಮ್ಮ ತಂಡವನ್ನು ಮುನ್ನಡೆಸಿದ್ದರು. ಅಲ್ಲದೆ, ಇವರ ಧೈರ್ಯವು ಕಂಪನಿಯ ಯೋಧರಲ್ಲಿ ಹೋರಾಡುವ ಕೆಚ್ಚು ಇಮ್ಮಡಿಗೊಳ್ಳುವಂತೆ ಮಾಡಿತ್ತು. ಅಂತಿಮವಾಗಿ ಇವರ ಕಂಪನಿಯು ತನ್ನ ಗುರಿ ಸಾಧಿಸಿ ಶತ್ರುಗಳ ಅಡಗು ತಾಣವನ್ನು ವಶಕ್ಕೆ ಪಡೆದು, ಇದರ ಜೊತೆಗೆ ಶತ್ರುಗಳ ಒಂದು ಟ್ಯಾಂಕರ್ ಅನ್ನು ವಶಕ್ಕೆ ಪಡೆಯುವಲ್ಲಿಯೂ ಇವರ ಕಂಪನಿ ಸಫಲವಾಯಿತು. 1971ರ ಡಿ.3ರಂದು ಇವರಿಗೆ ವೀರ ಚಕ್ರ ಪುರಸ್ಕಾರ ನೀಡಿ ಗೌರವಿಸಲಾಯಿತು.

ಬೆಂಗಳೂರಿನ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಬುಧವಾರ (ಆ.4) ಶ್ರೀಯುತರ ಅಂತ್ಯಕ್ರಿಯೆ ನೆರವೇರಿತು. ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಕರ್ನಲ್(ನಿವೃತ್ತ) ಮಂಡೇಟಿರ ಎಂ.ರವಿ ಅವರ ನಿಧನಕ್ಕೆ ಸಂತಾಪ ಸೂಚಕ ಸಭೆ ನಡೆಯಿತು. ಮೃತರು ಸದರಿ ಕಾಲೇಜಿನ ಹಳೇ ವಿದ್ಯಾರ್ಥಿ.



ಮದ್ದೂರಿನ ಹುಲಿಗೆರೆಪುರದ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕರ್ನಾಟಕ ಶೋಷಿತ ಸಮುದಾಯ ವೇದಿಕೆಯಿಂದ ಸಮವಸ್ತ್ರ ಮತ್ತು ಶೂ ವಿತರಿಸಲಾಯಿತು. ಈ ವೇಳೆ ವೇದಿಕೆಯ ಅಧ್ಯಕ್ಷ ಎಂ.ಟಿ.ಸುರೇಶ್ ಕಂಠಿ, ಗ್ರಾಪಂ ಅಧ್ಯಕ್ಷರಾದ ಶ್ವೇತಾ, ರವಿಕುಮಾರ, ಸದಸ್ಯರಾದ ಮಲ್ಲೇಶ್‌ಗೌಡ, ಮಹಾದೇವಿ, ದೇವೇಗೌಡ, ಅನಿತಾ ವೆಂಕಟೇಶ್, ಎಸ್‌ಡಿಎಂಸಿ ಅಧ್ಯಕ್ಷ ವೆಂಕಟೇಶ್, ಪಿಡಿಓ ರಾಜೇಶ್ವರಿ, ಮುಖಂಡರಾದ ರಾಜೇಶ್, ಮಹದೇವು, ಲವ ಇದ್ದರು.

33 ಸ್ತ್ರೀ ಶಕ್ತಿ ಸಂಘಗಳಿಗೆ ಬೀಜಧನ ಚೆಕ್ ವಿತರಣೆ



ಪಾಂಡವಪುರ, ಆ.4– 75ನೇ ಅಮೃತ ಮಹೋತ್ಸವದ ಅಂಗವಾಗಿ 'ಅಮೃತ ಸ್ವ ಸಹಾಯ ಕಿರು ಉದಮ್ಯ ಯೋಜನೆ'ಯಡಿ ಸ್ತ್ರೀಶಕ್ತಿ ಸ್ವ ಸಹಾಯ ಸಂಘಗಳಿಗೆ ಬೀಜಧನದ ಚೆಕ್‌ಗಳನ್ನು ಶಾಸಕ ಸಿ.ಎಸ್.ಪುಟ್ಟರಾಜು ವಿತರಿಸಿದರು. ಪಟ್ಟಣದ ತಾಪಂ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪಾಂಡವಪುರ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ತಾಪಂನಿಂದ ನಡೆದ ಚೆಕ್ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಪುಟ್ಟರಾಜು ಅವರು ಸುಮಾರು 33 ಸ್ವಸಹಾಯ ಸಂಘಗಳ ಗುಂಪಿನ ಸದಸ್ಯರಿಗೆ ಚೆಕ್ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಸ್ವಸಹಾಯ ಸಂಘಗಳು ಹುಟ್ಟಿಕೊಂಡು ಮೇಲೆ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದಾರೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಅದೆಷ್ಟು ಕುಟುಂಬಗಳಿಗೆ ಸ್ವ ಸಹಾಯ ಸಂಘಗಳು ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿವೆ ಎಂದರು. ಸರ್ಕಾರಗಳು ಎಷ್ಟೇ ಆರ್ಥಿಕ ನೆರವು ನೀಡಿದ್ದರೂ ತಮ್ಮ ಬದುಕು ಕಟ್ಟಿಕೊಳ್ಳುವ ಜವಾಬ್ದಾರಿಯನ್ನು ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರು ಮಾಡುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದಿಂದ ನೀಡಲಾಗುತ್ತಿರುವ ಸಾಲದ ಸೌಲಭ್ಯವನ್ನು ಪ್ರತಿಯೊಬ್ಬ ಮಹಿಳೆಯರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ಸೈನಿಕರು ಆ. 13ರವರೆಗೆ ಹಲವು ನೀರಿನ ಗೇಮ್‌ಗಳನ್ನು ಹಮ್ಮಿಕೊಂಡಿದ್ದಾರೆ. 11 ರಂದು ಪುನೀತ್‌ರಾಜಕುಮಾರ್ ಹೆಸರಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಸಾರ್ವಜನಿಕರು ಆಗಮಿಸಿ ವೀಕ್ಷಿಸಬಹುದು ಎಂದು ತಿಳಿಸಿದರು.

ಇದೇ ವೇಳೆ ರೇಷ್ಮೆ ಇಲಾಖೆಯಿಂದ ಫಲಾನುಭವಿಗಳಿಗೆ ಪ್ರೋತ್ಸಾಹಧನದಡಿ ಸೋಲಾರ್ ಲೈಟ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಅರ್ಚನಾ ಚಂದ್ರು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಶ್ಯಾದನಹಳ್ಳಿ ಚಲುವರಾಜು, ತಾಪಂ ಆಡಳಿತಾಧಿಕಾರಿ ಅಶೋಕ್, ತಹಸೀಲ್ದಾರ್ ಎಸ್.ಎಲ್.ನಯನಾ, ತಾಪಂ ಇಓ ಗಿರೀಶ್, ಸಿಡಿಪಿಓ ನಟರಾಜು ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ರವಿಕುಮಾರ್ ಇದ್ದರು.

ಮಳೆ ಹಾನಿ: ಕೆ.ಆರ್.ಪೇಟೆಯ ವಿವಿಧೆಡೆಗೆ ಅಧಿಕಾರಿಗಳೊಂದಿಗೆ ಸಚಿವ ಅಶೋಕ್ ಭೇಟಿ

ತಿಂಗಳೊಳಗೆ ಸಂತ್ರಸ್ತರಿಗೆ ಪರಿಹಾರ ನೀಡಲು ಸೂಚನೆ



ಕೆ.ಆರ್.ಪೇಟೆ, ಆ.4– ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಹಾನಿಯಾಗಿರುವ ತಾಲೂಕಿನ ಮಾವಿನಕಟ್ಟೆ ಕೊಪ್ಪಲು, ಸಂತೇಬಾಚಹಳ್ಳಿ, ಹುಬ್ಬನಹಳ್ಳಿ ಅಘಲಯ ಗ್ರಾಮಕ್ಕೆ ಗುರುವಾರ ಕಂದಾಯ ಸಚಿವ ಆರ್.ಅಶೋಕ್, ಜಿಲ್ಲಾ ಉಸ್ತುವಾರಿ ಸಚಿವ ಕೆಗೋಪಾಲಯ್ಯ ಹಾಗೂ ಕ್ರೀಡಾ, ಯುವಜನ ಸಬಲೀಕರಣ ಸಚಿವ ಡಾ.ಕೆ.ಸಿ.ನಾರಾಯಣಗೌಡ ಅವರು ಭೇಟಿ ನೀಡಿ ಪರಿಶೀಲಿಸಿದರು. ಮಳೆಯಿಂದ ಹಾನಿಯುಂಟಾದ ಸ್ಥಳಗಳಲ್ಲಿ ಸಮರೋಪಾದಿಯಲ್ಲಿ ನಷ್ಟದ ಅಂದಾಜು ತಯಾರಿಸಿ ತಿಂಗಳೊಳಗೆ ಪರಿಹಾರ ವಿತರಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಸೂಚನೆ ನೀಡಿದರು. ಕಂದಾಯ ಸಚಿವ ಆರ್. ಅಶೋಕ್ ಮಾತನಾಡಿ, ತಾಲೂಕಿನಲ್ಲಿ ಮಳೆಯಿಂದ ಮಾವಿನಕಟ್ಟೆಕೊಪ್ಪಲು, ಸಂತೇಬಾಚಹಳ್ಳಿ, ಹುಬ್ಬನಹಳ್ಳಿ, ದೊಡ್ಡಕ್ಯಾತನಹಳ್ಳಿ, ಲೋಕನಹಳ್ಳಿ, ಅಘಲಯ, ನಾಗರಘಟ್ಟ, ಮಾಳಗೂರು, ಬಿಲ್ಲೇನಹಳ್ಳಿ, ಗೊರವಿ, ದೇವರಹಳ್ಳಿ, ಮಾದಹಳ್ಳಿ, ಕಿಕ್ಕೇರಿ, ಬೀಚೇನಹಳ್ಳಿ ಕೆರೆಗಳು ಶೇ. 50ಕ್ಕಿಂತಲೂ ಹೆಚ್ಚು ಹಾನಿಯಾಗಿವೆ. ಅಲ್ಲದೇ ಪ್ರವಾಹದ ಮಾದರಿಯಲ್ಲಿ ನೀರು ರೈತರ ಜಮೀನಿಗೆ ನುಗ್ಗಿ ಲಕ್ಷಾಂತರ ರೂ. ಮೌಲ್ಯದ ಫಸಲು ನಾಶವಾಗಿದೆ. ಒಡೆದಿರುವ ಕೆರೆಗಳ ದುರಸ್ತಿಗೆ ತಲಾ 20 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ಏರಿ ದುರಸ್ತಿ ಕಾಮಗಾರಿ ಆರಂಭಿಸಬೇಕು ಎಂದು ಸೂಚನೆ ನೀಡಿದರು.

ಮಳೆಯಿಂದ ಜಾನುವಾರು, ಮನೆ ಕಳೆದುಕೊಂಡ ರೈತರಿಗೆ ತಕ್ಷಣವೇ ಅಧಿಕಾರಿಗಳು ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದ ಅವರು, ಅಘಲಯ ಗ್ರಾಮದ ಇಂದ್ರಮ್ಮಬೈರಶೆಟ್ಟಿ ಮತ್ತು ಮಂಜುಶೆಟ್ಟಿ, ಮರೀಗೌಡ ಎಂಬುವವರಿಗೆ ತಲಾ 95ಸಾವಿರ ರೂ. ಪರಿಹಾರದ ಚೆಕ್ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಸ್.ಅಶ್ವತಿ, ಎಸಿ ಬಿಸಿಶಿವಾನಂದಮೂರ್ತಿ, ತಹಸೀಲ್ದಾರ್ ಎಂ.ವಿ.ರೂಪಾ, ಸಂತೇಬಾಚಹಳ್ಳಿ ಹೋಬಳಿಯ ಉಪತಹಸೀಲ್ದಾರ್ ಗೌರಮ್ಮ, ರಾಜಸ್ವ ನಿರೀಕ್ಷಕ ರಮೇಶ್, ಮೂಡಾ ಅಧ್ಯಕ್ಷ ಕೆಶ್ರೀನಿವಾಸ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಪ್ರಭಾಕರ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಅಘಲಯ ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷೆ ಭಾರತೀಶ್ರೀಧರ್, ಸಂತೇಬಾಚಹಳ್ಳಿ ಗ್ರಾಪಂ ಅಧ್ಯಕ್ಷ ದೇವರಾಜು, ಸಂತೇಬಾಚಹಳ್ಳಿ ಹೋಬಳಿ ಬಿಜೆಪಿ ಅಧ್ಯಕ್ಷ ರಂಗಸ್ವಾಮಿ, ಓಬಿಸಿ ಘಟಕದ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಡಿ.ಪಿ.ಪರಮೇಶ್, ಮಾವಿನಕಟ್ಟೆ ಕೊಪ್ಪಲು ಚೇತನ್, ಬಿಲ್ಲೇನಹಳ್ಳಿ ಕುಮಾರ್, ಕೈಗೋನಹಳ್ಳಿ ಕುಮಾರ್, ದೊದ್ದನಕಟ್ಟೆ ಪಾಂಡು, ಚಂದ್ರಮೋಹನ್, ಚಿಕ್ಕತಾರಹಳ್ಳಿ ನಾಗೇಶ್, ಲಕ್ಷ್ಮೀಪುರ ಚಂದ್ರಶೇಖರ್, ಶೆಟ್ಟಿಹಳ್ಳಿ ಕೃಷ್ಣೇಗೌಡ, ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್ ಇದ್ದರು.

14 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ

ರಾಜ್ಯದ 14 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಸಾವಿರಾರು ಮಂದಿ ಸಂತ್ರಸ್ತರಾಗಿದ್ದಾರೆ. ಎಲ್ಲರಿಗೂ ಗಂಜಿ ಕೇಂದ್ರಗಳನ್ನು ತೆರೆದು ಸೂಕ್ತ ಸೌಲಭ್ಯ ಒದಗಿಸಲಾಗುತ್ತಿದೆ ಮಳೆ ಹಾನಿಯಿಂದ ಸಂಕಷ್ಟಕ್ಕೆ ಒಳಗಾದವರಿಗೆ ತಿಂಗಳೊಳಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರವಾಹ ಸಂತ್ರಸ್ತರಿಗೆ ವಿಶೇಷ ಯೋಜನೆ ರೂಪಿಸಲು ಮುಖ್ಯಮಂತ್ರಿಗಳು ನಿರ್ಧರಿಸಿದ್ದಾರೆ. ಎಲ್ಲಾ ಕಡೆ ಮುಖ್ಯಮಂತ್ರಿಗಳು, ನಾನು ಹಾಗೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಂತ್ರಸ್ತರನ್ನು ಭೇಟಿ ಮಾಡಿ ಪರಿಹಾರ ನೀಡಲಾಗುತ್ತಿದೆ ಎಂದರು.

ಸಿದ್ದು, ಡಿಕೆಶಿ ಈ ಜನ್ಮದಲ್ಲಿ ಒಂದಾಗಲ್ಲ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಈ ಜನ್ಮದಲ್ಲಿ ಒಂದಾಗುವುದಿಲ್ಲ. ಈ ಹಿಂದೆ ಕುಮಾರಸ್ವಾಮಿ ಅವರ ಕೈ ಎತ್ತಿ ಹಿಡಿದು ಹಾಳು ಮಾಡಿದರು. ಈಗ ಸಿದ್ದರಾಮಯ್ಯ ಅವರ ಕೈ ಎತ್ತಿದ್ದಾರೆ. ಮುಂದೆ ಅವರನ್ನು ಡಿ.ಕೆ.ಶಿವಕುಮಾರ್ ಹಾಳು ಮಾಡಲಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಮಾರ್ಮಿಕವಾಗಿ ನುಡಿದರು. ರಾಹುಲ್ ಗಾಂಧಿ ಅವರ ಸನ್ನೆಯ ಮೇರೆಗೆ ಬಲವಂತದಿಂದ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ಆಲಿಂಗನ ಮಾಡಿದ್ದಾರೆ. ಇದು ನಿಜವಾದ ಪ್ರೀತಿಯ ಅಪ್ಪುಗೆಯಲ್ಲ ಎಂದು ವ್ಯಂಗ್ಯವಾಡಿದರು.

ಜನರು ಸಂಕಷ್ಟದಲ್ಲಿದ್ದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜನ್ಮದಿನ ಆಚರಣೆ ಮಾಡಿ ಕಾಂಗ್ರೆಸ್ ಮುಖಂಡರು ಸಂಭ್ರಮಿಸಿದ್ದಾರೆ. ಬಿಜೆಪಿ ಕಾರ್ಯಕರ್ತ ಸತ್ತಾಗ ನಾವು ಸಾಧನಾ ಸಮಾವೇಶವನ್ನೇ ರದ್ದು ಮಾಡಿದೆವು. ಇದರಿಂದ ಜನರ ಪರ ಇರುವವರು ಯಾರು ಎಂಬುದು ತಿಳಿಯುತ್ತದೆ ಎಂದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	124.38 ಅಡಿ
ಒಳಹರಿವು	68,586 ಕ್ಯೂಸೆಕ್
ಹೊರಹರಿವು	80,161 ಕ್ಯೂಸೆಕ್

ಇಂದು ಮಳೆ ಹಾನಿ ಪ್ರದೇಶಗಳಿಗೆ ಕಂದಾಯ ಸಚಿವ ಭೇಟಿ



ಚಾಮರಾಜನಗರ, ಆ.4– ಕಂದಾಯ ಸಚಿವರು ಹಾಗೂ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರಾದ ಆರ್. ಅಶೋಕ್ ಅವರು ಆಗಸ್ಟ್ 5ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡುವರು.

ಮಧ್ಯಾಹ್ನ 12.30 ಗಂಟೆಗೆ ಕೊಳ್ಳೇಗಾಲ ತಾಲೂಕಿನ ದಾಸನಪುರ ಗ್ರಾಮಕ್ಕೆ ಭೇಟಿ ನೀಡುವ ಸಚಿವರು ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವರು. 1.30 ಗಂಟೆಗೆ ಯಳಂದೂರು ತಾಲೂಕಿನ ಗಣಿಗನೂರು ಗ್ರಾಮದಲ್ಲಿ ಮಳೆಹಾನಿ ಸಂಬಂಧ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡುವರು. ಅಲ್ಲದೆ ಸುತ್ತಮುತ್ತಲಿನ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡುವರು. 2.45 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವರು. 3.45 ಗಂಟೆಗೆ ಚಾಮರಾಜನಗರ ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ದಿನವಿಡೀ ಮಳೆ, ಜನಜೀವನ ಅಸ್ತವ್ಯಸ್ತ



ಚಾಮರಾಜನಗರ, ಆ.4– ಜಿಲ್ಲೆಯಾದ್ಯಂತ ಗುರುವಾರ ದಿನವಿಡೀ ಮಳೆ ಸುರಿದ ಪರಿಣಾಮ ಜನ ಜೀವನ ಅಸ್ತವ್ಯಸ್ತಗೊಂಡು ಪರದಾಡುವಂತಾಗಿದೆ.

ಬೆಳಗ್ಗೆ ಸುಮಾರು 11.30ಕ್ಕೆ ಆರಂಭವಾದ ಮಳೆ ರಾತ್ರಿಯವರೆಗೂ ಸುರಿಯಿತು. ಚಾಮರಾಜ ನಗರದ ಬಿ. ರಾಚಯ್ಯ ಜೋಡಿ ರಸ್ತೆಯ ಜಿಲ್ಲಾಡಳಿತ ಭವನದ ಮುಂಭಾಗ ತುಂಬಾ ನೀರು ಹರಿದ ಪರಿಣಾಮ ಕೆರೆಯಂತಾಗಿತ್ತು ತುಂಬಾ ನೀರು ಹರಿಯುತ್ತಿದ್ದ ಕಾರಣ, ಒಂದು ಬದಿಯಲ್ಲಿ ಮಾತ್ರ ವಾಹನ ಸವಾರರು ಸಂಚರಿಸಿದರು. ಇದರಿಂದ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಈ ದೃಶ್ಯವನ್ನು ಮೊಬೈಲ್‌ಗಳಲ್ಲಿ ಸೆರೆಹಿಡಿದ ಯುವಕರು, ವಾಟ್ಸಾಪ್, ಫೇಸ್‌ಬುಕ್‌ಗಳಿಗೆ ಹಾಕಿ ಇದು ನಮ್ಮೂರಿನ ಪರಿಸ್ಥಿತಿ. ಇದಕ್ಕೆ ಮುಕ್ತಿ ಎಂದು ಒಕ್ಕಣೆ ಬರೆಯುವ ಮೂಲಕ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕಾರ್ಯವೈಖರಿಯನ್ನು ಟೀಕಿಸಿದ್ದಾರೆ.

ಶುಕ್ರವಾರ ವರ ಮಹಾಲಕ್ಷ್ಮೀ ಹಬ್ಬದ ಅಂಗವಾಗಿ ಇಂದು ಹೂ– ಹಣ್ಣು, ಸಿಹಿ–ತಿಂಡಿಗಳು ಮತ್ತು ಮತ್ತಿತರ ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಬಂದಿದ್ದ ಜನರು ಪರದಾಡಿದರು. ಹಬ್ಬದ ಖರೀದಿಗೂ ಮಳೆ ಅಡ್ಡಿಪಡಿಸಿತು.

ಜಿಲ್ಲೆಯಾದ್ಯಂತ ಮಳೆ ಬಿದ್ದರೂ ಸಹ ಚಾಮರಾಜನಗರದಲ್ಲಿ ಮಳೆ ಜೋರಾಗಿತ್ತು. ಶಾಲಾ–ಕಾಲೇಜು ಬಿಡುವ ಸಮಯದಲ್ಲಿ ಮಳೆ ಸುರಿದ ಪರಿಣಾಮ ವಿದ್ಯಾರ್ಥಿಗಳು ಹಾಗೂ ಪೋಷಕರು ಪರದಾಡುವಂತಾಗಿತ್ತು. ಛತ್ರಿ, ಜರ್ಕಿನ್, ಸ್ವೆಟರ್ ಆಶ್ರಯ ಪಡೆದು ವಿದ್ಯಾರ್ಥಿಗಳು ಹಾಗೂ ಪೋಷಕರು ತೆರಳುತ್ತಿದ್ದ ದೃಶ್ಯ ಕಂಡು ಬಂತು.

ಬೆಳಗ್ಗೆಯಿಂದ ಸಂಜೆ ತನಕ ಸತತವಾಗಿ ಮಳೆ ಬಿದ್ದ ಕಾರಣ ಬೀದಿ ಬದಿ ವ್ಯಾಪಾರಿಗಳು ಪರದಾಡುವಂತಾಗಿತ್ತು. ಕಳೆದ ಕೆಲವು ದಿನಗಳಿಂದ ಸತತವಾಗಿ ಮಳೆ ಬೀಳುತ್ತಿರುವುದರಿಂದ ಜನ ಜೀವನ ಅಸ್ತವ್ಯಸ್ಥಗೊಂಡಿದೆ.

ಜಿಲ್ಲೆಯಾದ್ಯಂತ ಇಂದು, ನಾಳೆ ಶಾಲೆಗೆ ರಜೆ

ಚಾಮರಾಜನಗರ, ಆ.4– ಜಿಲ್ಲೆಯಾದ್ಯಂತ ನಿರಂತರವಾಗಿ ಮಳೆ ಬೀಳುತ್ತಿರುವ ಕಾರಣ ಆ.5 ಮತ್ತು 6 ರಂದು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಎಲ್ಲಾ ಅಂಗನವಾಡಿ, ಎಲ್‌ಕೆಜಿ, ಯುಕೆಜಿ, ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಆ.5 ಹಾಗೂ 6ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಆದೇಶಿಸಿದ್ದಾರೆ.

ಈ ರಜೆಯನ್ನು ಮುಂದೆ ಬರುವ ಯಾವುದಾದರೂ ರಜಾ ದಿನಗಳಿಗೆ ಸರಿದೂಗಿಸಿಕೊಳ್ಳುವಂತೆ ಅವರು ಸೂಚಿಸಿದ್ದಾರೆ.

ಆಲೂರಿನಲ್ಲಿ ಮಳೆಗೆ ಗೋಡೆ ಕುಸಿತ



ಆಲೂರು, ಆ.4– ಗ್ರಾಮದಲ್ಲಿ ಕಳೆದ ರಾತ್ರಿ ಸುರಿದ ಮಳೆಗೆ ಮನೆಯ ಗೋಡೆ ಕುಸಿದಿದೆ ಗ್ರಾಮದ ನಿವಾಸಿ ಮಲ್ಲು (ಬಕೀಟು) ಎಂಬುವವರಿಗೆ ಸೇರಿದ ವಾಸದ ಮನೆ ಭಾರೀ ಮಳೆ ಸುರಿದ ಕಾರಣ ರಾತ್ರಿ 12 ಗಂಟೆ ಸಮಯದಲ್ಲಿ ಕುಸಿದಿದೆ. ಅದೃಷ್ಟವಶಾತ್ ಮನೆಯವರು ಪಾರಾಗಿದ್ದಾರೆ. ಇವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದು, ಕೂಡಲೇ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸುವರ್ಣಾವತಿ, ಚಿಕ್ಕಹೊಳೆ ಜಲಾಶಯದಿಂದ ನದಿಗೆ ನೀರು

ಜಮೀನುಗಳು ಜಲಾವೃತ, ಅಪಾರ ನಷ್ಟ, ನಿರಾಶೆಗೊಂಡ ರೈತರು

ಚಾಮರಾಜನಗರ,ಆ.4– ತಾಲೂಕಿನ ಅವಳಿ ಜಲಾಶಯಗಳೆಂದು ಪ್ರಸಿದ್ಧಿ ಪಡೆದಿರುವ ಸುವರ್ಣಾವತಿ ಹಾಗೂ ಚಿಕ್ಕ ಹೊಳೆ ಜಲಾಶಯಗಳು ಭರ್ತಿ ಆಗಿದ್ದು, ಜಲಾಶಯಗಳಿಂದ ನೀರನ್ನು ಹೊರ ಬಿಡಲಾಗಿದೆ.

ಜಲಾಶಯಗಳ ಹಿತದೃಷ್ಟಿಯಿಂದ ಗುರುವಾರ ಸುವರ್ಣಾವತಿ ಜಲಾಶಯದಿಂದ 5 ಸಾವಿರ ಕ್ಯೂಸೆಕ್ ಹಾಗೂ ಚಿಕ್ಕಹೊಳೆ ಜಲಾಶಯದಿಂದ 1 ಸಾವಿರ ಕ್ಯೂಸೆಕ್ (ಈ ಎರಡೂ ಜಲಾಶಯಗಳಿಂದ ಒಟ್ಟು 6,000 ಸಾವಿರ ಕ್ಯೂಸೆಕ್) ನೀರನ್ನು ನದಿಗೆ ಬಿಡಲಾಗಿದೆ. ಹೀಗಾಗಿ ಜಲಾಶಯದ ವ್ಯಾಪ್ತಿಗೆ ಒಳಪಡುವ ಚಂದಕವಾಡಿ, ಮದ್ದೂರು, ಗಣಿಗನೂರು ಸೇರಿದಂತೆ ಕೆಲವು ಕಡೆ ಅಚ್ಚುಕಟ್ಟು ಪ್ರದೇಶದ ಜಮೀನುಗಳು ಜಲಾವೃತಗೊಂಡಿವೆ. ಇದರಿಂದ ಭಾರೀ ಪ್ರಮಾಣದ ನಷ್ಟ ಸಂಭವಿಸಿದ್ದು, ರೈತರು ನಿರಾಶೆಗೊಂಡಿದ್ದಾರೆ.

ಸುವರ್ಣಾವತಿ ಜಲಾಶಯಕ್ಕೆ ಒಳಹರಿವು 8 ಸಾವಿರ ಕ್ಯೂಸೆಕ್ ಇದೆ. ಚಿಕ್ಕಹೊಳೆ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ 1 ಸಾವಿರ ಕ್ಯೂಸೆಕ್ ಇದೆ. ಜಲಾಶಯಗಳು ಭರ್ತಿ ಆಗಿರುವ ಕಾರಣ ನೀರನ್ನು ಹೊಳೆಗೆ ಬಿಡಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ತಿಳಿಸಿದ್ದಾರೆ.

ಭರ್ತಿ: ಸತತವಾಗಿ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ನಗರದ ಪ್ರಸಿದ್ಧ ದೊಡ್ಡರಸನ ಕೊಳ ಭರ್ತಿ ಆಗಿದೆ ಚಾಮರಾಜನಗರ ತಾಲೂಕಿನ ಹೊಂಗನೂರು ಹಿರೀಕೆರೆ ಈ ವರ್ಷದಲ್ಲಿ ಮೂರನೇ ಬಾರಿಗೆ ಭರ್ತಿ ಆಗಿರುವುದು ಆ ಭಾಗದ ರೈತರಲ್ಲಿ ಹರ್ಷ ತಂದಿದೆ. ಕಾಗಲವಾಡಿ ಕೆರೆಯೂ ಸಹ ಭರ್ತಿ ಆಗಿದೆ ಹಿರೀಕೆರೆ ಕೋಡಿ ಬಿಟ್ಟಿರುವ ಕಾರಣ ಕೆರೆಯ ವ್ಯಾಪ್ತಿಗೆ ಒಳಪಡುವ ಕೆಲವು ಜಮೀನುಗಳು ಜಲಾವೃತಗೊಂಡಿವೆ. ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳು ಸಂಪೂರ್ಣವಾಗಿ ಭರ್ತಿಯಾಗಿ ನೀರನ್ನು ಹೊರಬಿಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ ಅವರು ಜಲಾಶಯಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಜಲಾಶಯಕ್ಕೆ ಬರುತ್ತಿರುವ ಒಳಹರಿವು ಹಾಗೂ ಹೊರ ಹರಿವಿನ ಬಗ್ಗೆ ಸಂಬಂಧಪಟ್ಟವರಿಂದ ಮಾಹಿತಿ ಪಡೆದರು.

ಮಳೆ ಬಗ್ಗೆ ಮಾಹಿತಿ ಪಡೆದ ಉಸುವಾರಿ ಸಚಿವರು

ಚಾಮರಾಜನಗರ, ಆ.4– ಜಿಲ್ಲಾದ್ಯಂತ ವ್ಯಾಪಕವಾಗಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತುರ್ತು ಹಾಗೂ ವಿಪತ್ತು ನಿರ್ವಹಣಾ ಕಾರ್ಯಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಲು ವಸತಿ, ಮೂಲಸೌಲಭ್ಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಹಾಗೂ ಭಾರತೀಯ ಹವಾಮಾನ ಇಲಾಖೆಯು ಮುಂದಿನ 2 ದಿನಗಳ ಕಾಲ ಅತೀ ಹೆಚ್ಚಿನ ಮಳೆ ಬೀಳುವ ಸಂಭವವಿದೆ ಎಂದು ವರದಿ ನೀಡಿರುವ ಹಿನ್ನೆಲೆಯಲ್ಲಿ ದೂರವಾಣಿ ಮೂಲಕ ಜಿಲ್ಲಾಧಿಕಾರಿಗಳಿಂದ ಜಿಲ್ಲೆಯ ಸ್ಥಿತಿಗತಿಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಮಾಹಿತಿ ಪಡೆದರು.

ಪರಿಸ್ಥಿತಿ ಅವಲೋಕಿಸಿರುವ ಸಚಿವರು ಮಳೆಯಿಂದ ಕೃಷಿ, ತೋಟಗಾರಿಕೆ ಬೆಳೆಹಾನಿ, ಜಾನುವಾರು, ಮನೆ ಮತ್ತು ಮೂಲ ಸೌಕರ್ಯಗಳಿಗೆ ಹಾನಿಯಾದಲ್ಲಿ ಸಮರೋಪಾದಿಯಲ್ಲಿ ಪರಿಸ್ಥಿತಿ ನಿಭಾಯಿಸಬೇಕೆಂದು ನಿರ್ದೇಶನ ನೀಡಿದರು.

ಎಸ್.ಶಿವಲಿಂಗಯ್ಯ ನಿಧನ



ಚಾಮರಾಜನಗರ, ಆ.4– ಬಂಡೀಪುರದ ಮೊದಲ ಉಪಸಂರಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಸ್. ಶಿವಲಿಂಗಯ್ಯ (86) ಗುರುವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ವಿಶೇಷ ಕಾಳಜಿ ಹೊಂದಿದ್ದು ಹಲವಾರು ವಿನೂತನ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಹೆಗ್ಗಳಿಕೆ ಇವರದ್ದು. ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನ ಬೆಟ್ಟ, ಕೆ.ಗುಡಿ, ಮೂಡಬಿದಿರೆ ಮುಂತಾದ ಅರಣ್ಯ ವಲಯಗಳಲ್ಲೂ ಇವರು ಸೇವೆ ಸಲ್ಲಿಸಿದ್ದರು.

ಇವರು ಪತ್ನಿ, ಭಾಗಮ್ಮ, ಮಕ್ಕಳಾದ ಶಶಿಕಲಾ ಸುರೇಶ್, ಲತಾ ಚಂದ್ರಶೇಖರ್, ಡಾ. ಶೀಲಾ ಶಿವಕುಮಾರ್, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಗುರುವಾರ ಸಂಜೆ ಚಾಮರಾಜನಗರ ತಾಲೂಕಿನ ಸ್ವಗ್ರಾಮ ಚಂದಕವಾಡಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರ್ಡರ್ ಮಿಸ್ಟ್ರಿ ಸುತ್ತ ಸೈರನ್



'ಸೈರನ್' ಚಿತ್ರದಲ್ಲಿ ಪ್ರವೀರ್‌ಶೆಟ್ಟಿ ಮತ್ತು ಲಾಸ್ಯ

ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಸೈರನ್ ಚಿತ್ರದ ಮೂಲಕ ರಕ್ಷಣಾ ವೇದಿಕೆಯ ಅಧ್ಯಕ್ಷ ಪ್ರವೀಣ್‌ಶೆಟ್ಟಿ ಅವರ ಪುತ್ರ ಪ್ರವೀರ್ ಶೆಟ್ಟಿ ನಾಯಕನಾಗಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ರಾಜು ವೆಂಕಯ್ಯ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಹಾಸ್ಯನಟ ಚಿಕ್ಕಣ್ಣ, ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್, ಉಮಾಪತಿಗೌಡ, ಲಹರಿ ವೇಲು, ಪತ್ರಕರ್ತ ರಂಗನಾಥ್ ಭಾರದ್ವಾಜ್, ಶಿವಾನಂದಶೆಟ್ಟಿ, ಶರತ್‌ಚಂದ್ರ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

ಈ ಸಂದರ್ಭದಲ್ಲಿ ನಾಯಕ ಪ್ರವೀರ್‌ಶೆಟ್ಟಿ ಚಿತ್ರ ಕುರಿತಂತೆ ಮಾತನಾಡುತ್ತ ಒಮ್ಮೆ ರಾಜು ವೆಂಕಯ್ಯ ಅವರು ನನ್ನನ್ನು ಭೇಟಿಯಾಗಿ ಈ ಕಥೆಯನ್ನು ಹೇಳಿದರು. ಕುತೂಹಲ ಹುಟ್ಟಿಸುವ 'ಮರ್ಡರ್ ಮಿಸ್ಟ್ರಿ' ಕಂಟೆಂಟ್ ನನಗೂ ತುಂಬಾ ಇಷ್ಟವಾಯಿತು. ಬಿಜು ಶಿವಾನಂದ್ ಅವರು ಈ ಚಿತ್ರವನ್ನು ಅದ್ಧೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ ಎಂದು ಹೇಳಿದರು.

ಚಿತ್ರದ ನಿರ್ದೇಶಕ ರಾಜು ವೆಂಕಯ್ಯ ಮಾತನಾಡುತ್ತ ಕಳೆದ ಇಪ್ಪತ್ತು ವರ್ಷಗಳಿಂದ ಚಿತ್ರರಂಗದಲ್ಲಿ ಛಾಯಾಗ್ರಾಹಕನಾಗಿ, ಸಂಕಲನಕಾರನಾಗಿಯೂ ಕೆಲಸ ಮಾಡಿದ್ದೇನೆ. ಈಗ ಸೈರನ್ ಎಂಬ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರದ ಮೂಲಕ ನಿರ್ದೇಶಕನಾಗಿ ಹೊಸಹೆಜ್ಜೆ ಇಟ್ಟಿದ್ದೇನೆ. ಈಗಾಗಲೇ ಶೇ.60ರಷ್ಟು ಚಿತ್ರೀಕರಣ ಮುಗಿದಿದ್ದು, 40ರಷ್ಟು ಮಾತ್ರವೇ ಬಾಕಿಯಿದೆ ಎಂದು ಹೇಳಿದರು.

ನಿರ್ಮಾಪಕ ಉಮಾಪತಿಗೌಡ ಮಾತನಾಡಿ, ಪ್ರವೀಣ್‌ಶೆಟ್ಟಿ ಅವರ ಮಗ ಹೀರೋ ಆಗಿದ್ದಾರೆ. ಟೀಸರ್ ತುಂಬಾ ಪ್ರಾಮಿಸಿಂಗ್ ಆಗಿದೆ ಎಂದರು. ರಂಗನಾಥ್ ಭಾರದ್ವಾಜ್, ಶಿವಾನಂದ ಶೆಟ್ಟಿ, ಪಳನಿ ಪ್ರಕಾಶ್ ಸೇರಿದಂತೆ ಸಾಕಷ್ಟು ಗಣ್ಯರು ಮಾತನಾಡಿ ಚಿತ್ರಕ್ಕೆ ಶುಭ ಕೋರಿದರು.

ನಿರ್ಮಾಪಕ ಬಿಜು ಶಿವಾನಂದ ಚಿತ್ರ ನಿರ್ಮಾಣದ ಬಗ್ಗೆ ಮಾತನಾಡಿದರು. ಸೈರನ್ ಚಿತ್ರದಲ್ಲಿ ನಾಯಕಿಯಾಗಿ ಬೆಡಗಿ ಲಾಸ್ಯ ಅವರು ಕಾಣಿಸಿಕೊಂಡಿದ್ದಾರೆ. ನಾಗೇಶ್ ಆಚಾರ್ಯ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕಿದ್ದು, ಚಿತ್ರದ ಎರಡು ಹಾಡುಗಳಿಗೆ ಭಾರದ್ವಾಜ್ ಅವರ ಸಂಗೀತ ಸಂಯೋಜನೆಯಿದೆ. ಈ ಚಿತ್ರಕ್ಕೆ ಬೆಂಗಳೂರು, ಮೈಸೂರು, ದೇವನಹಳ್ಳಿ, ದೊಡ್ಡಬಳ್ಳಾಪುರ ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಒಂದು ಡ್ಯುಯೆಟ್ ಹಾಡನ್ನು ಪ್ಯಾರಿಸ್, ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಶೂಟ್ ಮಾಡಲಾಗಿದೆ.



'ಗಾಳಿಪಟ-2' ಚಿತ್ರದ ನಾಯಕಿ ವೈಭವಿ ಶಾಂಡಿಲ್ಯ

ಆ.6ರಿಂದ ಬಿಗ್‌ಬಾಸ್ ಓಟಿಟಿ



ಬಿಗ್‌ಬಾಸ್ ಭಾರತದ ಪ್ರತಿಷ್ಠಿತ ಹಾಗೂ ಅತಿದೊಡ್ಡ ರಿಯಾಲಿಟಿ ಶೋ. ಇದೀಗ ಕನ್ನಡ ಓಟಿಟಿ ವೇದಿಕೆಯಲ್ಲೂ ಮೂಡಿಬರುತ್ತಿದೆ. ಇಲ್ಲಿಯವರೆಗೆ ಟಿವಿ ಪರದೆಯ ಮೇಲೆ ವೀಕ್ಷಿಸಬಹುದಾಗಿದ್ದ ಈ ರಿಯಾಲಿಟಿ ಶೋ ಈಗ ಓಟಿಟಿಯಲ್ಲಿ ಮಾತ್ರವೇ ಮೂಡಿಬರಲಿದೆ. ಇದರಲ್ಲೂ ಸಹ ಕಿಚ್ಚಸುದೀಪ್ ಅವರೇ ನಿರೂಪಕರಾಗಿರುತ್ತಾರೆ. ಆಗಸ್ಟ್ 6 ಹಾಗೂ 7ರಂದು ಬಿಗ್‌ಬಾಸ್ ಸೀಜನ್ 9 ಕಾರ್ಯಕ್ರಮದ ಗ್ರ್ಯಾಂಡ್ ಓಪನಿಂಗ್ ವೂಟ್ ಸೆಲೆಕ್ಟ್‌ನಲ್ಲಿ ಮೂಡಿಬರಲಿದೆ. ಹಾಗೆ ನೋಡಿದರೆ ಓಟಿಟಿಯಲ್ಲಿ ಪ್ರಸಾರವಾಗಲಿರುವ ಕನ್ನಡದ ಪ್ರಥಮ ಬಿಗ್‌ಬಾಸ್ ಇದಾಗಿದೆ. ಇದರ ರೂಪುರೇಷೆ ಹೇಗಿರುತ್ತೆ, ಈ ಬಿಗ್‌ಹೌಸ್‌ಗೆ ಯಾರೆಲ್ಲಾ ತೆರಳುತ್ತಾರೆ ಇಂಥ ಹಲವಾರು ಪ್ರಶ್ನೆಗಳಿಗೆ ನಿರೂಪಕ ಕಿಚ್ಚಸುದೀಪ್ ಹಾಗೂ ಕಲರ್ಸ್ ವಾಹಿನಿಯ ಪರಮೇಶ್ವರ ಗುಂಡ್ಕಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಈಗಾಗಲೇ ಹಿಂದಿ ಹಾಗೂ ತೆಲುಗಿನಲ್ಲಿ ಬಿಗ್‌ಬಾಸ್ ಒಟಿಟಿ ಪ್ರಸಾರವಾಗಿದೆ. ಆದರೆ ಕನ್ನಡಿಗರಿಗೆ ಹೊಸ ಅನುಭವ ನೀಡಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಟ ಸುದೀಪ್, ನನಗೆ ಬಿಗ್‌ಬಾಸ್ ಶೂಟಿಂಗ್‌ಗೆ ಹೋಗುವಾಗ ಸಿನಿಮಾ ಶೂಟಿಂಗ್‌ಗೆ ಹೋದಷ್ಟೇ ಖುಷಿಯಾಗುತ್ತೆ ನಾನು ಸಿನಿಮಾ ಬೇರೆ, ಬಿಗ್‌ಬಾಸ್ ಬೇರೆ ಅಂತ ತಿಳಿದುಕೊಂಡೇ ಇಲ್ಲ. ಸ್ಪರ್ಧಿಗಳ ಜೊತೆ ಅವರ ವಿಚಾರಗಳ ಜೊತೆ ಸ್ವಾರಸ್ಯಕರ ಚರ್ಚೆ ನಡೆಸುವುದೇ ಅಲ್ಲಿ ಇಂಟರೆಸ್ಟಿಂಗ್ ಆಗಿರುತ್ತೆ ಕೆಲ ಸೀಜನ್‌ಗಳಲ್ಲಿ ನಾನು ತುಂಬಾ ಸುಸ್ತಾಗಿರುವುದೂ ಉಂಟು. ಈ ಕಾರ್ಯಕ್ರಮ ನನ್ನಲ್ಲೂ ಕೆಲ ಬದಲಾವಣೆಗಳನ್ನು ತಂದಿದೆ ಎಂದು ತಮ್ಮ ಮನದ ಮಾತುಗಳನ್ನು ಹಂಚಿಕೊಂಡರು. ಸುದೀಪ್ ಅವರು ಪ್ರತಿ ವೀಕೆಂಡ್‌ನಲ್ಲಿ ಬಿಗ್‌ಬಾಸ್ ನಿರೂಪಣೆ ಮಾಡುತ್ತಿದ್ದರು. ಬಿಗ್‌ಬಾಸ್ ಒಟಿಟಿಯಲ್ಲೂ ಇದೇ ಮುಂದುವರಿಯಲಿದೆ. ಪ್ರತಿ ವಾರಾಂತ್ಯ ಸುದೀಪ್ ನಿರೂಪಣೆ ಮಾಡಲಿದ್ದಾರೆ. ಆ ಮನೆಯಲ್ಲಿರುವವರ ಜೊತೆ ಮಾತನಾಡುತ್ತಾರೆ. ಬಿಗ್‌ಬಾಸ್ ದಿನದ 24ಗಂಟೆಯೂ ಪ್ರಸಾರವಾಗುತ್ತಿರುತ್ತದೆ. ಆ ಮನೆಯಲ್ಲಿ ನಡೆಯುವ ಘಟನಾವಳಿಗೂ, ಪ್ರಸಾರಕ್ಕೂ ಎರಡು ನಿಮಿಷ ಮಾತ್ರ ಅಂತರವಿರುತ್ತದೆ. ತಾಂತ್ರಿಕವಾಗಿ ಇದೊಂದು ಚಾಲೆಂಜ್, ಓಟಿಟಿಯಲ್ಲಿ ಕಾರ್ಯಕ್ರಮ ಮುಗಿದನಂತರ ಕಿರುತೆರೆಯ 9ನೇ ಬಿಗ್‌ಬಾಸ್ ಶೋ ಎಂದಿನಂತೆ ಆರಂಭವಾಗಲಿದೆ, ಇದರಲ್ಲಿ ಗೆದ್ದವರು ಆ ಮನೆಗೆ ಎಂಟ್ರಿ ಕೊಡುತ್ತಾರೆ ಎಂದು ಪರಮೇಶ್ವರ್ ಗುಂಡ್ಕಲ್ ವಿವರಿಸಿದರು.

ಬಡ ನಿರ್ಮಾಪಕರಿಗೆ ವರವಾದ ಟಾಕೀಸ್ ಆ್ಯಪ್




ಇತ್ತೀಚೆಗಷ್ಟೇ ನಟ ಶಿವರಾಜ್‌ಕುಮಾರ್ ಅವರಿಂದ ಉದ್ಘಾಟನೆಯಾಗಿದ್ದ ಟಾಕೀಸ್ ಆ್ಯಪ್ ಓಟಿಟಿಗೆ ಉತ್ತಮ ಸ್ಪಂದನೆ ಸಿಗುತ್ತಿದೆ. ಅಚ್ಚ ಕನ್ನಡದ ಅತ್ಯುತ್ತಮ ಗುಣಮಟ್ಟದ ಓಟಿಟಿ ವೇದಿಕೆ ಇದಾಗಿದ್ದು ಕನ್ನಡದಲ್ಲಿ ಚಿಕ್ಕ ಪ್ರಮಾಣದ ನಿರ್ಮಾಪಕರಲ್ಲಿ ಹೊಸ ಭರವಸೆ ಮೂಡಿಸಿದೆ ಅಂತಾರಾಷ್ಟ್ರೀಯ ಗುಣಮಟ್ಟ ಹೊಂದಿರುವ ಈ ಆ್ಯಪ್‌ನಲ್ಲಿ ಕಳೆದ ಮೂರ್ನಾಲ್ಕು ತಿಂಗಳಲ್ಲಿ ನೂರಾರು ಚಲನಚಿತ್ರಗಳು, ಹತ್ತಾರು ವೆಬ್ ಸೀರೀಸ್, ಮಕ್ಕಳ ಕತೆಗಳು ಸೇರಿದಂತೆ ಸಾಕಷ್ಟು ಕಂಟೆಂಟ್‌ಗಳು ಇದರಲ್ಲಿ ಲಭ್ಯವಿದ್ದು, ಕನ್ನಡ ಸಿನಿ ಪ್ರೇಮಿಗಳ ಮೆಚ್ಚುಗೆ ಪಡೆದುಕೊಂಡಿದೆ. ಸಿನಿಮಾ, ನಾಟಕ, ಯಕ್ಷಗಾನ, ಕಾರ್ಟೂನ್‌ಗಳು ಸೇರಿದಂತೆ ಮನರಂಜನೆಗೆ ಹೆಚ್ಚು ಒತ್ತು ಕೊಡುವಲ್ಲಿ ನಮ್ಮ ತಂಡ ಶ್ರಮಿಸುತ್ತಿದೆ ಎಂದು ಸಂಸ್ಥೆಯ ಛೇರ್ಮನ್ ರತ್ನಾಕರ್ ಕಾಮತ್ ಹೇಳಿದ್ದಾರೆ.

ಸ್ವಯಂಪ್ರಭಾ ಎಂಟರ್‌ಟೈನ್‌ಮೆಂಟ್ ಮತ್ತು ಪ್ರೊಡಕ್ಷನ್ಸ್ ಹೊರತಂದಿರುವ ಈ ಆ್ಯಪ್, ಈಗಾಗಲೇ ಸಾವಿರಾರು ಚಂದಾದಾರರನ್ನು ಹೊಂದಿದೆ. 1200ಕ್ಕೂ ಅಧಿಕ ಕಲಾವಿದರು, 700ಕ್ಕೂ ಹೆಚ್ಚು ತಂತ್ರಜ್ಞರ ಪ್ರಯತ್ನದ ಫಲವಾದ ಟಾಕೀಸ್ ಆ್ಯಪ್ ಪ್ರತೀ ತಿಂಗಳು ಎಂಟು ಸಂಚಿಕೆಗಳ ಒಂದು ಹೊಸ ವೆಬ್ ಸೀರೀಸ್ ಹಾಗೂ ಪ್ರತಿ ವಾರ ಎರಡು ಹೊಸ ಕಂಟೆಂಟ್‌ಗಳನ್ನು ಹೊರತರುತ್ತಿದೆ.

ನಟ ವಿಜಯ ರಾಘವೇಂದ್ರ, ಪ್ರಮೋದ್ ಶೆಟ್ಟಿ, ರಂಜನಿ ರಾಘವನ್, ದಿವ್ಯ ಉರುಡುಗ, ಮಂಜು ಪಾವಗಡ, ವೈಷ್ಣವಿ, ಭೂಮಿ ಶೆಟ್ಟಿ, ನಾಗೇಂದ್ರ ಶಾ, ನಿವೇದಿತಾ ಗೌಡ, ಚಂದನ್ ಶೆಟ್ಟಿ, ದೀಪಿಕಾ, ಚಂದನಾ ಮುಂತಾದವರು ಇದರ ಭಾಗವಾಗಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಹಕೂನ ಮಟಟ, ವನಜಾ, ಗರಂ ಮಸಾಲಾ, ಕರ್ಮ ರಿಟರ್ನ್, ವಿಟಮಿನ್ ಎಂ ಸಾಕಷ್ಟು ಜನಪ್ರಿಯವಾಗಿವೆ. ಅಲ್ಲದೆ ಪೊಲೀಸ್ ಫೈಲ್ಸ್, ಜಾಲಿ ಬ್ಯಾಚುಲರ್ಸ್, ಲವ್ ಬರ್ಡ್ಸ್ ಹಾಗೂ ನಿವೃತ್ತ ಎಸ್.ಪಿ ಎಸ್.ಕೆ.ಉಮೇಶ್ ಅವರ ಕಥಾಸಂಕಲನ ಸೇರಿದಂತೆ ಸಾಕಷ್ಟು ವೆಬ್ ಸೀರೀಸ್, ಕಿರುಚಿತ್ರಗಳು ಮುಂದಿನ ದಿನಗಳಲ್ಲಿ ಪ್ರಸಾರವಾಗಲಿವೆ.

ಸಿನಿಪದಬಂಧ-019

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಎಂ.ಆರ್.ವಿಠಲ್ ನಿರ್ದೇಶನದ ಅಶ್ವಥ್-ಪಂಢರಿಬಾಯಿ ಅಭಿನಯದ ಚಿತ್ರ (5)
3. ವಿಷ್ಣುವರ್ಧನ್-ಮಂಜುಳಾ-ದ್ವಾರಕೀಶ ಚಿತ್ರ ಕೊನೆಗೆ ಅನುಸ್ವಾರ ಹೊಂದಿದೆ (5)
7. ಅಂಬರೀಶ್-ರೂಪಾ ಗಂಗೂಲಿ ಅಭಿನಯದ 1991ರ ಚಿತ್ರ (3)
9. ನಾಗಾಭರಣ ನಿರ್ದೇಶನದ 1988ರ ರಾಜಕೀಯ ಚಿತ್ರ (3)
10. ಶರಣ್-ಮಾಧುರಿ ಇಟಗಿ ಅಭಿನಯದ ಚಿತ್ರ (2)
11. ಕದಂಬ ವಂಶದ ದೊರೆ ಹೆಸರಿನ ಚಿತ್ರ ಡಾ॥ ರಾಜ್ ಅಭಿನಯದಲ್ಲಿ (3)
12. ಖುಷಿ-ಪೃಥ್ವಿ ಅಂಬರ್-ದೀಕ್ಷಿತ್ ಶೆಟ್ಟಿ ಅಭಿನಯದ ಚಿತ್ರ (2)
15. ---ನಗೆ, ಗಣೇಶ್ ಅಭಿನಯಕ್ಕೆ ಯೋಗರಾಜ್ ಭಟ್ ನಿರ್ದೇಶನ (3)
16. ವಿಷ್ಣುವರ್ಧನ್-ಭಾನುಪ್ರಿಯ ಅಭಿನಯದ 2004ರ ಚಿತ್ರ (3)
19. ಗಣೇಶ್-ಶ್ರದ್ಧಾ ಆರ್ಯ ನಟನೆಯ ಚಿತ್ರ (5)
20. ಉಪೇಂದ್ರ-ಕೃತಿ ಕರಬಂಧಾ ಅಭಿನಯದ ಚಿತ್ರ (5)

ಮೇಲಿನಿಂದ ಕೆಳಕ್ಕೆ

1. ಅನಂತ್ ನಾಗ್-ಗೀತಾ ಅಭಿನಯದ 1986ರ ಚಿತ್ರ (5)
2. ಕಾಶಿನಾಥ್-ಅಭಿನಯಾ ಜೋಡಿಯ ಚಿತ್ರ ಕೊನೆಯಲ್ಲಿ ಹ್ರಸ್ವವಾಗಿದೆ (4)
4. ಗಣೇಶ್-ರೇಖಾ ಅಭಿನಯದ 2007ರ ಚಿತ್ರ (4)
5. ಶಿವರಾಜಕುಮಾರ್-ಮಾಲಾಶ್ರೀ ಅಭಿನಯದಲ್ಲಿ "ಎರಡು-ನದಿಗಳು" (5)
6. ಉಪೇಂದ್ರ-ಪ್ರಣೀತಾ ಜೋಡಿಯ 2004ರ ಚಿತ್ರ (2)
8. ಆರ್ ನಾಗೇಂದ್ರರಾವ್ ನಿರ್ದೇಶನದಲ್ಲಿ ಅಶ್ವತ್-ಪಂಡರಿಬಾಯಿ ಚಿತ್ರ (5)
9. ಪಿ.ವಾಸು ಅವರ ವಿಷ್ಣುವರ್ಧನ್ ಚಿತ್ರ, ಮರಣಾನಂತರ ಬಿಡುಗಡೆಯಾಯಿತು (5)
13. ಸುರೇಶ್ ಹೆಬ್ಳೀಕರ್ ಅಭಿನಯದ 1993ರ ಚಿತ್ರ (5)
14. 1990ರಲ್ಲಿ ಬಿಡುಗಡೆಯಾದ ಪ್ರೀತಿಯ ಅಲೆ ಎಂಬರ್ಥದ ಚಿತ್ರ (5)
15. ವಿಷ್ಣುವರ್ಧನ್-ಜಯಂತಿ ಅಭಿನಯದ ಚಿತ್ರ, ಚಿನ್ನ ನಿನ್ನ ---- (4)
17. ಧ್ರುವ ಸರ್ಜಾ-ರಾಧಿಕಾ ಪಂಡಿತ್ ಜೋಡಿಯ 2014ರ ಚಿತ್ರ (4)
18. ಶಂಕರನಾಗ್ ನಿರ್ದೇಶನದಲ್ಲಿ ಇಳೆಯರಾಜ ಸಂಗೀತ ನೀಡಿದ 1981ರ ಚಿತ್ರ (2)

ಸಿನಿ ಪದಬಂಧ 018ರ ಸರಿ ಉತ್ತರ

ರಂ	ಗ	ನಾ	ಯ	ಕ		ಭ	ವ್ಯ	ಭಾ	ರ	ತ
ಗ		ರಿ		ಳ್ಳ		ದ್ರ		ರಿ		ರ್ಲೆ
ನಾ	ನು			ಕು		ಕಾ			ಮಾ	ನ
ಯ				ಳ್ಳ		ಳಿ				ನ್ನ
ಕಿ	ರಾ	ತ	ಕ		ಭಾ		ಗೆ	ದ್ದ	ಮ	ಗ
				ಭೈ	ರ	ವ				
ಹು	ಡು	ಗ	ರು		ತಿ		ಸೀ	ತಾ	ರಾ	ಮು
ಡು				ಸಂ		ಮೆ				ತ್ತಿ
ಗಿ	ರಿ			ಪ		ಹ			ಮೌ	ನ
ಗಾ		ಭಾ		ತ್ತಿ		ಬೂ		ತು		ಹಾ
ಗಿ	ರಿ	ಮ	ಲ್ಲಿ	ಗೆ		ಬಾ	ಳು	ಬಂ	ಗಾ	ರ

ವಿಜೇತರು: ಆರ್.ಮಧುಸೂದನ್,
ಪಶು ಆಸ್ಪತ್ರೆ, ಸರಗೂರು,
ಮೈಸೂರು ಜಿಲ್ಲೆ-571121

ಬ್ರಿಟಿಷರ ಕಾಲದ ಫ್ಯಾಂಟಸಿ ಥ್ರಿಲ್ಲರ್ ಕಥೆ

ಮಾಂಕ್ ದಿ ಯಂಗ್ ಪೋಸ್ಟರ್ ಬಿಡುಗಡೆ



ಮಾಸ್ಚಿತ್ ಸೂರ್ಯ ಅವರ ನಿರ್ದೇಶನದ ಫ್ಯಾಂಟಸಿ ಥ್ರಿಲ್ಲರ್ ಮಾಂಕ್ ದಿ ಯಂಗ್ ಚಿತ್ರದ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಯಿತು. ನಟ, ನಿರ್ದೇಶಕ ರಿಷಭ್ ಶೆಟ್ಟಿ ಹಾಗೂ ಫಿಲಂ ಚೇಂಬರ್ ಅಧ್ಯಕ್ಷರಾದ ಭಾ.ಮಾ.ಹರೀಶ್ ಭಾಗವಹಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

ಮಾಸ್ಚಿತ್ ಸೂರ್ಯ ಮಾತನಾಡಿ "ಮಾಂಕ್ ದಿ ಯಂಗ್" ನನ್ನ ನಿರ್ದೇಶನದ ಮೊದಲ ಚಿತ್ರ. ವಿಂಟೇಜ್, ಫ್ಯಾಂಟಸಿ ಥ್ರಿಲ್ಲರ್ ಕಥಾಹಂದರ ಈ ಚಿತ್ರದಲ್ಲಿದ್ದು, ಸರೋವರ್ ಹಾಗೂ ಸೌಂದರ್ಯಗೌಡ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ಬಂಡವಾಳ ಹಾಕಿರುವ ಐದು ನಿರ್ಮಾಪಕರೂ ಚಿತ್ರದಲ್ಲಿ ಅಭಿನಯಿಸಿರುವುದು ವಿಶೇಷ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ಸ್ ವರ್ಕ್ ಬಿರುಸಿನಿಂದ ಸಾಗಿದೆ ಎಂದರು.

ನಿರ್ಮಾಪಕರಲ್ಲೊಬ್ಬರಾದ ಕರ್ನಲ್ ರಾಜೇಂದ್ರನ್ ಮಾತನಾಡಿ, ಹದಿನೇಳನೇ ವಯಸ್ಸಿನಲ್ಲೇ ಆರ್ಮಿ ಸೇರಿದ ನಾನು ಅಲ್ಲಿ ನಲವತ್ತು ವರ್ಷ ಸೇವೆ ಸಲ್ಲಿಸಿದೆ. ಅಲ್ಲಿಂದ ಬಂದ ಮೇಲೆ ಈ ಚಿತ್ರ ನಿರ್ಮಿಸಿ, ಅದರಲ್ಲಿ ಚಿಕ್ಕಪಾತ್ರವನ್ನೂ ಮಾಡಿದ್ದೇನೆ. ಪಾತ್ರ ತುಂಬಾ ಚೆನ್ನಾಗಿದೆ ಎಂದರು. ನಿರ್ಮಾಪಕರು ಹಾಗೂ ನಟರೂ ಆಗಿರುವ ವಿನಯ್ ಬಾಬು ರೆಡ್ಡಿ, ಲಾಲ್ ಚಂದ್, ಗೋಪಿ ಚಂದ್ ಸಹ ತಂತಮ್ಮ ಪಾತ್ರಗಳ ಕುರಿತು ಮಾಹಿತಿ ನೀಡಿದರು.

ಚಿತ್ರದ ನಿರ್ಮಾಪಕ ಹಾಗೂ ನಾಯಕ ಸರೋವರ ಮಾತನಾಡುತ್ತ. ನಮ್ಮ ಚಿತ್ರವನ್ನು ವಿಭಿನ್ನವಾಗಿಯೇ ಮಾಡಿದ್ದೇವೆ. ಸದ್ಯದಲ್ಲೇ ಟ್ರೇಲರ್ ರಿಲೀಸಾಗಲಿದ್ದು, ಟ್ರೇಲರ್ ನೋಡಿ ನೀವೇ ತೀರ್ಮಾನಿಸಿ. ನಿಜಕ್ಕೂ ಒಳ್ಳೆಯ ಅಡುಗೆ ಎಲ್ಲರಿಗೂ ರುಚಿಸುವ ಈ ಚಿತ್ರ ಪ್ರತಿಯೊಬ್ಬರ ಮನಸ್ಸಿಗೂ ಹತ್ತಿರವಾಗಲಿದೆ ಎಂದರು.

ಹೊಳೆನರಸೀಪುರದ ಹುಡುಗಿ ಹಾಗೂ ಮಾಡೆಲ್ ಆದ ಸೌಂದರ್ಯಗೌಡ ಮಾತನಾಡಿ ನಾನು ಸಿವಿಲ್ ಎಂಜಿನಿಯರಿಂಗ್ ಓದಿ ಹೈದರಾಬಾದಿನಲ್ಲಿ ಕೆಲಸ ಮಾಡುತ್ತಿದ್ದೆ. ಆದರೆ ನಟನೆಯ ಮೇಲಿನ ಆಸಕ್ತಿಯಿಂದ ಕೆಲಸ ಬಿಟ್ಟು ಬಂದು ಈ ಚಿತ್ರದಲ್ಲಿ ನಟಿಸಿದ್ದೇನೆ. ನಾನು ರೂಪದರ್ಶಿಯಾಗೂ ಸಾಕಷ್ಟು ಹೆಸರು ಮಾಡಿದ್ದೇನೆ. ಬ್ರಿಟೀಷರ ಕಾಲದಲ್ಲಿ ನಡೆಯುವ ಕಥೆ ಇದರಲ್ಲಿದೆ ಎಂದು ತಮ್ಮ ಪಾತ್ರದ ಬಗ್ಗೆ ಮಾತನಾಡಿದರು.

ಸೆಕೆಂಡ್‌ಲೈಫ್ ಮೆಡಿಕೋಥ್ರಿಲ್ಲರ್ ಕಥೆ



ಅಕ್ಷತೆ ಖ್ಯಾತಿಯ ರಾಜು ದೇವಸಂದ್ರ ಅವರೀಗ ಮೆಡಿಕೋಥ್ರಿಲ್ಲರ್ ಕಥಾಹಂದರ ಇರುವ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಸೆಕೆಂಡ್ ಲೈಫ್ ಎಂಬ ವಿಭಿನ್ನ ಶೀರ್ಷಿಕೆ ಇರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಇತ್ತೀಚೆಗೆ ನೆರವೇರಿತು. ಆದರ್ಶ ಗುಂಡೂರಾಜ್ ಹಾಗೂ ಸಿಂಧೂರಾವ್ ಅಭಿನಯದ ಈ ಚಿತ್ರವನ್ನು ಜಯಣ್ಣ ಫಿಲಂಸ್ ಹಾಗೂ ಶುಕ್ರ ಫಿಲಂಸ್ ಸೇರಿ ನಿರ್ಮಾಣ ಮಾಡಿದ್ದಾರೆ.

ನಿರ್ದೇಶಕ ರಾಜು ದೇವಸಂದ್ರ ಮಾತನಾಡಿ ಮೆಡಿಕೋಥ್ರಿಲ್ಲರ್ ಜಾನರ್‌ನ ಈ ಚಿತ್ರಕ್ಕೆ ಮಂಜುಳ ರಮೇಶ್ ಕಥೆ, ಚಿತ್ರಕಥೆ ಬರೆದಿದ್ದಾರೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಂಟೆಂಟ್ ಇದರಲ್ಲಿದೆ ಎಂದರು. ನಂತರ ಆದರ್ಶ ಗುಂಡುರಾಜ್ ಮಾತನಾಡುತ್ತ ಈ ಹಿಂದೆ ಸ್ವಾರ್ಥರತ್ನ ಚಿತ್ರದಲ್ಲಿ ಅಭಿನಯಿಸಿದ್ದೆ. ಸೆಕೆಂಡ್‌ಲೈಫ್ ಒಂದು ವೈಜ್ಞಾನಿಕ ಕಂಟೆಂಟ್ ಹೊಂದಿರುವ ಚಿತ್ರ, ತಾಯಿಯ ಗರ್ಭದಿಂದ ಕರುಳಬಳ್ಳಿ ಕತ್ತರಿಸಿಕೊಂಡು ಹೊರಬಂದ ಮಗು, ಹುಟ್ಟಿದ ಕೆಲವೇ ದಿನಗಳಲ್ಲಿ ಆ ಕರುಳುಬಳ್ಳಿ(ಹೊಕ್ಕಳಬಳ್ಳಿ) ತಾನಾಗೇ ಬೇರ್ಪಡುತ್ತದೆ. ಇದನ್ನು ಶೇಖರಿಸಿಡುವ ಕೆಲಸ ಈಗ ನಡೆದಿದೆ. ಇದನ್ನು ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಈ ರೀತಿಯ ಕುತೂಹಲಕರ ಅಂಶಗಳನ್ನು ಇಟ್ಟುಕೊಂಡು 'ಸೆಕೆಂಡ್‌ಲೈಫ್' ಚಿತ್ರವನ್ನು ಮಾಡಿದ್ದೇವೆ. ಬೇಸರದ ಸಂಗತಿ ಅಂದರೆ, ಹೊಸ ಪ್ರಯತ್ನಗಳಿಗೆ ಸದಾ ಪ್ರೋತ್ಸಾಹ ನೀಡುವ ಪುನೀತ್ ರಾಜಕುಮಾರ್ ಅವರ ಬ್ಯಾನರ್‌ನಲ್ಲಿ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಬೇಕಿತ್ತು. ಈ ಸಲುವಾಗಿ ಚರ್ಚಿಸಲು ಅವರು ನಮಗೆ ಸ್ನೇಹಿತರೊಬ್ಬರ ಮೂಲಕ ಸಮಯವನ್ನು ಸಹ ನೀಡಿದ್ದರು. ಆದರೆ ವಿಧಿಬರಹವೇ ಬೇರೆಯಾಗಿತ್ತು. ಈಗ ನಮ್ಮ ಚಿತ್ರದ ಹಾಡು ಪುನೀತ್ ಅವರ ಪಿ.ಆರ್.ಕೆ. ಆಡಿಯೋ ಮೂಲಕ ಬಿಡುಗಡೆಯಾಗಿರುವುದಷ್ಟೇ ನಮಗೆ ಖುಷಿಯ ವಿಚಾರ ಎಂದು ಹೇಳಿದರು.

ಚಿತ್ರದ ಸಂಗೀತ ನಿರ್ದೇಶಕ ಆರವ್ ಕೌಶಿಕ್, ಛಾಯಾಗ್ರಾಹಕ ರಮೇಶ್ ಕೊಯಿರಾ ಹಾಗೂ ಚಿತ್ರದ ಖಳನಟರಾದ ಶಿವಪ್ರದೀಪ್, ನವೀನ್ ಶಕ್ತಿ ಇತರರು 'ಸೆಕೆಂಡ್ ಲೈಫ್' ಚಿತ್ರ ಕುರಿತಂತೆ ಮಾತನಾಡಿದರು.

ಮೂರನೇ ಪುಟದಿಂದ

ಸೀರಿಯಲ್ ಕಿಲ್ಲರ್ ಜೋಡಿ ಬಂಧನ

ಅವರಿಗೆ ಸೂಚಿಸಲಾಗಿತ್ತು. ಡಿವೈಎಸ್‌ಪಿ ಸಂದೇಶ ಕುಮಾರ್ ಅವರು, 7 ಪೊಲೀಸ್ ಇನ್ಸ್‌ಪೆಕ್ಟರ್, 7 ಸಬ್ ಇನ್ಸ್‌ಪೆಕ್ಟರ್ ಹಾಗೂ 30 ಸಮರ್ಥ ಸಿಬ್ಬಂದಿಗಳನ್ನು ಕಲೆ ಹಾಕಿ 9 ತಂಡಗಳನ್ನಾಗಿ ವಿಂಗಡಿಸಿ, ಅವರೊಂದಿಗೆ ತನಿಖೆಗೆ ಇಳಿದರು. ಒಂದು ತಂಡ ತಾಂತ್ರಿಕ ಮಾಹಿತಿ ಕಲೆ ಹಾಕಿದರೆ, ಮತ್ತೊಂದು ತಂಡ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಕಲೆ ಹಾಕುವ ಕಾರ್ಯದಲ್ಲಿ ತೊಡಗಿತು. ಇಡೀ ರಾಜ್ಯಾದ್ಯಂತ ನಾಪತ್ತೆಯಾಗಿರುವ ಮಹಿಳೆಯರ ಪ್ರಕರಣಗಳ ಪರಿಶೀಲನೆಗೆ ಒಂದು ತಂಡ ಇಳಿದರೆ, ಸ್ಥಳೀಯರಿಂದ ಮಾಹಿತಿ ಸಂಗ್ರಹಿಸುವ ಕಾಯಕದಲ್ಲಿ ಇನ್ನೊಂದು ತಂಡ ನಿರತವಾಯಿತು.

ಈ ತಂಡಗಳು 17ಕ್ಕೂ ಹೆಚ್ಚು ಟವರ್‌ಗಳಲ್ಲಿನ ಸುಮಾರು 1 ಲಕ್ಷಕ್ಕೂ ಅಧಿಕ ಮೊಬೈಲ್ ಕರೆಗಳನ್ನು ಪರಿಶೀಲಿಸಿತು. ಮಹಿಳೆಯರ ಮುಂಡ ದೊರೆತಿದ್ದ ಸ್ಥಳದ ಸಂಪರ್ಕ ರಸ್ತೆಗಳಲ್ಲಿನ 22ಕ್ಕೂ ಹೆಚ್ಚು ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಸಂಗ್ರಹಿಸಿ ಕೂಲಂಕುಷವಾಗಿ ಪರಿಶೀಲಿಸಿತು. 1116ಕ್ಕೂ ಹೆಚ್ಚು ಮಹಿಳೆಯರ ನಾಪತ್ತೆ ಪ್ರಕರಣಗಳನ್ನು ಪರಿಶೀಲನೆ ನಡೆಸಿತು. ಆದರೆ ಇದ್ಯಾವುದರಿಂದಲೂ ಫಲ ದೊರೆಯದಿದ್ದಾಗ ಪೊಲೀಸರು ಮೃತಪಟ್ಟಿರುವ ಮಹಿಳೆಯರ ಬಗ್ಗೆ ಮಾಹಿತಿ ನೀಡಿದವರಿಗೆ 1 ಲಕ್ಷ ರೂ. ಬಹುಮಾನ ನೀಡುವುದಾಗಿ ಘೋಷಿಸಿದರು. ಸಂದೇಶ್ ಕುಮಾರ್ ಅವರು ಮೃತದೇಹಗಳ ಚಿತ್ರ ಒಳಗೊಂಡ 10 ಸಾವಿರ ಕರಪತ್ರಗಳನ್ನು ಮುದ್ರಿಸಿ ತಮ್ಮ ಸಿಬ್ಬಂದಿ ಮೂಲಕ ಹಲವಾರು ಹಳ್ಳಿಗಳಲ್ಲಿ ಹಂಚಿ ಮಾಹಿತಿ ಕಲೆ ಹಾಕಲು ಪ್ರಯತ್ನಿಸಿದರು.

ಸುಳಿವು ನೀಡಿದ ಅದೊಂದು ನಾಪತ್ತೆ ಕೇಸ್: ಮಹಿಳೆಯರ ಮುಂಡಗಳು ದೊರೆತದ್ದು ಜೂನ್ 7ರಂದು. ಸಂದೇಶ್ ಕುಮಾರ್ ನೇತೃತ್ವದ ತಂಡ ಚಿಕ್ಕ ಸುಳಿವೂ ದೊರೆಯದೇ ಪರದಾಡುತ್ತಿದ್ದ ವೇಳೆ ಸರಿಯಾಗಿ 1 ತಿಂಗಳಲ್ಲಿ ಅಂದರೆ ಜುಲೈ 7ರಂದು ಚಾಮರಾಜನಗರ ಟೌನ್ ಪೊಲೀಸ್ ಠಾಣೆಯಲ್ಲಿ ಮಹಿಳೆ ನಾಪತ್ತೆ ಪ್ರಕರಣವೊಂದು ದಾಖಲಾಯಿತು. ಅಲ್ಲಿನ ಮಹಿಳೆ 30 ವರ್ಷದ ಸಿದ್ದಮ್ಮ ಅಲಿಯಾಸ್ ಪುಟ್ಟಿ ಅಲಿಯಾಸ್ ಗೀತಾ, ಜೂ.5ರಂದು ಮನೆ ಬಿಟ್ಟು ಹೋದವರು ಇನ್ನೂ ವಾಪಸ್ಸಾಗಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿತ್ತು. ಪಾಂಡವಪುರ ಬಳಿ ದೊರೆತಿದ್ದ ಮಹಿಳೆಯ ಮುಂಡವನ್ನು ಪರಿಶೀಲಿಸಿದ್ದ ಪೊಲೀಸರು, ಮೃತ ಮಹಿಳೆಗೆ 30 ರಿಂದ 35 ವರ್ಷ ಇರಬಹುದು ಎಂದು ಅಂದಾಜಿಸಿದ್ದರು. ಅಲ್ಲದೇ ಆ ಮುಂಡದಲ್ಲಿ ದೊರೆತ ಬಟ್ಟೆಯೂ ಕೂಡ ವಾರಸುದಾರರ ಮಾಹಿತಿಗೆ ಸರಿ ಹೊಂದುತ್ತಿತ್ತು

ದೊರೆತಂತಹ ಸಣ್ಣ ಸುಳಿವಿನ ಜಾಡು ಹಿಡಿದ ಸಂದೇಶ್ ಕುಮಾರ್ ತಂಡ, ನಾಪತ್ತೆಯಾಗಿದ್ದ ಮಹಿಳೆಯ ಮೊಬೈಲ್ ನಂಬರ್ 8867669864ನ ಟವರ್ ಲೊಕೇಷನ್‌ಗಳ ಬಗ್ಗೆ ಪರಿಶೀಲನೆ ನಡೆಸಿದಾಗ ಅದು ಮೈಸೂರಿನ ಮೇಟಗಳ್ಳಿಯಲ್ಲಿ ಜೂ.6ರಂದು ಆಫ್ ಆಗಿರುವುದು ಗೊತ್ತಾಯಿತು. ಈ ಸುಳಿವಿನ ಆಧಾರದ ಮೇರೆಗೆ ಮೇಟಗಳ್ಳಿ ಟವರ್ ಮತ್ತು ಜೂ.7ರಂದು ಮಹಿಳೆಯರ ಮುಂಡಗಳು ದೊರೆತ ಸ್ಥಳದ ಸುತ್ತಮುತ್ತಲಿನ ಟವರ್‌ಗಳಲ್ಲಿ ಕಾರ್ಯ ನಿರ್ವಹಿಸಿದ್ದ ಮೊಬೈಲ್‌ಗಳ ಮಾಹಿತಿಯನ್ನು ಕಲೆ ಹಾಕಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದು ಮೊಬೈಲ್ ಸಂಖ್ಯೆ ಮೇಲೆ ಬಲವಾದ ಅನುಮಾನ ವ್ಯಕ್ತವಾಯಿತು. ಆದರೆ ಅದೂ ಕೂಡ ಸ್ವಿಚ್ ಆಫ್ ಆಗಿತ್ತು. ಸ್ವಿಚ್ ಆಫ್ ಆಗಿದ್ದ ಸಿಮ್ ಯಾವ ಮೊಬೈಲ್‌ನಿಂದ ಕಾರ್ಯ ನಿರ್ವಹಿಸಿದೆ ಎಂಬುದರ ಬಗ್ಗೆ ತಾಂತ್ರಿಕ ತಂಡ ಪರಿಶೀಲಿಸಿ ಸದರಿ ಮೊಬೈಲ್‌ನಲ್ಲಿ 9 ಸಿಮ್‌ಗಳು ಕಾರ್ಯ ನಿರ್ವಹಿಸಿದ್ದವು ಎಂಬುದನ್ನು ಪತ್ತೆ ಹಚ್ಚಿತು. ತಕ್ಷಣವೇ ಎಚ್ಚೆತ್ತುಕೊಂಡ ಪೊಲೀಸರ ತಂಡ ಸದರಿ ಮೊಬೈಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಮ್ ಯಾವ ಟವರ್‌ನಲ್ಲಿದೆ ಎಂಬುದನ್ನು ಪತ್ತೆ ಹಚ್ಚಿ ತುಮಕೂರಿನ ಡಾಬಸ್‌ಪೇಟೆಗೆ ತೆರಳಿದಾಗ ಅಲ್ಲಿ ಸಿಕ್ಕಿಬಿದ್ದವರೇ ಸಿದ್ದಲಿಂಗಪ್ಪ ಮತ್ತು ಚಂದ್ರಕಲಾ ಎಂಬುವರು.

ಸಿದ್ದಲಿಂಗಪ್ಪ ವಿರುದ್ಧ ಹಲವಾರು ಸರಗಳವು ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದವು ಎಂಬುದೂ ಕೂಡ ಬೆಳಕಿಗೆ ಬಂತು. ಈತ ರಾಮನಗರ ಜಿಲ್ಲೆ ಮಾಗಡಿ ತಾಲೂಕು ಕೋಡಿಹಳ್ಳಿ ಕಾಲೋನಿಯವನಾಗಿದ್ದು, ಆತನ ಜೊತೆಗಿದ್ದ ಚಂದ್ರಕಲಾ ಪಾಂಡವಪುರ ತಾಲೂಕು ಹರವು ಗ್ರಾಮದವಳು. ಇವರಿಬ್ಬರೂ ಪ್ರೇಮಿಗಳಾಗಿದ್ದು, ಪಾಂಡವಪುರ ಮತ್ತು ಅರಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯರ ಮುಂಡಗಳು ದೊರೆತ ದಿನದಲ್ಲಿ ಅವರಿಬ್ಬರೂ ಈ ಭಾಗದಲ್ಲೇ ಇದ್ದರು ಎಂಬುದೂ ಕೂಡ ತಾಂತ್ರಿಕ ತಂಡದ ಸಹಕಾರದೊಂದಿಗೆ ಪತ್ತೆ ಹಚ್ಚಲಾಗಿತ್ತು. ಅವರಿಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಇವರು ಮೂವರು ಮಹಿಳೆಯರನ್ನು ಹತ್ಯೆ ಮಾಡಿ ಅವರಿಂದ ಚಿನ್ನಾಭರಣ ದೋಚಿ ಮೃತದೇಹ ರುಂಡ-ಮುಂಡ ಬೇರ್ಪಡಿಸಿ ಹರಿಯುವ ನೀರಿಗೆ ಬಿಸಾಕಿದ್ದರು ಎಂಬ ಬೆಚ್ಚಿ ಬೀಳುವಂತಹ ಸಂಗತಿ ಹೊರ ಬಿತ್ತು. ಅಲ್ಲದೇ ಇನ್ನೂ ಐವರು ಮಹಿಳೆಯರನ್ನು ಹತ್ಯೆ ಮಾಡಲು ಪಟ್ಟಿ ಮಾಡಿಕೊಂಡಿದ್ದರು ಎಂಬುದೂ ತಿಳಿಯಿತು.

ಚಂದ್ರಕಲಾ ಬೆಂಗಳೂರಿನ ಗಾರ್ಮೆಂಟ್ಸ್‌ನಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದರು. ಸಿದ್ದಲಿಂಗಪ್ಪ ಸರಗಳ್ಳನಾಗಿದ್ದ. ಇವರಿಬ್ಬರೂ ಪರಿಚಯವಾಗಿ, ಪ್ರೇಮಿಗಳಾಗಿ ಪರಿವರ್ತನೆಯಾದ ನಂತರ ಸಿದ್ದಲಿಂಗಪ್ಪ ಹಾಕಿದ ಐನಾತಿ ಐಡಿಯಾ ಗಾರ್ಮೆಂಟ್ಸ್‌ನಲ್ಲಿ ಚಂದ್ರಕಲಾಗೆ ಪರಿಚಯವಿರುವ ಮಹಿಳೆಯರಿಗೆ ಗಾರ್ಮೆಂಟ್ಸ್ ಹಾಗೂ ಹೋಂ ನರ್ಸಿಂಗ್ ಕೆಲಸ ಕೊಡಿಸುವುದಾಗಿ ನಂಬಿಸಿ, ಕರೆಸಿಕೊಂಡು ಅವರ ಹತ್ಯೆ ಮಾಡಿ, ಚಿನ್ನಾಭರಣ ದೋಚುವುದೇ ಆಗಿತ್ತು. ಆತನ ಐಡಿಯಾಗೆ ಚಂದ್ರಕಲಾ ಕೂಡ ಒಪ್ಪಿದ್ದಳು. ಇವರಿಬ್ಬರೂ ಮೈಸೂರಿನ ಮೇಟಗಳ್ಳಿಯಲ್ಲಿ ಬಾಡಿಗೆ ಮನೆಯೊಂದರಲ್ಲಿ ಇದ್ದುಕೊಂಡು ಜೂ.5ರಂದು ಚಂದ್ರಕಲಾ ತನಗೆ ಪರಿಚಯವಿದ್ದ ಚಾಮರಾಜನಗರದ ಸಿದ್ದಮ್ಮಳನ್ನು ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಪಾರ್ವತಿ ಎಂಬಾಕೆಯನ್ನು ಮೈಸೂರಿಗೆ ಕರೆಸಿಕೊಂಡಿದ್ದಾಳೆ. ಒಂದು ದಿನ ಪೂರ್ತಿ ಸುತ್ತಾಡಿಕೊಂಡಿದ್ದು, ಮರುದಿನ ರಾತ್ರಿ ಅವರಿಬ್ಬರನ್ನು ಉಸಿರುಗಟ್ಟಿಸಿ ಕೊಂದ ನಂತರ ರುಂಡ-ಮುಂಡ ಬೇರ್ಪಡಿಸಿ ಚೀಲದಲ್ಲಿ ತುಂಬಿಕೊಂಡು ಬೈಕ್‌ನಲ್ಲಿ ಸಾಗಿಸಿ ಒಂದು ಮುಂಡವನ್ನು ಪಾಂಡವಪುರ ಬಳಿ, ಹಾಗೂ ಮತ್ತೊಂದು ಮುಂಡವನ್ನು ಅರಕೆರೆ ಬಳಿ ಬಿಸಾಡಿ ಹೋಗಿದ್ದಾರೆ. ನಂತರ ಬೆಂಗಳೂರಿನ ಆಡುಗೋಡಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಅಲ್ಲಿನ ಕುಮುದಾ ಎಂಬಾಕೆಯನ್ನೂ ಇದೇ ರೀತಿ ಹತ್ಯೆ ಮಾಡಿ ಚಿನ್ನಾಭರಣ ದೋಚಿದ ನಂತರ ಡಾಬಸ್ ಪೇಟೆಗೆ ಹೋಗಿ ಬಾಡಿಗೆ ಮನೆಯಲ್ಲಿ ನೆಲೆಸಿ ಮತ್ತೆ ಐವರು ಮಹಿಳೆಯರ ಪಟ್ಟಿ ಮಾಡಿಕೊಂಡಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ಡಿವೈಎಸ್‌ಪಿ ಸಂದೇಶ್ ಕುಮಾರ್ ನೇತೃತ್ವದ ತಂಡಕ್ಕೆ ಇವರು ಸಿಕ್ಕಿಬೀಳದಿದ್ದಲ್ಲಿ ಇನ್ನೂ ಐವರು ಅಮಾಯಕ ಮಹಿಳೆಯರು ಬಲಿಯಾಗುವ ಅಪಾಯವಿತ್ತು. ಇಂದು ಮಂಡ್ಯ ಜಿಲ್ಲಾ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಭಯಾನಕ ವಿಚಾರ ವಿವರಿಸಿದರಲ್ಲದೇ ಸವಾಲಾಗಿದ್ದ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದ ಡಿವೈಎಸ್ಪಿ ಸಂದೇಶ್ ಕುಮಾರ್ ನೇತೃತ್ವದ ತಂಡವನ್ನು ಶ್ಲಾಘಿಸಿ 1 ಲಕ್ಷ ರೂ. ಬಹುಮಾನ ಘೋಷಿಸಿದರು. ಸುದ್ದಿಗೋಷ್ಠಿಯಲ್ಲಿ ಮಂಡ್ಯ ಜಿಲ್ಲಾ ಎಸ್ಪಿ ಯತೀಶ್, ಅಡಿಷನಲ್ ಎಸ್ಪಿ ವೇಣುಗೋಪಾಲ್, ತನಿಖಾ ತಂಡದ ಮುಖ್ಯಸ್ಥರಾದ ಡಿವೈಎಸ್‌ಪಿ ಸಂದೇಶ್ ಕುಮಾರ್ ಉಪಸ್ಥಿತರಿದ್ದರು.

ಬೀದಿಗೆ ಬಿದ್ದ ಸಿದ್ದಮ್ಮಳ ಕುಟುಂಬ

ಚಾಮರಾಜನಗರಕ್ಕೆ ಬಂದು ತಂದೆ-ತಾಯಿ, ಅತ್ತೆ ಹಾಗೂ ಮಕ್ಕಳನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದರು. ಗಂಡನ ಕಡೆಯಿಂದ ಆಕೆಗೆ ಬಂದ ಮನೆ ಮೇಲೆ ಮತ್ತೊಂದು ಮಹಡಿ ಕಟ್ಟಿಸುತ್ತಿದ್ದಳು. ಕಳೆದ 7 ತಿಂಗಳ ಹಿಂದೆ ಸಂಬಂಧಿಕರೊಬ್ಬರು ಮೃತಪಟ್ಟಾಗ ಚಾಮರಾಜನಗರಕ್ಕೆ ಬಂದ ಸಿದ್ದಮ್ಮ ಮನೆ ಕಟ್ಟಿಸುವ ಕಾರ್ಯದಲ್ಲಿ ನಿರತಳಾಗಿ, ಅಲ್ಲೇ ಉಳಿದು ಬಿಟ್ಟಳು. ಕೆಲಸಕ್ಕಾಗಿ ಮೈಸೂರಿಗೆ ಹೋಗುತ್ತಿದ್ದೇನೆ ಎಂದು ಜೂ.5ರಂದು ಬೆಳಗ್ಗೆ ಚಾಮರಾಜನಗರದಿಂದ ಹೊರಟಿದ್ದಾಳೆ. ಮರುದಿನವೇ ಆಕೆಯ ಮೊಬೈಲ್ ಸ್ವಿಚ್ ಆಫ್ ಆಗಿದೆ. ತಿಂಗಳಾದರೂ ಮೊಬೈಲ್ ಸ್ವಿಚ್ ಆಫ್ ಆಗಿದ್ದರಿಂದ ಆಕೆಯ ತಾಯಿ ಪುಟ್ಟನಂಜಮ್ಮ ಜು.7ರಂದು ಚಾಮರಾಜನಗರ ಟೌನ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ. ಅಮಾಯಕ ಮಹಿಳೆ ಸಿದ್ದಮ್ಮಳನ್ನು ಸೀರಿಯಲ್ ಕಿಲ್ಲರ್‌ಗಳು ಕೇವಲ ಅಲ್ಪ ಪ್ರಮಾಣದ ಚಿನ್ನಾಭರಣಕ್ಕಾಗಿ ಬಲಿ ಪಡೆದಿದ್ದಾರೆ. ಆಕೆಯ ವಯೋವೃದ್ಧ ತಂದೆ-ತಾಯಿ, ಅತ್ತೆ ಇದೀಗ ನಿರ್ವಹಣೆ ಮಾಡುವವರಿಲ್ಲದೇ ಚಿಂತೇಗಿಡಾಗಿದ್ದಾರೆ. ಚಿಕ್ಕವಯಸ್ಸಿನ ಇಬ್ಬರೂ ಮಕ್ಕಳು ತಬ್ಬಲಿಯಾಗಿದ್ದಾರೆ. ಇಂದು ಸಂಜೆ ಪೊಲೀಸರು ಕರೆ ಮಾಡಿ ನಿಮ್ಮ ಮಗಳು ಬದುಕಿಲ್ಲ. ಪಾಂಡವಪುರಕ್ಕೆ ಬನ್ನಿ. ನಿಮ್ಮ ಪದ್ಧತಿಯಂತೆ ಅಂತಿಮ ಕಾರ್ಯಗಳನ್ನು ನೆರವೇರಿಸಿ ಎಂದು ಹೇಳಿದ್ದಾರೆ ಎಂದು ಮೈಸೂರು ಮಿತ್ರನಿಗೆ ಸಿದ್ದಮ್ಮಳ ತಂದೆ ಕುಮಾರ ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತರು. ನಾಳೆ ವರಮಹಾಲಕ್ಷ್ಮಿ ಹಬ್ಬ ಇರುವುದರಿಂದ ಶನಿವಾರ ಪಾಂಡವಪುರಕ್ಕೆ ತೆರಳುವುದಾಗಿ ಅವರು ತಿಳಿಸಿದರು. ಆದರೆ ಈ ವಯೋವೃದ್ಧರಿಗೆ ಸಿದ್ದಮ್ಮ ಕೊಲೆಯಾಗಿದ್ದು ಯಾವಾಗ ಎಂಬುದೇ ಗೊತ್ತಿಲ್ಲ.

ನಗರಸಭೆ ಸದಸ್ಯೆ ಸೇರಿ ನಾಲ್ವರ ಬಂಧನ

ನಾಗಮಂಗಲಕ್ಕೆ ಸುಲೋಚನಾ ಪುತ್ರಿ ಮದುವೆಯಾದಾಗ ಅದರ ಜವಾಬ್ದಾರಿಯನ್ನು ಆತನೇ ವಹಿಸಿದ್ದ ಎನ್ನಲಾಗಿದ್ದು, ಆ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಗಾಯಿತ್ರಿ ಹಲವು ಬಾರಿ ಗಲಾಟೆ ಮಾಡಿದ್ದಳಾದರೂ, ಅವರಿಬ್ಬರ ಅಕ್ರಮ ಸಂಬಂಧ ಮುಂದುವರಿದಿದ್ದರಿಂದ ಸುಲೋಚನಾಳನ್ನು ಮುಗಿಸಿಬಿಡಲು ಯೋಜನೆ ರೂಪಿಸಿ, ಆಕೆ, ಸಂಬಂಧಿಕರಾದ ಸೌಭಾಗ್ಯ, ನಾಗಮ್ಮ ಹಾಗೂ ಕುಮಾರನ ಸಹಾಯದಿಂದ ಮಾರ್ಚ್ 8ರಂದು ರಾತ್ರಿ ಸುಲೋಚನಾ ಮನೆಯಲ್ಲೇ ಆಕೆಯ ಕತ್ತು ಹಿಸುಕಿ ಹತ್ಯೆಗೈದಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ನಂಜನಗೂಡು ಟೌನ್ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ್ ನೇತೃತ್ವದಲ್ಲಿ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದರಾದರೂ, ಆರೋಪಿಗಳ್ಯಾರು ಎಂಬುದರ ಬಗ್ಗೆ ಸುಳಿವು ದೊರೆತಿರಲಿಲ್ಲ. ಕಡೆಗೆ ಈ ಹಿಂದೆ ಸುಲೋಚನಾಳೊಂದಿಗೆ ಜಗಳ ಮಾಡಿದ್ದ ಗಾಯತ್ರಿಯ ಮೇಲೆ ಸಂಶಯ ಬಂದ ಹಿನ್ನೆಲೆಯಲ್ಲಿ ಮಂಗಳವಾರ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಮೂವರು ಸಂಬಂಧಿಕರೊಂದಿಗೆ ಸೇರಿ ತಾನೇ ಶಿಕ್ಷಕಿ ಸುಲೋಚನಾಳನ್ನು ಹತ್ಯೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾಳೆ. ನಂಜನಗೂಡು ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ಕೆ.ತಳವಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ವಿಜಯರಾಜ್, ಬಿ.ಮಹೇಂದ್ರ, ಟಿ.ಆರತಿ, ಸಿಬ್ಬಂದಿಗಳಾದ ಸತೀಶ, ಅಶೋಕ್, ಲೋಕೇಶ, ಶಿವಕುಮಾರ್, ನಾಗೇಂದ್ರ ರಾಜು ಹಾಗೂ ಶ್ರೀದೇವಿ ಗಾಣಿಗೇರ ಅವರು ಪಾಲ್ಗೊಂಡಿದ್ದರು.

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ

ಬ್ರಾಂಡ್ ಅಂಬಾಸಿಡರ್ ಸುದೀಪ್‌ರಿಂದ ಟ್ರೋಫಿ ಬಿಡುಗಡೆ

● ಆರು ತಂಡಗಳನ್ನು ಮುನ್ನಡೆಸುವ ನಾಯಕರುಗಳ ಹೆಸರು ಪ್ರಕಟ ● ಆ.7ರಿಂದ 26ರವರೆಗೆ ಮೈಸೂರು, ಬೆಂಗಳೂರಲ್ಲಿ ಪಂದ್ಯಗಳು ● ಸ್ಟಾರ್ ಆಟಗಾರರ ಆಗಮನ, ಅಭಿಮಾನಿಗಳಲ್ಲಿ ಕಾತುರ

ಮೈಸೂರು,ಆ.4(ಎಂಟಿವೈ)- ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ನೆನೆಗುದಿಗೆ ಬಿದ್ದಿದ್ದ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯು ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ-20 ಟೂರ್ನಿ ಎಂಬ ಹೊಸ ಹೆಸರಿನೊಂದಿಗೆ ಪುನರಾರಂಭವಾಗುತ್ತಿದ್ದು, ತಂಡವನ್ನು ಮುನ್ನಡೆಸುವ ಆರು ನಾಯಕರುಗಳ ಹೆಸರನ್ನು ಚಿತ್ರನಟ ಹಾಗೂ ಪಂದ್ಯಾವಳಿಯ ಬ್ರಾಂಡ್ ಅಂಬಾಸಿಡರ್ ಸುದೀಪ್ ಪ್ರಕಟಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ವರ್ಣರಂಜಿತ ಕಾರ್ಯಕ್ರಮದಲ್ಲಿ ಮಹಾರಾಜ ಟ್ರೋಫಿಯನ್ನು ಬಿಡುಗಡೆ ಮಾಡಿದ ನಟ ಸುದೀಪ್, ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿರುವ ತಂಡಗಳ ನಾಯಕರ ಪಟ್ಟಿಯನ್ನು ಪ್ರಕಟಿಸಿದರು. ಪಂದ್ಯಾವಳಿ ಆರಂಭಕ್ಕೆ ಇನ್ನು ಕೇವಲ ಮೂರು ದಿನಗಳು ಮಾತ್ರ ಬಾಕಿಯಿದೆ.

ಇದೇ ವೇಳೆ ನಟ ಸುದೀಪ್ ಮಾತನಾಡಿ ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿ ಬಿಡುಗಡೆ ಮಾಡುತ್ತಿರುವುದು ಸಂತೋಷ ತಂದಿದೆ. ಈ ಪಂದ್ಯಾವಳಿ ಯಶಸ್ಸು ಸಾಧಿಸಲೆಂದು ಹಾರೈಸುತ್ತೇನೆ ಎಂದರು.

ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಈ ಬಾರಿ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಹೆಸರಿಗೆ ಬದಲಾಗಿ ಅದೇ ಮಾದರಿಯಲ್ಲಿ ಮಹಾರಾಜ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿ ಆಯೋಜಿಸುತ್ತಿದೆ. ಆ.7 ರಿಂದ 26 ಮೈಸೂರು ಹಾಗೂ ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ.

ಆರು ತಂಡ: ಈ ಬಾರಿಯ ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆರು ತಂಡಗಳು ಸೆಣೆಸಾಡಲಿವೆ. ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ರಾಯಚೂರು ಹಾಗೂ ಮಂಗಳೂರಿನ ತಂಡಗಳು ಭಾಗವಹಿಸುತ್ತಿವೆ. ಮೈಸೂರು ವಾರಿಯರ್ಸ್ ತಂಡವನ್ನು ಕರುಣ್ ನಾಯರ್ ಮುನ್ನಡೆಸಲಿದ್ದಾರೆ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು ಮಯಾಂಕ್ ಅಗರ್‌ವಾಲ್, ಗುಲ್ಬರ್ಗಾ ಮೈಸ್ಟಿಕ್ ತಂಡವನ್ನು ಮನೀಶ್ ಪಾಂಡೆ, ಶಿವಮೊಗ್ಗ ಸ್ಟೈಕರ್ಸ್ ತಂಡವನ್ನು ಕೆ.ಗೌತಮ್, ಮಂಗಳೂರು ಯುನೈಟೆಡ್ ತಂಡವನ್ನು ಸಮರ್ಥ್. ಆರ್ ಹಾಗೂ ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಅಭಿಮನ್ಯು ಮಿಥುನ್ ಮುನ್ನಡೆಸಲಿದ್ದಾರೆ.

ಚಾಲನೆ: ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆ.7 ರಂದು ಮಧ್ಯಾಹ್ನ 2 ಗಂಟೆಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಮಹಾರಾಜ ಟ್ರೋಫಿ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಆ.7ರಿಂದ 15ರವರೆಗೆ ಪ್ರತಿದಿನ 2 ಪಂದ್ಯದಂತೆ ಒಟ್ಟು 18 ಪಂದ್ಯಗಳು ಮೊದಲ ಹಂತದಲ್ಲಿ ನಡೆಯಲಿವೆ. ಬಳಿಕ ಎರಡನೇ ಹಂತದಲ್ಲಿ ಫೈನಲ್ ಸೇರಿದಂತೆ ಉಳಿದ 16 ಪಂದ್ಯಗಳು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿವೆ.

ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಮಾತನಾಡಿ, ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಮಾದರಿಯಲ್ಲಿ ಟೂರ್ನಿ ನಡೆಯುತ್ತಿದ್ದು, ಫ್ರಾಂಚೈಸಿಗಳ ಬದಲಿಗೆ ಪ್ರಾಯೋಜಕತ್ವಡಿ ಟೂರ್ನಿಯಲ್ಲಿ ಆಯೋಜಿಸಲಾಗುತ್ತಿದೆ ನಟ ಕಿಚ್ಚ ಸುದೀಪ್ ಅವರಿಗೆ ನಾನು ಅಭಿನಂದಿಸುತ್ತೇನೆ. ಅವರು ನೈಜ ಕ್ರೀಡಾಪ್ರೇಮಿಯಾಗಿದ್ದು, ಸ್ವತಃ ಕ್ರಿಕೆಟ್‌ನಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸುದೀಪ್ ಅವರು ಟೂರ್ನಿಯ ಬ್ರಾಂಡ್ ರಾಯಭಾರಿ ಎಂದು ಘೋಷಿಸಲು ನನಗೆ ಹೆಮ್ಮೆಯಾಗುತ್ತಿದೆ ಎಂದರು.

ಆಗಸ್ಟ್ 7ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನಲ್ಲಿ ಮಂಗಳೂರು ಯುನೈಟೆಡ್ ಮತ್ತು ಹುಬ್ಬಳ್ಳಿ ಟೈಗರ್ಸ್ ತಂಡಗಳ ನಡುವೆ ಮೊದಲ ಪಂದ್ಯ ನಡೆಯಲಿದೆ. ಮೊದಲ ದಿನದ ಎರಡನೇ ಪಂದ್ಯದಲ್ಲಿ ಕರುಣ್ ನಾಯರ್ ನಾಯಕತ್ವದ ಮೈಸೂರು ವಾರಿಯರ್ಸ್ ತಂಡ ಕೆ. ಗೌತಮ್ ನಾಯಕತ್ವದ ಶಿವಮೊಗ್ಗ ಸ್ಟೈಕರ್ಸ್ ವಿರುದ್ಧ ಸೆಣಸಲಿದೆ ಎಂದರು.

ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ ಮಾತನಾಡಿ, ಮಹಾರಾಜ ಟ್ರೋಫಿ ಟಿ-20 ಟೂರ್ನಿಯ ಟೈಟಲ್ ಪ್ರಾಯೋಜಕತ್ವವನ್ನು ಶ್ರೀರಾಮ್ ಗ್ರೂಪ್ ವಹಿಸಲಿದೆ. ಈ ಪಂದ್ಯಾವಳಿ ಸೇರಿದಂತೆ ಒಟ್ಟು ಮೂರು ಆವೃತ್ತಿಗಳಿಗೂ ಶ್ರೀರಾಮ್ ಗ್ರೂಪ್ ಟೈಟಲ್ ಪ್ರಾಯೋಜಕತ್ವ ವಹಿಸಲಿದೆ. ಮೂರು ವಾರ ನಡೆಯುವ ಟಿ-20 ಕ್ರಿಕೆಟ್ ಹಬ್ಬದ ಪ್ರಾಯೋಜಕತ್ವವನ್ನು ಸ್ಟಾರ್‌ಸ್ಪೋರ್ಟ್ಸ್2 ಮತ್ತು ಸ್ಟಾರ್ ಸ್ಪೋರ್ಟ್ಸ್ ಕನ್ನಡದಲ್ಲಿ ನೇರಪ್ರಸಾರವಾಗಲಿದೆ. ಹೆಚ್ಚಿನ ಪ್ರಮಾಣದ ಬಳಕೆಗಾಗಿ ಫ್ಯಾನ್‌ಕೋಡ್ ಆಪ್‌ನಲ್ಲಿಯೂ ವೀಕ್ಷಿಸಬಹುದು ಎಂದರು.

ಸ್ಟಾರ್ ಆಟಗಾರರು: ಈ ಬಾರಿ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಕರ್ನಾಟಕ ಸ್ಟಾರ್ ಆಟಗಾರರಾದ ಮಯಾಂಕ್ ಅಗರ್ವಾಲ್, ಮನೀಷ್ ಪಾಂಡೆ, ಜೆ.ಸುಚಿತ್, ದೇವದತ್ ಪಡಿಕಲ್, ಶ್ರೇಯಸ್ ಗೋಪಾಲ್, ಕೆ.ಗೌತಮ್, ಕರುಣ್ ನಾಯರ್, ಅಭಿನವ್ ಮನೋಹರ್, ಕೆಸಿ ಕಾರ್ಯಪ್ಪ, ಪ್ರವೀಣ್ ದುಬೆ ಹಾಗೂ ಅಭಿಮನ್ಯು ಮಿಥುನ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದು, ಅಭಿಮಾನಿಗಳಲ್ಲಿ ಕಾತುರವನ್ನುಂಟು ಮಾಡಿದೆ.

ಈ ಸಂದರ್ಭದಲ್ಲಿ ಕೆಎಸ್‌ಸಿಎ ಮೈಸೂರು ವಲಯ ಸಂಚಾಲಕ ಎಸ್.ಸುಧಾಕರ್ ರೈ, ಸದಸ್ಯ ಇರ್ಫಾನ್ ಸೇಠ್, ಮೈಸೂರು ವಾರಿಯರ್ಸ್ ತಂಡದ ಮಾಲೀಕ ಪವನ್ ರಂಗ, ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್ ಇದ್ದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನಟ ಹಾಗೂ ಮಹಾರಾಜ ಟ್ರೋಫಿ ಪಂದ್ಯಾವಳಿಯ ಬ್ರಾಂಡ್ ಅಂಬಾಸಿಡರ್ ಕಿಚ್ಚ ಸುದೀಪ್ ಟ್ರೋಫಿ ಅನಾವರಣಗೊಳಿಸಿದರು. ಚಿತ್ರದಲ್ಲಿ ಕೆಸಿಎ ವಲಯ ಸದಸ್ಯ ಇರ್ಫಾನ್ ಸೇಠ್, ವಲಯ ಸಂಚಾಲಕ ಎಸ್.ಸುಧಾಕರ್ ರೈ, ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್, ಮೈಸೂರು ವಾರಿಯರ್ಸ್ ತಂಡದ ಮಾಲೀಕ ಪವನ್ ರಂಗ, ವಲಯ ಅಧ್ಯಕ್ಷ ಆರ್.ಕೆ.ಹರಿಕೃಷ್ಣಕುಮಾರ್ ಅವರನ್ನು ಕಾಣಬಹುದು.

ರಿಂಗ್ ರಸ್ತೆಯಲ್ಲಿ ಕಸ ಹಾಕುವವರ ಮೇಲೆ ಸಿಸಿ ಕ್ಯಾಮರಾ ಕಣ್ಗಾವಲು

ಸ್ವಚ್ಛತೆಗಾಗಿ 24 ಪೌರಕಾರ್ಮಿಕರ ನಿಯೋಜನೆ | 43.5 ಕಿ.ಮೀ ರಿಂಗ್ ರಸ್ತೆ ಇನ್ನು ಕ್ಲೀನ್‌ಸ್ಟ್ರೀಟ್

ಮೈಸೂರು, ಆ.4(ಎಂಟಿವೈ)- ಸ್ವಚ್ಛ ಹಾಗೂ ಸಾಂಸ್ಕೃತಿಕ ನಗರಿ ಮೈಸೂರಿನ ರಿಂಗ್ ರಸ್ತೆಯ ಆಜುಬಾಜಲ್ಲಿ ಕಸ ಸುರಿದು, ಬೇಜವಾಬ್ದಾರಿ ಮೆರೆಯುತ್ತಿದ್ದವರಿಗೆ ತಕ್ಕ ಪಾಠ ಕಲಿಸಲು ಮೈಸೂರು ಮಹಾನಗರ ಪಾಲಿಕೆ ನಿರ್ಧರಿಸಿದ್ದು, 43.5 ಕಿ.ಮೀ ರಿಂಗ್ ರಸ್ತೆಯಲ್ಲಿ 75 ಸಿಸಿ ಕ್ಯಾಮರಾ ಅಳವಡಿಸಿ ಸ್ವಚ್ಛತೆಗಾಗಿ 24 ಮಂದಿ ಪೌರಕಾರ್ಮಿಕರ ತಂಡವನ್ನು ರಚಿಸಲು ಕ್ರಮ ಕೈಗೊಂಡಿದೆ.

ಮೈಸೂರು ನಗರದ ಸ್ವಚ್ಛತೆಗೆ ಪೌರ ಕಾರ್ಮಿಕರು ಹಗಲಿರುಳು ಶ್ರಮಿಸುತ್ತಿದ್ದರೂ ಕೆಲವರು ಮಾತ್ರ ಎಲ್ಲೆಂದರಲ್ಲಿ ಕಸ ಎಸೆದು ಮೈಸೂರಿನ ಅಂದ ಕೆಡಿಸುತ್ತಿದ್ದಾರೆ. ಅದರಲ್ಲೂ ರಿಂಗ್ ರಸ್ತೆಎರಡೂ ಬದಿಯಲ್ಲೂ ಕಟ್ಟಡ ತ್ಯಾಜ್ಯ, ಪ್ಲಾಸ್ಟಿಕ್, ಅನುಪಯುಕ್ತ ವಸ್ತುಗಳನ್ನು ಎಸೆದು ಹೋಗುತ್ತಿದ್ದಾರೆ ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಕಸದ ರಾಶಿಗಳು ಸ್ವಾಗತಿಸುವಂತಾಗಿದೆ ಈ ಹಿನ್ನೆಲೆಯಲ್ಲಿ ಈಗಾಗಲೇ ರಿಂಗ್ ರಸ್ತೆಯಲ್ಲಿ ಕಸ ಸುರಿಯುವವರ ವಿರುದ್ಧ ಕ್ರಮ ಕೈಗೊಳ್ಳಲು ಹಲವು ಕ್ರಮ ಕೈಗೊಳ್ಳಲಾಗಿತ್ತು. ಆದರೂ ಕದ್ದು ಮುಚ್ಚಿ ಕಸ ಸುರಿಯುತ್ತಿರುವುದರಿಂದ ಇದೀಗ ಪಾಲಿಕೆ ಸಿಸಿ ಕ್ಯಾಮರಾ ಕಣ್ಗಾವಲು ಹಾಕಲು ನಿರ್ಧರಿಸಿದೆ.

ರಿಂಗ್ ರಸ್ತೆಯಲ್ಲಿ ಸಿಸಿ ಕ್ಯಾಮರಾ ಕಣ್ಗಾವಲು ಹಾಕುವುದರೊಂದಿಗೆ ರಸ್ತೆಯುದ್ದಕ್ಕೂ ಬಿದ್ದಿರುವ ಕಸ ತೆರವುಗೊಳಿಸಿ, ಸ್ವಚ್ಛತೆ ಕಾಪಾಡಲು ಶಾಶ್ವತವಾಗಿ 24 ಪೌರಕಾರ್ಮಿಕರುಳ್ಳ ತಂಡವನ್ನು ರಚಿಸಲಾಗಿದೆ. ಇನ್ನು ಮುಂದೆ ರಿಂಗ್ ರಸ್ತೆ ಸ್ವಚ್ಛ ಹಾಗೂ ಸುಂದರ ರಸ್ತೆಯಾಗಿ ಕಂಗೊಳಿಸಲಿದೆ.

ಈ ಕುರಿತಂತೆ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಶೀಘ್ರದಲ್ಲಿಯೇ ರಿಂಗ್‌ರಸ್ತೆಯ ಸ್ವಚ್ಛತೆಗೆ ಪೌರಕಾರ್ಮಿಕರ ತಂಡವನ್ನು ರಚಿಸಲಾಗುತ್ತದೆ. ಈ ತಂಡವನ್ನು ವಿಶೇಷ ಸಂದರ್ಭಕ್ಕೆ ಮಾತ್ರ ರಚಿಸದೇ ವರ್ಷವಿಡೀ ನಿಯೋಜಿಸಲಾಗುತ್ತಿದೆ. ಆದಷ್ಟು ಶೀಘ್ರ ರಿಂಗ್ ರಸ್ತೆಯ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ನೀರಿನ ಶುಲ್ಕ: ಹಲವು ವರ್ಷಗಳಿಂದ ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿರುವವರು ಒಂದೇ ಬಾರಿ ಅಸಲನ್ನು ಪಾವತಿಸಿದರೆ ಬಡ್ಡಿಗೆ ಬಡ್ಡಿ ಹಾಕುವುದರಿಂದ ವಿನಾಯಿತಿ ನೀಡುವ 'ಬಡ್ಡಿ ನಿಶ್ಚಲ' ಯೋಜನೆ ಜಾರಿಗೆ ತರಲಾಗಿದೆ. ಈ ಯೋಜನೆ ಜು.15ರಿಂದ ಅನ್ವಯ ಆಗುವಂತೆ 6 ತಿಂಗಳವರೆಗೆ ಜಾರಿಯಲ್ಲಿ ಇರಲಿದೆ. ಅದರ ಸದುಪಯೋಗ ಮಾಡಿಕೊಳ್ಳಬೇಕು. ನೀರಿನ ಕಂದಾಯ 140 ಕೋಟಿ ರೂ. ಬಾಕಿ ಇದೆ. ಅಲ್ಲದೆ, ಬಡ್ಡಿಯೇ 70 ಕೋಟಿ ಇದೆ ಎಂದರು. ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ಗ್ರಾಹಕರಿಗೆ ಹಳೆಯ ಬಡ್ಡಿಯ ಮೇಲೆ ಮತ್ತೆ ಬಡ್ಡಿ ವಿಧಿಸುವುದಿಲ್ಲ. ಬಡ್ಡಿ ನಿಶ್ಚಲ ಯೋಜನೆಯ ಲಾಭ ಪಡೆದವರು ಮುಂದಿನ ಆರು ತಿಂಗಳ (ಯೋಜನೆ ಅವಧಿಯೊಳಗೆ) ಅವಧಿಯಲ್ಲಿ ಮತ್ತೆ ಅಸಲು ಉಳಿಸಿಕೊಂಡರೆ ಅದಕ್ಕೆ ಬಡ್ಡಿ ವಿಧಿಸಲಾಗುತ್ತದೆ. 6 ತಿಂಗಳ ನಂತರ ಬಡ್ಡಿ ನಿಶ್ಚಲ ಯೋಜನೆ ಸ್ಥಗಿತಗೊಳ್ಳಲಿದ್ದು, ನಂತರ ಯಥಾಸ್ಥಿತಿಯಲ್ಲಿ ಬಡ್ಡಿ ವ್ಯವಸ್ಥೆ ಮುಂದುವರಿಯಲಿದೆ ಈ ಬಡ್ಡಿ ನಿಶ್ಚಲ ಯೋಜನೆಯ ಸೌಲಭ್ಯ ಗೃಹ ಬಳಕೆ ಗ್ರಾಹಕರಿಗೆ ಮಾತ್ರ ಲಭ್ಯವಿದೆ ಎಂದರು.

ಬಡ್ಡಿ ಮನ್ನಾ ಮಾಡಲು ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಹಿಂದೆ ಮೇಯರ್ ಅವರು ಈ ಬಗ್ಗೆ ತಿಳಿಸಿದ್ದರು. 10 ದಿನಗಳಿಂದ ನಡೆಯುತ್ತಿರುವ ನೀರು ಕಂದಾಯ ಅಭಿಯಾನದಲ್ಲಿ 15ರಿಂದ 20 ಲಕ್ಷ ರೂ. ಸಂದಾಯವಾಗಿದೆ ಎಂದು ಹೇಳಿದರು.

ಪಾಲಿಕೆ ಸಿಬ್ಬಂದಿ ಮನೆ ಮನೆಗೆ ಹೋಗಿ ನೀರಿನ ಕಂದಾಯ ಸಂಗ್ರಹಿಸುತ್ತಿದ್ದಾರೆ. ಆ್ಯಪ್ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಗೂಗಲ್ ಪೇ, ಫೋನ್‌ಪೇ ಮೂಲಕವೂ ಪಾವತಿಸಿ ರಶೀದಿ ಪಡೆಯಬಹುದು ಎಂದು ವಿವರಿಸಿದರು.

ಗ್ರೇಟರ್ ಮೈಸೂರು: ಗ್ರೇಟರ್ ಮೈಸೂರು ಸಂಬಂಧಿಸಿದಂತೆ ಪ್ರಸ್ತಾವನೆ ಸಿದ್ಧವಾಗಿದೆ. ಮುಂದಿನ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಿದೆ ಎಂದು ತಿಳಿಸಿದರು.



ನೇಣು ಬಿಗಿದುಕೊಂಡು ಎಎಸ್‌ಐ ಪತ್ನಿ ಆತ್ಮಹತ್ಯೆ

ಮೈಸೂರು, ಆ. 4 (ಆರ್‌ಕೆ)- ಕೆಎಸ್‌ಆರ್‌ಪಿ ಮೀಸಲು ಪಡೆಯ ಎಎಸ್‌ಐ ಪತ್ನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿ ಬುಧವಾರ ರಾತ್ರಿ ಸಂಭವಿಸಿದೆ.

ಮೈಸೂರಿನ ಕೆಎಸ್‌ಆರ್‌ಪಿ 5ನೇ ಬೆಟಾಲಿಯನ್‌ನಲ್ಲಿ ಮೀಸಲು ಪಡೆಯ ಎಎಸ್‌ಐ ಆಗಿರುವ ಮಂಜೇಗೌಡರ ಪತ್ನಿ ಜ್ಯೋತಿ (47) ನೇಣಿಗೆ ಶರಣಾದವರು. ತೀವ್ರ ಬೆನ್ನು ನೋವಿನಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರೂ, ಗುಣವಾಗದೇ ದಿನೇ ದಿನೆ ನೋವು ಜಾಸ್ತಿಯಾದ ಕಾರಣ ನೋವು ತಾಳಲಾರದೇ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಹೇಳಲಾಗಿದೆ. ಪತಿ ಮಂಜೇಗೌಡ ಅವರು ಊಟ ಮುಗಿಸಿ ವಿಹಾರಕ್ಕೆಂದು ಹೊರಗೆ ಹೋಗಿ ಬರುವಷ್ಟರಲ್ಲಿ ಬುಧವಾರ ರಾತ್ರಿ ಸುಮಾರು 9.30 ಗಂಟೆ ವೇಳೆಗೆ ಜ್ಯೋತಿ ಅವರು ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಕ್ರಿಕೆಟ್ ಬೆಟ್ಟಿಂಗ್ ದಂಧೆ: ಇಬ್ಬರ ಬಂಧನ, 1,03,500 ರೂ. ನಗದು ವಶ


ಮೈಸೂರು, ಆ.4(ಆರ್‌ಕೆ)- ಮೈಸೂರಿನ ಹೆಬ್ಬಾಳು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ರಸ್ತೆಯ ಮನೆಯೊಂದರಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದು, ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಆಗಸ್ಟ್ 2ರಂದು ಮನೆ ಮೇಲೆ ದಾಳಿ ನಡೆಸಿದ ಪೊಲೀಸರು, ವೆಸ್ಟ್ ಇಂಡೀಸ್ ಮತ್ತು ಭಾರತ ನಡುವೆ ನಡೆಯುತ್ತಿರುವ ಟಿ-20 ಕ್ರಿಕೆಟ್ ಪಂದ್ಯಕ್ಕೆ ಬೆಟ್ಟಿಂಗ್ ಕಟ್ಟಿ ಅಕ್ರಮವಾಗಿ ಜೂಜಾಟ ನಡೆಸುತ್ತಿದ್ದುದು ತಿಳಿಯಿತು.



ದಂಧೆಯಲ್ಲಿ ತೊಡಗಿದ್ದ ಇಬ್ಬರನ್ನು ಬಂಧಿಸಿದ ಪೊಲೀಸರು ಅವರಿಂದ 6 ಮೊಬೈಲ್ ಫೋನ್‌ಗಳು, 1 ಟಿವಿ, 1 ಲ್ಯಾಪ್‌ಟಾಪ್, 1,03,500 ರೂ. ನಗದನ್ನು ವಶಪಡಿಸಿಕೊಂಡರು. ಕಳೆದ 7 ತಿಂಗಳಿನಿಂದ ಮನೆ ಬಾಡಿಗೆಗೆ ಪಡೆದು ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ಡಿಸಿಪಿ ಗೀತಾ ಪ್ರಸನ್ನ, ಸಿಸಿಬಿ ಎಸಿಪಿ ಸಿಕೆ ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ನಡೆದ ದಾಳಿಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿಗಳಾದ ಹಿರಣ್ಣಯ್ಯ, ಶಿವರಾಜು, ಕೆ.ಜಿ.ಶ್ರೀನಿವಾಸ್ ಅವರು ಪಾಲ್ಗೊಂಡಿದ್ದರು.

ಪರಿಷತ್‌ಗೆ ಚಿಂಚನಸೂರ್ ಅವಿರೋಧ ಆಯ್ಕೆ

ಬೆಂಗಳೂರು, ಆ.4(ಕೆಎಂಶಿ)- ರಾಜ್ಯ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಸಿ.ಎಂ.ಇಬ್ರಾಹಿಂ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬಿಜೆಪಿಯ ಬಾಬುರಾವ್ ಚಿಂಚನಸೂರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ



ಸಹಾಯಕ ಚುನಾವಣಾಧಿಕಾರಿ ಹಾಗೂ ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ಶ್ರೀಮತಿ ವಿಶಾಲಾಕ್ಷಿ ಚಿಂಚನಸೂರ್ ಆಯ್ಕೆಯನ್ನು ಪ್ರಕಟಿಸಿದ್ದಾರೆ. ರಾಜ್ಯ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾಗಬೇಕಿದ್ದ ಪರಿಷತ್‌ನ ಒಂದು ಸ್ಥಾನಕ್ಕೆ ಆಗಸ್ಟ್ 11ಕ್ಕೆ ಚುನಾವಣೆಯನ್ನು ನಿಗದಿಪಡಿಸಿ ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿಯನ್ನು ಪ್ರಕಟಿಸಿತ್ತು. ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಬಾಬುರಾವ್ ಚಿಂಚನಸೂರ್ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರು. ಇಂದು ನಾಮಪತ್ರ ವಾಪಾಸ್ ತೆಗೆದುಕೊಳ್ಳಲು ಕೊನೆಯ ದಿನವಾಗಿತ್ತು. ಕಣದಲ್ಲಿ ಯಾರೂ ಇಲ್ಲದ ಕಾರಣ ಏಕೈಕ ಅಭ್ಯರ್ಥಿಯಾಗಿದ್ದ ಅವರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮೂರನೇ ಪುಟದಿಂದ

ವಾಹನ ಅಪಘಾತ: ಓರ್ವ ಸಾವು

ಸ್ನೇಹಿತರೊಂದಿಗೆ ತೆರಳಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಬುಧವಾರ ಸಂಜೆ ದಾವಣಗೆರೆಯಿಂದ ಹೊರಟಿದ್ದರು. ಆದರೆ ಗುರುವಾರ ಮುಂಜಾನೆ ಸುಮಾರು 3 ಗಂಟೆ ಸಮಯದಲ್ಲಿ ಅರಕಲ ಗೂಡು ತಾಲೂಕಿನ ಗಂಗೂರು ಹ್ಯಾಂಡ್‌ಪೋಸ್ಟ್ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡ ಗೂಡ್ಸ್ ವಾಹನ ರಸ್ತೆ ಬದಿ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಚಾಲಕನ ಪಕ್ಕದ ಸೀಟ್‌ನಲ್ಲಿ ಕುಳಿತಿದ್ದ ಫಸಿಯೂದ್ದೀನ್ ತೀವ್ರವಾಗಿ ಗಾಯಗೊಂಡಿದ್ದಾರೆ. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ವಾಹನದಲ್ಲಿದ್ದ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಈ ಪೈಕಿ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಇಬ್ಬರು, ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಮೂವರು, ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ಇಬ್ಬರು, ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಓರ್ವ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಅರಕಲಗೂಡು ತಾಲೂಕಿನ ಕೊಣನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮೃತರ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಿದ್ದಾರೆ.

ಫಸಿಯೂದ್ದೀನ್ ಅವರು ಸಿದ್ದರಾಮಯ್ಯನವರ ಅಭಿಮಾನಿಯಾಗಿದ್ದರು. ಅವರು ಅಪಘಾತದಲ್ಲಿ ಸಾವನ್ನಪ್ಪಿರುವುದು ಕಾಂಗ್ರೆಸ್ ಕಾರ್ಯಕರ್ತರಿಗೆ ತುಂಬಲಾರದ ನಷ್ಟ ಎಂದು ಪಿರಿಯಾಪಟ್ಟಣ ತಾಲೂಕಿನ ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಸಂತಾಪ: ಇವರ ದುರಂತ ಸಾವಿಗೆ ಮಾಜಿ ಶಾಸಕ ಕೆ.ವೆಂಕಟೇಶ್, ಕಾಂಗ್ರೆಸ್ ಮುಖಂಡ ನಿತಿನ್ ವೆಂಕಟೇಶ್, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್ ಬಾಬು, ಗ್ರಾಪಂ ಸದಸ್ಯ ಸೋಹೇಲ್ ಪಾಷಾ, ಜಾವೀದ್ ಅಹ್ಮದ್, ಅಫ್ಸರ್ ಪಾಷಾ, ತಾಪಂ ಮಾಜಿ ಸದಸ್ಯ ಅತ್ತರ್ ಮತೀನ್ ಸೇರಿದಂತೆ ಇನ್ನಿತರರು ಕಂಬನಿ ಮಿಡಿದಿದ್ದಾರೆ.

ಅಂತಿಮ ದರ್ಶನ: ವಿಷಯ ತಿಳಿದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಭೇಟಿ ನೀಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಇನ್ನಿತರರು ಫಸಿಯೂದ್ದೀನ್ ಅಂತಿಮ ದರ್ಶನ ಪಡೆದು, ಅವರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಅಮಿತ್ ಷಾ ತರಾಟೆ

ಹತ್ಯೆಗೆ ಸಂಬಂಧಿಸಿದಂತೆ ಕೇಂದ್ರ ಗೃಹಸಚಿವರಿಗೆ ಮಾಹಿತಿ ಮತ್ತು ದಾಖಲೆಗಳನ್ನು ನಾನು ಮತ್ತು ಮುಖ್ಯಮಂತ್ರಿ ನೀಡಿದ್ದೇವೆ. ಕೇಂದ್ರ ಗೃಹ ಸಚಿವರು, ಹತ್ಯೆಯ ತನಿಖೆ ಬಗ್ಗೆ ನಾವು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಿದರು. ಅವರು ಕೆಲವು ಸಲಹೆ ಸೂಚನೆ ನೀಡಿದ್ದಾರೆ. ಮಂಗಳೂರು ಹತ್ಯೆ ಪ್ರಕರಣ ಕುರಿತಂತೆ ಸುದೀರ್ಘ ಮಾಹಿತಿ ಪಡೆದರು. ಎಲ್ಲವನ್ನೂ ಬಹಿರಂಗಪಡಿಸಲಾಗುವುದಿಲ್ಲ. ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ಬಗ್ಗೆ ಗೃಹ ಸಚಿವರ ಗಮನಕ್ಕೆ ಬಂದಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಆರೋಪಗಳ ಬಗ್ಗೆಯೂ ಅವರಿಗೆ ಗೊತ್ತಿದೆ. ಸರ್ಕಾರದ ಕಾರ್ಯವೈಖರಿ ಬಗ್ಗೆ ಅಮಿತ್ ಷಾಗೆ ತೃಪ್ತಿ ಇದೆ ಎಂದರು. ಫಾಜಿಲ್ ಹತ್ಯೆ ತನಿಖೆ ಮುಗಿಯುತ್ತ ಬಂದಿದೆ. ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆ ಆಗುತ್ತಿದೆ. ಎರಡು ಹತ್ಯೆ ಪ್ರಕರಣದಲ್ಲೂ ಪ್ರಮುಖ ಆರೋಪಿ ಯಾರು ಅನ್ನೋದು ಗೊತ್ತಾಗಿದೆ. ಮುಖ್ಯಮಂತ್ರಿ ಬದಲಾವಣೆ ವಿಚಾರ ಕೇವಲ ಊಹಾಪೋಹ ಅಷ್ಟೇ ಎಂದು ಹೇಳಿದರು.

ಕೊಡಗು ತತ್ತರ; ಹೆದ್ದಾರಿ ಬಂದ್

ಬೆಟ್ಟದಿಂದ ಬೃಹತ್ ಗಾತ್ರದ ಬಂಡೆಗಳ ಸಹಿತ ಮರಗಳು ದಾರಿಯುದ್ದಕ್ಕೂ ಉರುಳಿ ಬಿದ್ದಿದ್ದು, ಇದರಿಂದ ಭಾಗಮಂಡಲ-ಕರಿಕೆ ರಸ್ತೆ ಬಂದ್ ಆಗಿತ್ತು. ಬೆಟ್ಟ ಕುಸಿದ ಸ್ಥಳದಲ್ಲಿ ಅಂತರ್ಜಲ ಉಕ್ಕುತ್ತಿದೆ. ಜಲಸ್ಫೋಟಕ್ಕೆ ಇದು ಸಾಕ್ಷಿಯಾಗಿ, ಸ್ಥಳದಲ್ಲಿ 2 ಜೆಸಿಬಿ ಯಂತ್ರಗಳ ಸಹಾಯದಿಂದ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಧಾರಾಕಾರವಾಗಿ ಸುರಿಯುತ್ತಿರುವ ಮಳೆಯ ನಡುವೆಯೇ ಗುರುವಾರ ಸಂಜೆ ವೇಳೆಗೆ ಮರ, ಮಣ್ಣು, ಬಂಡೆಗಳ ತೆರವು ಕಾರ್ಯ ನಡೆದಿದೆ. ಮದೆನಾಡು ವ್ಯಾಪ್ತಿಯ ಬೆಟ್ಟತ್ತೂರು ಬಾಳೆಕಂಡಿ ಎಂಬಲ್ಲಿಯೂ ಜಲಸ್ಫೋಟವಾಗಿ ಭಾರೀ ಭೂಕುಸಿತ ಸಂಭವಿಸಿದೆ. ಮರಗಳು ಸಹಿತ ಮುರಿದು ಬಿದ್ದು, ರಸ್ತೆ ಸಂಚಾರ ಅಡ್ಡಿಯಾಗಿದೆ. ಪಂಚಾಯಿತಿ ವತಿಯಿಂದ ಮರಗಳ ತೆರವು ಕಾರ್ಯ ನಡೆಸಿ ರಸ್ತೆ ಸಂಚಾರವನ್ನು ಸುಗಮಗೊಳಿಸಲಾಗಿದೆ. ಭಾಗಮಂಡಲ ವ್ಯಾಪ್ತಿಯಲ್ಲಿಯೂ ಧಾರಾಕಾರ ಮಳೆ ಸುರಿದಿದ್ದು ಭಾಗಮಂಡಲ-ತಣ್ಣಿಮಾನಿ-ಕರಿಕೆ ರಸ್ತೆಯಲ್ಲಿ ಹತ್ತಾರು ಮರಗಳು ಮುರಿದು ಬಿದ್ದಿದ್ದು, ತೆರವು ಕಾರ್ಯ ನಡೆಸಲಾಗಿದೆ. ಭಾಗಮಂಡಲ ವ್ಯಾಪ್ತಿಯಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 83 ಮಿ.ಮೀ ಮಳೆ ಸುರಿದಿದೆ.

ಸೇತುವೆಗಳು ನೀರು ಪಾಲು: ಭೂ ಕಂಪನ ಪೀಡಿತ ಸಂಪಾಜೆ ವ್ಯಾಪ್ತಿಯ ದಬ್ಬಡ್ಕ ಗ್ರಾಮದ ವಿವಿಧ ಕಡೆಗಳಲ್ಲಿ 3 ಸಂಪರ್ಕ ಸೇತುವೆಗಳಿಗೆ ಭಾರೀ ಹಾನಿ ಸಂಭವಿಸಿದೆ. ದಬ್ಬಡ್ಕ-ಅಡ್ಡಹೊಳೆ ಮತ್ತು ದಬ್ಬಡ್ಕ-ಕೊಪ್ಪ ಸಂಪರ್ಕ ಸೇತುವೆಗಳಲ್ಲಿ ವಾಹನ, ಜನ ಸಂಚಾರ ಬಂದ್ ಆಗಿದೆ. ಭಾರೀ ಮಳೆಗೆ ಭೂ ಕುಸಿತವಾಗಿ ಮರದ ದಿಮ್ಮಿಗಳು ತೇಲಿ ಬಂದು ಸೇತುವೆಗೆ ಅಪ್ಪಳಿಸಿದ್ದು, ತಡೆಗೋಡೆಗಳು ಕುಸಿದು ಬಿದ್ದಿವೆ. ಉಕ್ಕಿ ಹರಿದ ಪ್ರವಾಹ ನೀರಿಗೆ ತಡೆಗೋಡೆಗಳ ಪಕ್ಕದ ಮಣ್ಣು ಕೊಚ್ಚಿ ಹೋಗಿದ್ದು, ತಾತ್ಕಾಲಿಕ ದುರಸ್ಥಿ ಕಾರ್ಯವೂ ಅಸಾಧ್ಯವಾಗಿ ಪರಿಣಮಿಸಿದೆ. ಹೀಗಾಗಿ ಸ್ಥಳೀಯ ನಿವಾಸಿಗಳು ಅಡಿಕೆ ಮರಗಳನ್ನು ಕಡಿದು ಸೇತುವೆಗೆ ಜೋಡಿಸಿ ಗ್ರಾಮಗಳಿಗೆ ಕಾಲು ಸೇತುವೆಯ ಮಾದರಿಯಲ್ಲಿ ಸಂಪರ್ಕ ಸಾಧಿಸಿದ್ದಾರೆ. ಮಳೆ ಹೆಚ್ಚಾಗಿ ನದಿ ನೀರು ಉಕ್ಕಿದರೆ ಈ ಮರದ ಸೇತುವೆಗಳು ಕೂಡ ಕೊಚ್ಚಿ ಹೋಗುವ ಆತಂಕ ಗ್ರಾಮಸ್ಥರನ್ನು ಕಾಡುತ್ತಿದೆ.

ಕಲ್ಲುಗುಂಡಿ ಜಲಾವೃತ: ಸಂಪಾಜೆ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿರುವ ಕಾರಣ ಕಲ್ಲುಗುಂಡಿಯಲ್ಲಿ ಬುಧವಾರ ರಾತ್ರಿ 3ನೇ ಬಾರಿಗೆ ಪ್ರವಾಹ ಉಕ್ಕೇರಿದೆ. ಮನೆಗಳು ಅಂಗಡಿಗಳು ಪ್ರವಾಹ ನೀರಿನಲ್ಲಿ ತೊಯ್ದು ಹೋಗಿವೆ. ಪರಿಣಾಮ ನಡುರಾತ್ರಿ 2 ಗಂಟೆಯವರೆಗೆ ಹೆದ್ದಾರಿಯಲ್ಲಿ ಎಲ್ಲಾ ರೀತಿಯ ವಾಹನ ಸಂಚಾರ ಬಂದ್ ಆಗಿತ್ತು. ನದಿ ನೀರಿನ ಪ್ರವಾಹ ಇಳಿಕೆಯಾದ ಬಳಿಕ ವಾಹನ ಸಂಚಾರ ಸಹಜ ಸ್ಥಿತಿಗೆ ಮರಳಿದೆ. ಪ್ರಸ್ತುತ ಈ ರಸ್ತೆಯಲ್ಲಿ ವಾಹನ ಸಂಚಾರ ಮುಂದುವರೆದಿದೆ.

ಉದ್ಯಮಿಗಳಿಗೆ ಎಲ್ಲಾ ರೀತಿಯ ಸಹಕಾರ

ಕಾಲವನ್ನು ಸ್ಥಾಪಿಸುವ ಕೆಲಸವನ್ನು ಎಲ್ಲರೂ ಒಗ್ಗಟ್ಟಾಗಿ ಮಾಡಬೇಕಿದೆ ಎಂದರು. ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ-ಮಹಾರಾಜರ ಕಾಲದಿಂದಲೂ ಪ್ರಗತಿಪರ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ವಾಣಿಜ್ಯ, ತಂತ್ರಜ್ಞಾನದ ಬೆಳವಣಿಗೆಗೆ ಒತ್ತು ನೀಡಲಾಗಿದೆ. ರಾಜ್ಯದಲ್ಲಿ ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ.ಕರ್ನಾಟಕ ಐಟಿಬಿಟಿ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಹಿಂದಿಕ್ಕುತ್ತಿದೆ. ದೇಶದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಕರ್ನಾಟಕ 1 ಟ್ರಿಲಿಯನ್ ಡಾಲರ್‌ನಷ್ಟು ಕೊಡುಗೆ ನೀಡಬೇಕೆನ್ನುವ ಗುರಿ ಇದೆ. ಇದಕ್ಕಾಗಿ ವಲಯವಾರು ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

ಮೈಸೂರು ಮಿತ್ರ

ಹುಣಸೂರಿನ ವಿವಿಧೆಡೆ ಸರ್ಕಾರಿ ಜಾಗ ಅತಿಕ್ರಮಣ

● ಪರವಾನಗಿ ಇಲ್ಲದೇ ಕಟ್ಟಡ ನಿರ್ಮಾಣ ● ಅಧಿಕಾರಿಗಳ ವಿರುದ್ಧ ನಗರಸಭೆ ಸದಸ್ಯರ ಆಕ್ರೋಶ

ಹುಣಸೂರು, ಆ.4– ನಗರದ ವಿವಿಧೆಡೆ ಸರ್ಕಾರಿ ಜಾಗ ಅತಿಕ್ರಮಿಸಿಕೊಂಡು ಕಟ್ಟಡ ನಿರ್ಮಿಸಿದ್ದರೂ, ಈ ಬಗ್ಗೆ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ನಗರಸಭೆಯ ಬಹುತೇಕ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ನಗರದ ಕಲ್ಪತರು ರಸ್ತೆಯಿಂದ ಕೋರ್ಟ್ ಸರ್ಕಲ್ ಕಡೆಗೆ ಹೋಗುವ ರಸ್ತೆಯ ಎಡ ಭಾಗದಲ್ಲಿ ಕೆಲವರು ಸರ್ಕಾರಿ 'ಬಿ' ಖರಾಬ್ 9 ಗುಂಟೆ ಜಾಗವನ್ನು ಅತಿಕ್ರಮಿಸಿಕೊಂಡು, ಯಾವುದೇ ಪರವಾನಗಿ ಇಲ್ಲದೇ ವಾಣಿಜ್ಯ ಮಳಿಗೆ ನಿರ್ಮಿಸಿದ್ದಾರೆ. ಸರ್ಕಾರಿ ಜಾಗ ವಶಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ, ತಹಸೀಲ್ದಾರ್ ಹಾಗೂ ಪೌರಾಯುಕ್ತರಿಗೆ 3 ಬಾರಿ ಪತ್ರ ಬರೆದಿದ್ದರೂ, ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸದಸ್ಯರಾದ ಸರವಣ, ಸತೀಶ್, ರಮೇಶ್ ಸೇರಿದಂತೆ ಬಹುತೇಕ ಸದಸ್ಯರು ಆರೋಪಿಸಿದರು.

ನಗರದ ಸರ್ವೇ ನಂ.241, 242 ರಲ್ಲಿರುವ 30 ಗುಂಟೆ ಏಕ ನಿವೇಶನವನ್ನು 6 ಭಾಗ ಮಾಡಿ ಅಕ್ರಮವಾಗಿ ಖಾತೆ ಮಾಡಿದ್ದಾರೆ. ಇದು ಕಾನೂನು ಬಾಹಿರ. ಇದನ್ನು ರದ್ದುಪಡಿಸಬೇಕೆಂದು ಸದಸ್ಯ ಸತೀಶ್ ಒತ್ತಾಯಿಸಿದರೇ, ಮಾರುತಿ ಬಡಾವಣೆಯಲ್ಲಿ 1 ಕೋಟಿ ರೂ.ಗಳಿಗೂ ಹೆಚ್ಚು ಬೆಲೆ ಬಾಳುವ 20x500 ಅಳತೆಯ ಸರ್ಕಾರಿ ಜಾಗ ಕಬಳಿಸಿದ್ದು, ಈ ಬಗ್ಗೆ ನಗರಸಭೆ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಅವರ ನಿರ್ಲಕ್ಷ್ಯತನಕ್ಕೆ ಸಾಕ್ಷಿ. ಇದರಿಂದ ಕೋಟ್ಯಾಂತರ ರೂ. ಆದಾಯ ನಷ್ಟವಾಗುತ್ತಿದೆ ಎಂದು ಸದಸ್ಯ ರಮೇಶ್ ದೂರಿದರು.



ಸಂಬಳ ನೀಡಿಲ್ಲ

ನೀರು ಸರಬರಾಜು ವಿಭಾಗದ ನೌಕರರಿಗೆ ಕಳೆದ 6 ತಿಂಗಳಿಂದ ಸಂಬಳ ನೀಡಿಲ್ಲ. ಅವರು ಪ್ರತಿಭಟನೆಗೆ ಇಳಿದರೆ ನಗರಾದ್ಯಂತ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು. ನೌಕರರಿಗೆ ಸಂಬಳ ನೀಡಿ ಎಂದು ಕೆಲ ಸದಸ್ಯರು ಸಭೆ ಗಮನಕ್ಕೆ ತಂದಾಗ, ಹೊರಗುತ್ತಿಗೆದಾರ ನಮಗೆ ಸರಿಯಾದ ಬಿಲ್ ಸಲ್ಲಿಸಿಲ್ಲ. ಈ ಕಾರಣ ಕಳೆದ 3 ತಿಂಗಳಿಂದ ಬಿಲ್ ಮಾಡಲು ಸಾಧ್ಯವಾಗಿಲ್ಲ. ಈ ಎಲ್ಲಾ ಸಮಸ್ಯೆಗೆ ಗುತ್ತಿಗೆದಾರನನ್ನೆ ಬದಲಿಸಿ, ಬದಲಿ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ಪೌರಾಯುಕ್ತ ರವಿಕುಮಾರ್ ತಿಳಿಸಿದರು.

ಹನಗೋಡು ರಸ್ತೆ ತಿರುವಿನಲ್ಲಿ ಖಾಸಗಿ ವ್ಯಕ್ತಿಯೊಬ್ಬರು ನಗರಸಭೆಯಿಂದ ಯಾವುದೇ ಲೈಸೆನ್ಸ್ ಪಡೆಯದೆ ಮೂರಂತಸ್ತಿನ ಕಟ್ಟಡ ನಿರ್ಮಿಸಿದ್ದಾರೆ. ಈ ಸಂಬಂಧ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸದಸ್ಯರು ಅಧಿಕಾರಿಗಳಿಗೆ ಒತ್ತಾಯಿಸಿದರು. ಇದೇ ರೀತಿ ನಗರದ ಹಲವೆಡೆ ಕೆಲವರು ತಮ್ಮ ಕಟ್ಟಡಕ್ಕೆ ನಲ್ಲಿ, ಯುಜಿಡಿ, ಕರೆಂಟ್ ಸಂಪರ್ಕವನ್ನು ಅಕ್ರಮವಾಗಿ ಪಡೆದಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸದಸ್ಯರು ಮತ್ತೊಮ್ಮೆ ಆಕ್ರೋಶ ವ್ಯಕ್ತಪಡಿಸಿದರು.

ಕತ್ತಲಲ್ಲಿ ವಾರ್ಡ್‌ಗಳು: ಅನೇಕ ವಾರ್ಡ್‌ಗಳಲ್ಲಿ ಬೀದಿ ದೀಪ ನಿರ್ವಹಣೆ ಇಲ್ಲದೇ ಜನರು ಕತ್ತಲಲ್ಲಿ ತಿರುಗಾಡುವಂತಾಗಿದೆ ಎಂದು ಸದಸ್ಯರು ಆರೋಪಿಸಿದಾಗ, ಬೀದಿ ದೀಪ ನಿರ್ವಹಣೆಯಲ್ಲಿ ಗುತ್ತಿಗೆದಾರ ಸರಿಯಾಗಿ ಕಾರ್ಯ ನಿರ್ವಹಿಸದ್ದರಿಂದ 4 ತಿಂಗಳಿಂದ ಬಿಲ್ ನೀಡಿಲ್ಲ. ಬೇರೆ ಗುತ್ತಿಗೆದಾರನ ನೇಮಕಕ್ಕಾಗಿ ಬದಲಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ ಎಂದು ಪೌರಾಯುಕ್ತ ರವಿಕುಮಾರ್ ತಿಳಿಸಿದರು.

ದೊಡ್ಡ ಹುಣಸೂರು ಸರ್ವೇ ನಂಬರ್ 73ರಲ್ಲಿ ಆಶ್ರಯ ಬಡಾವಣೆಗಾಗಿ 2 ಎಕರೆ ಭೂಮಿ ಕಾಯ್ದಿರಿಸಿದ್ದು, ಇಲ್ಲಿ ಖಾಸಗಿಯವರು ರಾತ್ರೋ ರಾತ್ರಿ ಶೆಡ್‌ಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಜಾಗ ಗುರುತಿಸಿ ಸುತ್ತ ಬೇಲಿ ಹಾಕಿ ಬೇರೆಯವರು ಅತಿಕ್ರಮ ಪ್ರವೇಶಿಸದಂತೆ ಕ್ರಮ ವಹಿಸಬೇಕು ಎಂದು ಸದಸ್ಯ ಸತೀಶ್ ಸೇರಿದಂತೆ ಬಹುತೇಕ ಸದಸ್ಯರು ತಿಳಿಸಿದರು.

ಉಳಿದಂತೆ ಸಭೆಯಲ್ಲಿ ಪಟ್ಟಣದ ತಾಲೂಕು ಕಚೇರಿ ಪಕ್ಕದಲ್ಲಿರುವ ಹಿಂದೂ ಸ್ಮಶಾನಕ್ಕೆ ಮೂಲ ಸೌಕರ್ಯ ಕಲ್ಪಿಸುವಂತೆ ಸದಸ್ಯ ಕೃಷ್ಣರಾಜಗುಪ್ತ ಒತ್ತಾಯಿಸಿದರು.

ಜಿಲ್ಲಾಧಿಕಾರಿ ಆದೇಶದಂತೆ ನಗರಸಭೆ ವ್ಯಾಪ್ತಿಯ 136 ವಾಣಿಜ್ಯ ಮಳಿಗೆಗಳನ್ನು ಹರಾಜು ಮಾಡಿ 6 ತಿಂಗಳು ಕಳೆದರೂ ಈ ಬಗ್ಗೆ ಕ್ರಮ ಕೈಗೊಳ್ಳದೆ ಮಳಿಗೆ ಬಾಡಿಗೆದಾರರು ನ್ಯಾಯಾಲಯಕ್ಕೆ ಹೋಗಲು ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ಸದಸ್ಯ ಗಣೇಶ್, ಕೃಷ್ಣರಾಜಗುಪ್ತ ಮತ್ತಿತರ ಸದಸ್ಯರು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಂದಾಯ ಅಧಿಕಾರಿ ಸಿದ್ದರಾಜು, 2022 ಫೆ.22ರಂದು ಹರಾಜು ಪ್ರಕ್ರಿಯೆ ನಡೆದಿದ್ದು, ಮಾ.7ರಂದು ಜಿಲ್ಲಾಧಿಕಾರಿ ಅನುಮೋದನೆಗೆ ಸಲ್ಲಿಸಿದ್ದೇವೆ. ಜೂ.24 ರಂದು ಜಿಲ್ಲಾಧಿಕಾರಿಗಳ ಅನುಮೋದನೆ ಸಿಕ್ಕಿದೆ 38 ಮಂದಿ ಡಿಡಿ ಕಟ್ಟಿದ್ದಾರೆ 7 ಮಂದಿಗೆ ನೋಂದಣಿಯಾಗಿದೆ. 71 ಮಂದಿಗೆ 2 ಬಾರಿ ನೋಟಿಸ್ ನೀಡಲಾಗಿದೆ. ಮಳಿಗೆ ಖಾಲಿ ಮಾಡಿಸಿ ಬೀಗ ಹಾಕುವ ತೀರ್ಮಾನವನ್ನು ಸಹ ತೆಗೆದುಕೊಳ್ಳಲಾಗಿದೆ. 12 ಜನ ಬಾಡಿಗೆ ದಾರರು, ಬಾಡಿಗೆ ಹೆಚ್ಚೆಂದು ಪ್ರಶ್ನಿಸಿ ಕೋರ್ಟಿಗೆ ಹೋಗಿದ್ದಾರೆ ಎಂದರು.

ನಗರಸಭೆಗೆ ಸೇರಿದ ಜನತಾ ಚಿತ್ರ ಮಂದಿರದ ಟೆಂಡರ್‌ದಾರನಿಂದ 55 ಲಕ್ಷ ಬಾಡಿಗೆ ಬಾಕಿ ಮತ್ತು ದಂಡ ವಸೂಲಾತಿಗಾಗಿ, ಏನು ಕ್ರಮ ಕೈಗೊಂಡಿದ್ದೀರಿ ಎಂದು ಸದಸ್ಯರು ಪ್ರಶ್ನಿಸಿದಾಗ, ಬಾಡಿಗೆ ವಸೂಲಾತಿಗಾಗಿ ಲೋಕ ಅದಾಲತ್‌ಗೆ ಹೋಗಿದ್ದೇವೆ ಎಂದು ಪೌರಾಯುಕ್ತರು ಸಭೆಗೆ ತಿಳಿಸಿದರು.

ನಗರೋತ್ಥಾನ ಅನುದಾನ ಬಡ್ಡಿಗೆ ಬಿಟ್ಟಿದ್ದಿರಾ?

ನಗರದ ಬಹುತೇಕ ಎಲ್ಲಾ ವಾರ್ಡ್‌ಗಳ ರಸ್ತೆಗಳು ಕಿತ್ತು ಹೋಗಿದೆ. ಬೀದಿ ದೀಪ, ನೀರಿನ ಸಮಸ್ಯೆಗಳಿದ್ದರೂ, ಅವುಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ಕಳೆದ 8 ತಿಂಗಳ ಹಿಂದೆ ನಗರೋತ್ಥಾನ ಕಾರ್ಯಕ್ರಮದಡಿ ಬಿಡುಗಡೆಯಾದ 25 ಕೋಟಿ ಅನುದಾನವನ್ನು ಬಡ್ಡಿಗೆ ಬಿಟ್ಟಿದ್ದೀರಾ? ಎಂದು ಸದಸ್ಯರಾದ ಗಣೇಶ್ ಮತ್ತು ಹರೀಶ್ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೌರಾಯುಕ್ತ ರವಿಕುಮಾರ್ ರಸ್ತೆ ಮತ್ತು ಚರಂಡಿ ಕೆಲಸ ಮಾಡಲು ಮಾತ್ರ ನಗರಸಭೆಗೆ ಅವಕಾಶ ನೀಡಿದ್ದು, ಉಳಿದ ಎಲ್ಲಾ ಕೆಲಸಗಳನ್ನು ಪಿಎಂಸಿಯವರೇ ಮಾಡುವುದಾಗಿ ತಿಳಿಸಿರುವುದರಿಂದ ಹಣ ಬಳಕೆ ಮಾಡಲು ಸಾಧ್ಯವಾಗಿಲ್ಲ ಎಂದು ಸಭೆಗೆ ತಿಳಿಸಿದರು.

ಸ್ವಾತಂತ್ರ್ಯೋತ್ಸವ ಅದ್ದೂರಿಯಾಗಿ ಆಚರಿಸಿ



ಕೆ.ಆರ್.ನಗರ, ಆ.4– ತಾಲೂಕಿನ ಅಭಿವೃದ್ಧಿ ಕೆಲಸಗಳು ಮತ್ತು ಸರ್ಕಾರದ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳು ಟ್ಯಾಬ್ಲೋಗಳ ಮೂಲಕ ಜನರಿಗೆ ಮನ ಮುಟ್ಟುವಂತೆ ತೋರಿಸುವ ಮೂಲಕ ಜಿಲ್ಲೆಯಲ್ಲಿಯೇ ಮಾದರಿಯಾಗಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಬೇಕು ಎಂದು ಶಾಸಕ ಸಾ.ರಾ. ಮಹೇಶ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪಟ್ಟಣದ ಆಡಳಿತ ಸೌಧದ ಸಭಾಂಗಣದಲ್ಲಿ ಆ.15 ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಪ್ರತಿಯೊಂದು ಇಲಾಖೆಯು ಸರ್ಕಾರದ ಯೋಜನೆಗಳನ್ನು ಅಚ್ಚುಕಟ್ಟಾಗಿ ಜನರಿಗೆ ತಿಳಿಸುವಂತಿರಬೇಕು ಹಾಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಅದ್ದೂರಿಯಾಗಿ ಆಚರಿಸಬೇಕು ಎಂದು ತಿಳಿಸಿದರು. ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳು ಎರಡು ಇದ್ದರೂ ಸಾಲಿಗ್ರಾಮದಲ್ಲಿ ಸರಳ, ಕೆ.ಆರ್.ನಗರದಲ್ಲಿ ಅದ್ದೂರಿಯಾಗಿ ಆಚರಿಸಬೇಕು ಹಾಗೂ ಸಭೆಗೆ ಗೈರಾದ ಅಧಿಕಾರಿಗಳನ್ನು ದೂರವಾಣಿ ಕರೆ ಮಾಡಿ ಕರೆಸಿಕೊಂಡು ಒಂದೊಂದು ಜವಾಬ್ದಾರಿ ವಹಿಸುವ ಮೂಲಕ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ ಎಂದು ಅವರು ಸಲಹೆ ನೀಡಿದರು.

ಬೆಳಗ್ಗೆ 8 ಗಂಟೆಯೊಳಗೆ ಮೆರವಣಿಗೆ ಮತ್ತು ಪಥಸಂಚಲನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಲಘು ಉಪಹಾರ ಮಾಡಿಸುವಂತೆ ತಿಳಿಸಿದ ಶಾಸಕರು 8 ಗಂಟೆಗೆ ಶ್ರೀಕೃಷ್ಣರಾಜೇಂದ್ರ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ಪ್ರಾರಂಭವಾಗುವ ಮೆರವಣಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕೃಷ್ಣರಾಜೇಂದ್ರ ವೃತದ ಮೂಲಕ ಪುರಸಭೆ ವೃತ್ತದಲ್ಲಿ ಹಾದೂ ಸಿ.ಎಂ.ರಸ್ತೆ ಮೂಲಕ ಡಾ.ರಾಜಕುಮಾರ್ ಬಾನಂಗಳದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬಂದು ಸೇರಬೇಕು ಎಂದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ರಾಜೀವ್‌ಗಾಂಧಿ ಜನಸಂಪರ್ಕ ಕೇಂದ್ರ ಕಟ್ಟಡಕ್ಕೆ ಭೂಮಿಪೂಜೆ

ಗ್ರಾಮೀಣಾಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿ: ಶಾಸಕ ಅಶ್ವಿನ್‌ಕುಮಾರ್

ತಿ.ನರಸೀಪುರ ಆ.4– ಗ್ರಾಮೀಣಾಭಿವೃದ್ಧಿಗೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಹಕಾರಿಯಾಗಿದ್ದು, ಇದರಿಂದ ಗ್ರಾಪಂಗಳು ಸುಸಜ್ಜಿತ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಶಾಸಕ ಎಂ.ಅಶ್ವಿಕುಮಾರ್ ತಿಳಿಸಿದರು.

ತಾಲೂಕಿನ ಹನುಮನಾಳು ಗ್ರಾಮದಲ್ಲಿ ಗುರುವಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನ 35 ಲಕ್ಷ ರೂ. ವೆಚ್ಚದ ರಾಜೀವ್ ಗಾಂಧಿ ಜನಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನರೇಗಾ ಯೋಜನೆ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿಯಲ್ಲಿ ಬಲ ತುಂಬಿದೆ ಎಂದರು.

ಪಂಚಾಯತ್ ರಾಜ್ ವ್ಯವಸ್ಥೆ ಬೆಳೆದ ಹಿನ್ನೆಲೆಯಲ್ಲಿ ಗ್ರಾಪಂಗಳಲ್ಲಿ ಸಾರ್ವಜನಿಕ ಸೇವಾ ಸೌಲಭ್ಯಗಳನ್ನು ವಿಸ್ತರಿಸಿದ ಪರಿಣಾಮ ಕಿರಿದಾದ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹನುಮನಾಳು ಗ್ರಾಪಂಗೆ ಸುಸಜ್ಜಿತ ಕಟ್ಟಡದ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ನರೇಗಾ ಯೋಜನೆಯಡಿ ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಸರಿಯಾಗಿದೆ. ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿಯೊಂದಿಗೆ ಕಟ್ಟಡ ನಿರ್ಮಾಣ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಲಭ್ಯವಾಗಲಿ ಎಂದರು.



ಈ ವೇಳೆ ಗ್ರಾಪಂ ಅಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಉಪಾಧ್ಯಕ್ಷೆ ಲಕ್ಷ್ಮಮ್ಮ, ಸದಸ್ಯರಾದ ಹೆಚ್.ಕೆ.ದೀಪಕ್, ಟಿ.ಸುರೇಶ್, ಹೆಚ್.ಎಂ. ಕುಮಾರ್, ಹೆಚ್.ಎಸ್.ಸುರೇಂದ್ರ, ಶಂಕರ್, ಸರೋಜಮ್ಮ ರುಕ್ಮಿಣಿ, ಎಸ್.ಗಿರಿಜಾ, ಪಿಡಿಓ ಆರ್.ಮಾದೇಶ, ಕಾರ್ಯದರ್ಶಿ ಪಿ.ಸೋಮಣ್ಣ, ಜೆಡಿಎಸ್ ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ಜಿಪಂ ಮಾಜಿ ಸದಸ್ಯ ಎಸ್.ವಿ.ಜಯಪಾಲ ಭರಣಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕಸಾಯಿಖಾನೆಗೆ ಹರಕೆ ಗೋವುಗಳ ಸಾಗಣೆ ವೀಡಿಯೋ ವೈರಲ್: ಪ್ರಕರಣ ದಾಖಲು

ನಂಜನಗೂಡು, ಆ.4– ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಭಕ್ತರು ಹರಕೆ ರೂಪದಲ್ಲಿ ಅರ್ಪಿಸುವ ಗೋವುಗಳನ್ನು ಕಸಾಯಿಖಾನೆಗೆ ಅಕ್ರಮವಾಗಿ ಸಾಗಾಣೆ ಮಾಡುವ ವ್ಯವಸ್ಥಿತ ಜಾಲ ಅವ್ಯಾಹತವಾಗಿದ್ದು, ಬುಧವಾರ ತಡರಾತ್ರಿ ಗೋವುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಇದೀಗ ವೀಡಿಯೋ ವೈರಲ್ ಆಗಿದೆ.

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ, ಈ ರೀತಿಯ ಅಕ್ರಮ ದಂಧೆ ನಡೆಯುತ್ತಿರುವುದು ಭಕ್ತರನ್ನು ಘಾಸಿಗೊಳಿಸಿದೆ. ಇನ್ನು ಈ ಕಟುಕರ ಜಾಲವನ್ನು ಪತ್ತೆ ಹಚ್ಚಿ ಬಂಧಿಸುವಂತೆ ಯುವ ಬ್ರಿಗೇಡ್ ವಿಭಾಗೀಯ ಸಂಚಾಲಕ ಎಸ್.ಚಂದ್ರಶೇಖರ್ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಶ್ರೀಕಂಠೇಶ್ವರಸ್ವಾಮಿ ದೇಗುಲದ ಹಿಂಭಾಗದ ಅಂಗಡಿ ಬೀದಿಯಲ್ಲಿ ಬುಧವಾರ ತಡರಾತ್ರಿ 1 ಗಂಟೆ ಸುಮಾರಿನಲ್ಲಿ ಕಟುಕರ ತಂಡ ಗೋವುಗಳನ್ನು ತುಂಬಿಕೊಂಡು ಹೋಗಲು ನಂಬರ್ ಪ್ಲೇಟ್ ಇಲ್ಲದ ಗೂಡ್ಸ್ ವಾಹನದಲ್ಲಿ ಬಂದು ಹೊಂಚು ಹಾಕಿದೆ. ಹಗ್ಗದ ಸಹಾಯದಿಂದ ಅವುಗಳನ್ನು ಸೆರೆ ಹಿಡಿದು ವಾಹನದಲ್ಲಿ ತುಂಬಿದ್ದಾರೆ. ಈ ವೇಳೆ ಗೋವುಗಳು ಕಿರುಚಾಡುವುದನ್ನು ಕೇಳಿ ಎಚ್ಚರಗೊಂಡ ಸ್ಥಳೀಯರು ಹೊರ ಬಂದು ಗೋವುಗಳನ್ನು ಸೆರೆ ಹಿಡಿದು ತುಂಬುತ್ತಿದ್ದ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಅಲ್ಲದೇ ಸ್ಥಳೀಯರು ಪ್ರಶ್ನಿಸುತ್ತಿದ್ದಂತೆ ಗಾಬರಿಗೊಂಡ ಕಟುಕರು ವಾಹನದಲ್ಲಿ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಈ ವೇಳೆ ವಾಹನದ ಒಳಗಡೆ ಸುಮಾರು ಮೂರ್‍ನಾಲ್ಕು ಗೋವುಗಳನ್ನು ತುಂಬಿ ತೆಗೆದುಕೊಂಡು ಹೋಗಿರುವುದು ವೀಡಿಯೋದಲ್ಲಿ ಸೆರೆಯಾಗಿದೆ.



ಈ ವೀಡಿಯೋ ಎಲ್ಲೆಡೆ ವೈರಲ್ ಆಗುತ್ತಿದ್ದಂತೆ ಹಿಂದೂಪರ ಸಂಘಟನೆ ಸೇರಿದಂತೆ ದೇಗುಲದ ಭಕ್ತವಲಯದಿಂದ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ಗೋಶಾಲೆ ತೆರೆಯಲಿ: ಶ್ರೀಕಂಠೇಶ್ವರ ಸ್ವಾಮಿಗೆ ಹರಕೆ ಹೊತ್ತ ಭಕ್ತರು ಲಿಂಗ ಮುದ್ರೆ ಒತ್ತಿ ಕರುಗಳನ್ನು ದೇಗುಲದ ಬಳಿ ಬಿಡುವ ಸಂಪ್ರದಾಯ ತಲತಲಾಂತರದಿಂದ ನಡೆದುಕೊಂಡು ಬಂದಿದೆ. ಮಾಸಿಕ ಕೋಟ್ಯಾಂತರ ರೂ. ಆದಾಯವಿರುವ ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಗೋಶಾಲೆ ತೆರೆದು ಅವುಗಳ ಸಾಕಾಣಿಕೆ ಮಾಡುವ ನಿಟ್ಟಿನಲ್ಲಿ ಸರ್ಕಾರ ತುರ್ತು ಕ್ರಮವಹಿಸಬೇಕು ಎಂದು ಯುವ ಬ್ರಿಗೇಡ್ ವಿಭಾಗೀಯ ಸಂಚಾಲಕ ಎಸ್.ಚಂದ್ರಶೇಖರ್ ಆಗ್ರಹಿಸಿದ್ದಾರೆ.

ಮಾಂಸಕ್ಕಾಗಿ ಗೋವುಗಳನ್ನು ಹತ್ಯೆ ಮಾಡುವ ಸಲುವಾಗಿ ರಾತ್ರೋರಾತ್ರಿ ಹೊಂಚು ಹಾಕಿ ಸಾಗಾಣೆ ಮಾಡುವ ದುರುಳರನ್ನು ಪತ್ತೆ ಹಚ್ಚಿ ಸದೆಬಡಿಯಬೇಕು. ಇಂತಹವರ ವಿರುದ್ಧ ಗೋಹತ್ಯೆ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕಠಿಣ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿದ್ದರೂ ಕಡಿವಾಣ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು. ದೇಗುಲದ ಗೋವುಗಳ ರಕ್ಷಣೆಗಾಗಿ ಗೋಶಾಲೆ ತೆರೆಯುವಂತೆ ಆಗ್ರಹಿಸಿ ಶೀಘ್ರದಲ್ಲೇ ಸಹಿ ಸಂಗ್ರಹ ಅಭಿಯಾನ ಮೂಲಕ ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದ್ದಾರೆ.

ದನಗಾಹಿ ಮೇಲೆ ಹುಲಿ ದಾಳಿ: ಗಂಭೀರ ಗಾಯ

ನಂಜನಗೂಡು, ಆ.4– ದನಗಾಹಿಯೊಬ್ಬರ ಮೇಲೆ ಹುಲಿ ದಾಳಿ ನಡೆಸಿದ ಪರಿಣಾಮ ಆತ ಗಂಭೀರವಾಗಿ ಗಾಯಗೊಂಡಿರುವ ಘಟನೆ ಸರಗೂರು ತಾಲೂಕಿನ ಹಾದನೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ಹಾದನೂರು ಗ್ರಾಮದ ಪ್ರಸನ್ನಕುಮಾರ್ (25) ಗಾಯಗೊಂಡವರು. ಇವರು ಎಂದಿನಂತೆ ಬೆಳಗ್ಗೆ ಹಾದನೂರು ಗ್ರಾಮದ ನಂಜದೇವನಬೆಟ್ಟ ಸಮೀಪದ ಜಮೀನೊಂದರ ಬಳಿ ದನ ಮೇಯಿಸಲು ತೆರಳಿದ್ದರು. ಈ ವೇಳೆ ಹುಲಿ ಜಾನುವಾರುವಿನ ಮೇಲೆ ದಾಳಿ ನಡೆಸಿ ಜಾನುವಾರನ್ನು ಹೊತ್ತೊಯ್ದಿದೆ. ಈ ವೇಳೆ ಅಡ್ಡ ಬಂದ ಪ್ರಸನ್ನಕುಮಾರ್ ಮೇಲೆ ದಾಳಿ ನಡೆಸಿದ ಪರಿಣಾಮ ಆತ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ದನಗಾಹಿ ಮೇಲೆ ಮತ್ತೆ ಹುಲಿ ದಾಳಿ ನಡೆಸಿರುವುದು ಅಕ್ಕಪಕ್ಕದ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಕೂಡಲೇ ಹುಲಿ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಾಲಬಾಧೆ: ರೈತ ಆತ್ಮಹತ್ಯೆ

ಹುಣಸೂರು, ಆ.4– ಸಾಲಬಾಧೆ ತಾಳಲಾರದೇ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ರಾಮೇನಹಳ್ಳಿಯಲ್ಲಿ ನಡೆದಿದೆ.



ಗ್ರಾಮದ ಈಶ್ವರ್(58) ಸಾವನ್ನಪ್ಪಿದವರು. ಇವರಿಗೆ ಒಟ್ಟು 2.5 ಎಕರೆ ಜಮೀನಿದ್ದು, ಕೃಷಿಗಾಗಿ ಹುಣಸೂರಿನ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 3 ಲಕ್ಷ ಹಾಗೂ ಕೋಷಮಟ್ಟಂ ಫೈನಾನ್ಸ್‌ನಲ್ಲಿ 200 ಗ್ರಾಂ ಒಡವೆಯನ್ನಿಟ್ಟು 5 ಲಕ್ಷ ರೂ. ಸಾಲ ಪಡೆದಿದ್ದರಲ್ಲದೆ ಸುಮಾರು 2 ಲಕ್ಷ ರೂ. ಕೈ ಸಾಲ ಸೇರಿದಂತೆ 10 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದರು. ಕೃಷಿ ಕೈ ಕೊಟ್ಟಿದ್ದು, ಸಾಲ ತೀರಿಸಲಾಗದೆ ಬವಣೆ ಪಡುತ್ತಿದ್ದರು. ಇದರಿಂದ ಹತಾಶೆಗೊಳಗಾದ ಇವರು ಆ.1ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ವ್ಯವಸಾಯಕ್ಕೆಂದು ತಂದಿದ್ದ ಕ್ರಿಮಿನಾಶಕದ ಕಾಳಿನ ಮಾತ್ರೆ ಸೇವಿಸಿ ಅಸ್ವಸ್ಥರಾಗಿದ್ದು, ಬಳಿಕ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತರ ಭಾವ ಮೈದುನ ಉಮೇಶ್ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಶಿಕ್ಷಕ ಜವರಯ್ಯ ನಿಧನ



ಸರಗೂರು, ಆ.4– ಪಟ್ಟಣದ ಬಿಡಗಲು ನಿವಾಸಿ, ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಶಿಕ್ಷಕ ಜವರಯ್ಯ (56) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಮೂಲಗಳು ತಿಳಿಸಿವೆ. ಜವರಯ್ಯನವರ ನಿಧನದ ಸುದ್ದಿ ತಿಳಿದ ವಿದ್ಯಾರ್ಥಿಗಳು ಮೃತರ ನಿವಾಸಕ್ಕೆ ತೆರಳಿ ಅಂತಿಮ ನಮನ ಸಲ್ಲಿಸಿದರು.

ಚಿರತೆ ಪ್ರತ್ಯಕ್ಷ ಹಿನ್ನೆಲೆ: ಗಿಡಗಂಟಿಗಳ ತೆರವು

ಹೆಚ್.ಡಿ.ಕೋಟೆ, ಆ.4– ಪಟ್ಟಣದ ಸ್ಟೇಡಿಯಂ ಬಡಾವಣೆಯಲ್ಲಿ ಚಿರತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಪುರಸಭಾಧಿಕಾರಿಗಳು ಬಡಾವಣೆಯಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿದರು.



ಇಲ್ಲಿನ ಸ್ಟೇಡಿಯಂ ಬಡಾವಣೆ ನಿವಾಸಿ ದಾಸನಾಯಕ ಎಂಬುವರ ಮನೆಗೆ 2 ಚಿರತೆಗಳು ನುಗ್ಗಿ ಸಾಕು ನಾಯಿಗಳನ್ನು ಹೊತ್ತು ಹೋಗಿದ್ದವು. ಈ ದೃಶ್ಯ ಸೋಲಾರ್ ರಾಘವೇಂದ್ರ ಅವರ ಮನೆಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಇದರಿಂದ ಭಯಗೊಂಡ ಅಲ್ಲಿನ ನಿವಾಸಿಗಳು, ಬಡಾವಣೆಯಲ್ಲಿ ಗಿಡಗಂಟಿಗಳು ಹೆಚ್ಚಾಗಿ ಬೆಳೆದಿವೆ. ಹಂದಿಗಳ ಹಾವಳಿ ಹೆಚ್ಚಾಗಿದೆ. ಇದೀಗ ಚಿರತೆಗಳು ಕಾಣಿಸಿಕೊಂಡಿದ್ದು, ಕೂಡಲೇ ಗಿಡಗಂಟಿಗಳನ್ನು ತೆರವು ಮಾಡುವಂತೆ ಪುರಸಭಾಧಿಕಾರಿಗಳು ಹಾಗೂ ಪುರಸಭೆ ಜನಪ್ರತಿನಿಧಿಗಳಿಗೆ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಗಿಡಗಂಟಿಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿದ್ದಾರೆ. ನಂತರ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಚಿರತೆ ಕಾಣಿಸಿಕೊಂಡ ಜಾಗದಲ್ಲಿ ಸಂಪೂರ್ಣ ಗಿಡಗಂಟೆಗಳನ್ನು ತೆರವುಗೊಳಿಸಿದ್ದೇವೆ. ನಂತರ ಪಟ್ಟಣದ ಎಲ್ಲಾ ವಾರ್ಡ್‌ಗಳನ್ನು ಸ್ವಚ್ಛತೆ ಮಾಡಲು ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಬೈಲಕುಪ್ಪೆಯಲ್ಲಿ ಭಾರೀ ಮಳೆ

ಲಾಮಾ ಕ್ಯಾಂಪ್ ರಸ್ತೆ ಜಲಾವೃತ, ಬೌದ್ಧ ಮಂದಿರದ ಕಾಂಪೌಂಡ್ ಕುಸಿತ, ಕೆರೆ ತುಂಬಿ ಹರಿದ ನೀರು, ಜನಜೀವನ ಅಸ್ತವ್ಯಸ್ತ, ಡಿಸಿ ಸ್ಥಳ ಪರಿಶೀಲನೆ







ಬೈಲಕುಪ್ಪೆ,ಆ.4–ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯಲ್ಲಿ ಭಾರೀ ಮಳೆ ಸುರಿದ ಪರಿಣಾಮ ಮನೆಗಳಿಗೆ ನೀರು ನುಗ್ಗಿ, ಕೆರೆಗಳು ಹಾಗೂ ಕೊಲ್ಲಿಗಳು ತುಂಬಿ ರಸ್ತೆಯಲ್ಲಿ ಹರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಬೈಲಕುಪ್ಪೆಯ ಟಿಬೆಟಿಯನ್ ನಿರಾಶ್ರಿತರ ಕ್ಯಾಂಪಿನಲ್ಲಿ ಬುಧವಾರ 2 ಗಂಟೆಗಳ ಕಾಲ ಸುರಿದ ಭಾರೀ ಮಳೆಯಿಂದಾಗಿ, ಇಲ್ಲಿನ ಲಾಮಾ ಕ್ಯಾಂಪ್‌ಗೆ ತೆರಳುವ ರಸ್ತೆ ಸಂಪೂರ್ಣ ಜಲಾವೃತಗೊಂಡು ಪ್ರಯಾಣಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಗಳು ಕೆರೆಯಂತಾಗಿವೆ.

ಬೌದ್ಧ ಮಹಿಳಾ ಮಂದಿರದ ಕಾಂಪೌಂಡ್ ಮಳೆಗೆ ಸಂಪೂರ್ಣ ಕುಸಿದಿದ್ದು, ಮಂದಿರದ ಮುಂಭಾಗ ಕೆರೆಯಂತೆ ನೀರು ನಿಂತು ಗೃಹೋಪಯೋಗಿ ವಸ್ತುಗಳು ನೀರಿನಲ್ಲಿ ತೇಲಾಡುತ್ತಿದ್ದ ದೃಶ್ಯ ಕಂಡು ಬಂತು. ಬೈಲಕುಪ್ಪೆಯ ಕೈಲಾಸಪುರ ಕೆರೆ ತುಂಬಿ ನೀರು ರಸ್ತೆಗೆ ಹರಿದು ಸಮೀಪದಲ್ಲಿರುವ ಜಮೀನಿಗೆ ನುಗ್ಗಿದ್ದರಿಂದ ವ್ಯವಸಾಯ ಮಾಡಿದ್ದ ಶುಂಠಿ ಬೆಳೆ ನಾಶವಾಗಿದೆ. ಈ ಕೆರೆಯಲ್ಲಿ ಟಿಬೆಟಿಯನ್ನರು ಮೀನುಗಳನ್ನು ಸಾಕಿದ್ದು, ಮೀನುಗಳೆಲ್ಲಾ ಹರಿಯುವ ನೀರಿನಲ್ಲಿ ಕೊಚ್ಚಿ ಹೋಗಿವೆ. ರಾತ್ರಿ 11ವರೆಗೂ ರಸ್ತೆ ಮಾರ್ಗವಾಗಿ ಬರುತ್ತಿದ್ದ ಮೀನುಗಳನ್ನು ಬಕೆಟ್‌ನಲ್ಲಿ ಹಿಡಿದುಕೊಂಡು ಪುನಃ ಕೆರೆಗೆ ಬಿಡುವ ಚಟುವಟಿಕೆಯಲ್ಲಿ ತೊಡಗಿದ್ದರು.

ಜಿಲ್ಲಾಧಿಕಾರಿ ಭೇಟಿ: ಪಿರಿಯಾಪಟ್ಟಣ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಾದ ದೊಡ್ಡಹೊನ್ನೂರು, ಲಮಾ ಕ್ಯಾಂಪ್, ಗುಡ್ಡೇನಹಳ್ಳಿ, ದೊಡ್ಡ ಹರವೆ, ಕೈಲಾಸಪುರ, ಮರಡಿಯೂರು ಬೆಣಗಾಲು, ಬೆಣಗಲು ಬೋವಿ ಕಾಲೋನಿಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಗುರುವಾರ ಬೆಳಗ್ಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ಉಪ ತಹಸೀಲ್ದಾರ್ ಮಹೇಶ್, ಕಂದಾಯಾಧಿಕಾರಿ ಪ್ರದೀಪ್, ವಿಎಗಳಾದ ನವೀನ್, ಸುನೀಲ್ ಇದ್ದರು.



K.H.B Site for Sale
30x40 Near Citizen School, Nanjanagud,
Rate: 2600/Sqft
9448322796

OFFICE / COMMERCIAL SPACE FOR RENT
12x22 Ft Ground Floor & First Floor, D. Subbaiah Road, near Marimallappa College.
Mob: **8147833038**

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಎಂ.ಎಂ. ಪ್ರಾಪರ್ಟೀಸ್ ಗ್ರೂಪ್ ಕಂಪನಿಯ ಪಾಲುದಾರರಾದ ಶ್ರೀ ಹೆಚ್.ಆರ್. ತೇಜಸ್ ರವರು ಮೈಸೂರು ತಾಲೂಕು, ಕಸಬಾ ಹೋಬಳಿ, ಲಿಂಗಾಬುಧಿ ಪಾಳ್ಯ ಗ್ರಾಮದ ವಾಸಿಗಳಾದ ಲೇಟ್ ನಾರಾಯಣ ರವರ ಧರ್ಮಪತ್ನಿ ಶ್ರೀಮತಿ ಪಾರ್ವತಿ ರವರಿಂದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂಬರ್ 60 ಬ್ಲಾಕ್ ನಂ. 43 ರಲ್ಲಿನ ವಿಸ್ತೀರ್ಣ 1–00 ಎಕರೆ ಜಮೀನನ್ನು ಕ್ರಯಕ್ಕೆ ಪಡೆದುಕೊಳ್ಳಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನಲ್ಲಿ ಯಾರಾದರೂ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳು, ಹಕ್ಕು, ಹಿತಾಸಕ್ತಿ, ಭಾಗಾಂಶ, ವಾರಸುದಾರಿಕೆ, ಅಥವಾ ಕೋರ್ಟ್ ಡಿಕ್ರಿ ಹೊಂದಿರುವವರು ಇದ್ದ ಪಕ್ಷದಲ್ಲಿ ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 07 ದಿವಸಗಳೊಳಗಾಗಿ ಈ ಕೆಳಗಿನ ವಿಳಾಸಕ್ಕೆ ನೀವಾಗಲೀ, ನಿಮ್ಮ ವಕೀಲರ ಮೂಲಕವಾಗಲೀ ಲಿಖಿತ ರೂಪದಲ್ಲಿ ತಕರಾರನ್ನು ಸಲ್ಲಿಸಲು ತಿಳಿಸಿರುತ್ತೇವೆ.

ಮೇಲ್ಕಂಡ ಕಾಲಾವಧಿ ಒಳಗಾಗಿ ಯಾರಿಂದಲೂ ಯಾವುದೇ ರೀತಿಯ ತಕರಾರು ಅಥವಾ ಆಕ್ಷೇಪಣೆಗಳು ಬಾರದಿದ್ದಲ್ಲಿ, ಯಾರಿಂದಲೂ ಯಾವುದೇ ರೀತಿಯ ತಕರಾರುಗಳು ಹಾಗೂ ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ, ನಮ್ಮ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆ. ಆನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ.

ಷೆಡ್ಯೂಲ್ ಸ್ವತ್ತಿಗೆ ಚಕ್ಕುಬಂದಿ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂಬರ್ 60 ಬ್ಲಾಕ್ ನಂ. 43 ರಲ್ಲಿ ವಿಸ್ತೀರ್ಣ 1–00 ಎಕರೆ ಜಮೀನು. ಪೂರ್ವಕ್ಕೆ: ಹನುಮಯ್ಯ ಬೋವಿ ರವರ ಜಮೀನು ; ಪಶ್ಚಿಮಕ್ಕೆ: ಅಬ್ಬ ಬೋವಿ ರವರ ಜಮೀನು ; ಉತ್ತರಕ್ಕೆ: ಕೆರೆ ; ದಕ್ಷಿಣಕ್ಕೆ: ಕೆ.ಇ.ಬಿ. ರವರ ಸ್ವತ್ತು.

ಈ ಮೇಲ್ಕಂಡ ಜಮೀನು ಮಾತ್ರ ಕ್ರಯದ ವ್ಯವಹರಣೆಗೆ ಒಳಪಟ್ಟಿರುತ್ತದೆ.

ಸಹಿ/– ಎಲ್. ತಿಮ್ಮೇಗೌಡ, ಬಿ.ಎಸ್ಸಿ, ಎಲ್.ಎಲ್.ಬಿ.
ವಕೀಲರು, ಕೆ.ಎ.ಆರ್. 793/96–22/3/96
ನಂ. 278, ಕರ್ನಾಟಕ ಬ್ಯಾಂಕ್ ಪಕ್ಕ, ವಿಜಯನಗರ 2ನೇ ಹಂತ, ಮೈಸೂರು. ಫೋ: **8971548064**

14ನೇ ವರ್ಷದ ಸವಿನೆನಪು



ಶ್ರೀ ಚಿಕ್ಕನೀಲೆಗೌಡರು (ದಾಸನಕೊಪ್ಪಲು)
ಎಸ್‌ಎಲ್‌ವಿ ಬೋರ್ಡಿಂಗ್ & ಲಾಡ್ಜಿಂಗ್, ಎಸ್.ಡಿ.ಆರ್. ಟ್ರೇಡರ್ಸ್ (ಕೆ.ಎಸ್. ಗದ್ದಿಗೆ)

ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಸಣ್ಣಮ್ಮ APMC ಮಾಜಿ ಸದಸ್ಯರು, ಹುಣಸೂರು
ಲಕ್ಷ್ಮಿ, ಮಮತ ಮತ್ತು ಕೆಂಚೇಗೌಡ
ಸವಿತ ಮತ್ತು ಸುರೇಶ್ ಎನ್.
ಅನಿತ ಮತ್ತು ಕೃಷ್ಣೇಗೌಡ
ಅಶ್ವಿನಿ ಮತ್ತು ಪ್ರವೀಣ್, ಅರುಣ್, ರೋಹಿತ್,
ನಿತಿನ್ ಮತ್ತು ಮೊಮ್ಮಕ್ಕಳು, ದಾಸನಕೊಪ್ಪಲು

ಶ್ರೀಮತಿ ಪ್ರೇಮ ಮತ್ತು ಸಿದ್ದರಾಮೇಗೌಡ,
ಗ್ರಾ.ಪಂ. ಮಾಜಿ ಸದಸ್ಯರು, ಮರಟಿಕ್ಯಾತನಹಳ್ಳಿ
ಪಲ್ಲವಿ ಮತ್ತು ಸಿದ್ದು
ಕಾವ್ಯ ಮತ್ತು ಮಹೇಶ್
ಕೋಮಲ ಮತ್ತು ಪೈ. ಕಿರಣ್
ನಿಶಾಂತ್ ಎಸ್.ಗೌಡ ಮತ್ತು ಮೊಮ್ಮಕ್ಕಳು
ರೂಪನಗರ, ದಾಸನಕೊಪ್ಪಲು



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

JSS Mahavidyapeetha
JSS POLYTECHNIC FOR THE DIFFERENTLY ABLED
JSS Technical Institutions' Campus, Mysuru - 570 006
Ph : 0821 - 2548315

JSS PDA/EST/2022-23 Date: 05-08-2022

APPOINTMENT NOTIFICATION

Applications are invited from the qualified and experienced candidates for the following posts. Application form may be obtained from the **office of the Director, Technical Education Division, JSS Mahavidyapeetha, Mysuru.** The filled application along with attested copies of relevant Marks Cards and testimonials should be reached to the undersigned **on or before 20-08-2022.**

Sl. No.	Name of the Post	No. of Posts	Qualification and Experience
1.	Lecturer in ADFT	02	Master Degree in Clothing / Garment / Fashion Technology Or Bachelor Degree in Science / Fashion Technology / Garment Technology with First Class Diploma in CDDM / ADFT
2.	Instructor in ADFT	01	Diploma in CDDM / ADFT with Minimum 3 Years Experience in the relevant field

Sd/- Executive Secretary



ABOVE OFFERS AVAIL AT THE FOLLOWING LOCATIONS

T & C Apply*

Elite Mall - 63668 48094 | Yelwala - 70190 93021 | Hootgalli - 90088 23650 | N.R. Mohalla - 63630 31412 | Rajkumar Road - 83104 64581 | Hebbal - 97422 76770 | Bogadi - 7019029903
J.P.Nagara - 9632445300 / 9986581021, 7760346339 / 8886471016 | 100Ft. Road - 9663180623 | Sharadadevinagara - 81476 11948 | K.T. Street - 7259488421 / 9972807873 | Nanjangud - 9916452453, 9341945165
T-narasipura - 9964878597 | Hullahalli - 9845726595 | Sargur - 8747864278 | Begur - 9663057877 | Ch Nagara Elite Mall - 7411814401 | Ch nagra - 9620177113 | Gundlupet - 9164130267 | Kollegala - 9739495356
Yalandur - 9591708628 | Hanur - 9611545981 | Mandya - 9844395900, 9916668680 | Ramanagara - 9008860702 | Nagmangala - 7760585254 , 9880494406 | Maddur - 9743198708 | Malavalli - 7022222274
K R Pet - 9945866902 | Pandavapura - 9844281000 | Kanakapura - 9663871305Srirangapatna - 8050147010 | Channapatna - 9901023574 | Madikeri - 9611102112 | Kushalnagar - 9901399629
Sullia - 9535337108 | Hunsur - 9008785456 | Gonikoppa - 7760232698 | Periyapatna - 9538549905 | Somavarpet - 7795410801 | Kr Nagara - 9900634652